॥ ಶ್ರೀ ಗುರು ಬಸವಲಿಂಗಾಯ ನಮಃ ॥



# ಲಿಂಗಾಯತ ದರ್ಶನ

ಸಂಪುಟ : ೭ ಜೂನ್ ೨೦೨೦ ಸಂಚಿಕೆ : ೬

ಮಾರ್ಗದರ್ಶನ
**ಪೂಜ್ಯಶ್ರೀ ಡಾ. ತೋಂಟದ ಸಿದ್ಧರಾಮ ಮಹಾಸ್ವಾಮಿಗಳು**
ರುದ್ರಾಕ್ಷಿಮಠ, ನಾಗನೂರು–ಬೆಳಗಾವಿ
ತೋಂಟದಾರ್ಯ ಸಂಸ್ಥಾನಮಠ, ಗದಗ–ಡಂಬಳ

**ಸಂಪಾದಕ**
**ಡಾ॥ ಎಸ್. ಜಿ. ಮಹಾದೇವಪ್ಪ**

**ಸಹ ಸಂಪಾದಕ**
**ಡಾ॥ ರಾಮಕೃಷ್ಣ ಮರಾಠೆ**

**ಸಂಪಾದಕ ಮಂಡಳಿ**

ಡಾ॥ ಗುರುಲಿಂಗ ಕಾಪಸೆ — ಡಾ॥ ಸಿ. ಕೆ. ನಾವಲಗಿ
ಶ್ರೀ ಆರ್. ಪಿ. ಅಪರಾಜ — ಡಾ॥ ವಿ. ಎಸ್. ಮಾಳಿ
ಡಾ॥ ಬಸವರಾಜ ಜಗಜಂಪಿ — ಶ್ರೀ ಬಿ. ಬಿ. ಹೊಸಮನಿ
ಡಾ. ಎಂ. ಎಸ್. ಹುಲ್ಲೋಳಿ — ಶ್ರೀಮತಿ ನೀಲಗಂಗಾ ಚರಂತಿಮಠ

**ಪ್ರಕಾಶಕರು**
ಕಾರ್ಯದರ್ಶಿ ಶ್ರೀ ಸಿದ್ಧರಾಮೇಶ್ವರ ಶಿಕ್ಷಣ ಸಂಸ್ಥೆಯ
**ವಚನ ಅಧ್ಯಯನ ಕೇಂದ್ರ**
ನಾಗನೂರು ಶ್ರೀ ರುದ್ರಾಕ್ಷಿಮಠ, ಶಿವಬಸವನಗರ
ಬೆಳಗಾವಿ–೫೯೦೦೧೦
ದೂ:೦೮೩೧–೨೪೦೭೧೫೭ *email:basavaguru@rediffmail.com*
*Web: www.rudrakshimath.in*

**ಚಂದಾವಿವರ**

| | | |
|---|---|---|
| ಮಹಾಪೋಷಕರು | ರೂ. | ೧೦,೦೦೦=೦೦ |
| ಪೋಷಕರು | ರೂ. | ೫೦೦೦=೦೦ |
| ಆಜೀವ | ರೂ. | ೩೦೦೦=೦೦(೨೦ ವರ್ಷ) |
| ಆರು ವರ್ಷದ | ರೂ. | ೧೦೦೦=೦೦ |
| ಒಂದುವರ್ಷದ | ರೂ. | ೨೦೦=೦೦ |
| ಬಿಡಿ ಪ್ರತಿ | ರೂ. | ೨೦=೦೦ |

ಚಂದಾಹಣವನ್ನು ನಗದು ಅಥವಾ **'ವಚನ ಅಧ್ಯಯನ ಕೇಂದ್ರ'** ಹೆಸರಿನಲ್ಲಿ ಕ್ರಾಸ್ ಮಾಡಿದ ಡಿ.ಡಿ/ಚೆಕ್‌ಮುಖಾಂತರ**"ನಿರ್ದೇಶಕರು, ವಚನ ಅಧ್ಯಯನ ಕೇಂದ್ರ ನಾಗನೂರು ರುದ್ರಾಕ್ಷಿಮಠ, ಶಿವಬಸವ ನಗರ, ಬೆಳಗಾವಿ–೫೯೦ ೦೧೦"** ಈ ವಿಳಾಸಕ್ಕೆ ಕಳಿಸಬೇಕಾಗಿ ವಿನಂತಿ.

**ಅಂತರಂಗದೊಳಗೆ.....**

* ಸಂಪಾದಕೀಯ ೨
* ವಚನಾರ್ಥ–ಚಿಂತನ ೪
  • **ಡಾ. ಸಿದ್ಧರಾಮ ಸ್ವಾಮಿಗಳು**
* ಒಕ್ಕುಮಿಕ್ಕ ಪ್ರಸಾದ : ಹಾಗೆಂದರೇನು? ೬
  • **ಡಾ. ವೀರಣ್ಣ ದಂಡೆ**
* ಬಸವಣ್ಣ ಎತ್ತಲ್ಲ, ವಿಶ್ವಮಾನವ ೧೨
  • **ಡಾ. ಬಸವಲಿಂಗ ಪಟ್ಟದ್ದೇವರು**
* ಬಸವಣ್ಣ ಎತ್ತಲ್ಲ ೧೪
  • **ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು**
* ಆನೆಯ ಜರಿದು ಕೋಣವನೇರಿದರೆ ಸವದತ್ತಿಮಠರು ೧೭
  • **ಅಕ್ಕ ಅನ್ನಪೂರ್ಣತಾಯಿ**
* ಶಿವನಾಟದ ಸವಿಗಂಡ ಗುಂಡಯ್ಯ ೧೯
  • **ಡಾ. ಸಿದ್ಧಯ್ಯ ಪುರಾಣಿಕ**
* ಕಟ್ಟಿದ ಲಿಂಗವ ಬಿಟ್ಟು ಬೆಟ್ಟದ ಲಿಂಗವೇಕೆಂದಾತ... ೨೩
  • **ವೆಂಕಟೇಶ ಕೆ. ಜನಾದ್ರಿ**
* ದಾಸೋಹ–ಪರಿಕಲ್ಪನೆ ೨೭
  • **ಸಂಗಮೇಶ ಎಸ್. ಜವಾದಿ**
* ನಾನು ಯಾರು? ಎಂಬ ಆಳ–ನಿರಾಳ ೨೯
  • **ಡಾ. ಕೆ. ಆರ್. ಮಂಜುಳ**

ಇಲ್ಲಿಯ ಲೇಖನಗಳ ಅಭಿಪ್ರಾಯಗಳು ಲೇಖಕರವೇ ಹೊರತು ಪತ್ರಿಕೆಯ ಅಭಿಪ್ರಾಯಗಳಲ್ಲ. **–ಸಂ**

ಸಂಪಾದಕೀಯ

# ಕೊರೋನಾ ಕಸ ಮತ್ತು ಕಾಯಕದ ಬೆಳೆ

ಜಗತ್ತಿನ ತುಂಬ ಕೊರೋನಾದ್ದೇ ಮಾತು. ಓದುವ ಪತ್ರಿಕೆಗಳಲ್ಲಿ, ನೋಡುವ ಟಿ. ವ್ಹಿ. ಗಳಲ್ಲಿ, ಸಾಮಾಜಿಕ ಜಾಲತಾಣಗಳಲ್ಲಿ ಕೊರೋನಾ ಸುದ್ದಿಗಳೇ ಹರಿದಾಡುತ್ತಿವೆ. ಪ್ರಳಯದ ಕಸವಾಗಿ ಕಾಡುತ್ತಿರುವ ಈ ಕ್ಷುದ್ರ ವೈರಸ್ ಜನರ ದಿನಚರಿಯನ್ನೇ ಬದಲಿಸಿ ಬಿಟ್ಟಿದೆ. ನಮ್ಮ ದೇಶದಲ್ಲೀಗ ನಾಲ್ಕು ಹಂತದ ಲಾಕ್‌ಡೌನ್‌ಗಳು ಮುಗಿದವು. ಮೊದಲ ಮೂರು ಲಾಕ್‌ಡೌನ್ ಸಂದರ್ಭಗಳಲ್ಲಿ 'ಮನೆಯಲ್ಲಿಯೇ ಇರಬೇಕು, ನಿಮ್ಮನ್ನು ನೀವು ರಕ್ಷಿಸಿಕೊಳ್ಳಬೇಕು' ಎಂಬ ಘೋಷಣೆ ಕೇಳಿ ಬರುತ್ತಿತ್ತು. ಈಗ 'ಕೊರೊನಾ ಜೊತೆಗೆ ಹೊಂದಿಕೊಂಡು ಬಾಳುವುದು ಅನಿವಾರ್ಯ' ಎಂಬ ಘೋಷಣೆ ಕೇಳಿಬರುತ್ತಿದೆ. ಅಂತೂ ಲಾಕ್‌ಡೌನ್ ಹಂತ ಹಂತವಾಗಿ ಸಡಿಲುಗೊಂಡು ಬದುಕು ಸಹಜತೆಯತ್ತ ಹೊರಳುತ್ತಿದೆ. ಆದರೆ ಜೀವರಕ್ಷಣೆ, ಜೀವನ ನಿರ್ವಹಣೆಯ ಹೊಣೆಗಾರಿಕೆ ಮಾತ್ರ ಮೊದಲಿಗಿಂತಲೂ ಹೆಚ್ಚಾಗಿದೆ.

ಜೂನ್ ತಿಂಗಳು ಎಂದರೆ ಹೊಸ ಶೈಕ್ಷಣಿಕ ವರ್ಷದ ಆರಂಭವೆಂದೇ ಅರ್ಥ. ವಿದ್ಯಾರ್ಥಿಗಳ ಚಟುವಟಿಕೆಗಳೆಲ್ಲ ಗರಿಗೆದರುವುದು ಇದೇ ತಿಂಗಳಲ್ಲಿ. ಶಾಲೆ–ಕಾಲೇಜುಗಳು ಆರಂಭವಾಗುತ್ತವೆ. ಪುಟ್ಟ ಪುಟಾಣಿಗಳು ವಿದ್ಯಾರ್ಥಿ ಜೀವನದ ದೀಕ್ಷೆ ತೊಡುವ ಸಡಗರದಲ್ಲಿರುತ್ತಾರೆ. ಉಳಿದ ವಿದ್ಯಾರ್ಥಿಗಳು ರಜೆ ಮುಗಿಸಿ ಹೊಸ ವರ್ಗಗಳಿಗೆ ಹೋಗಲು ಸಿದ್ಧತೆ ನಡೆಸಿರುತ್ತಾರೆ. ಎಸ್. ಎಸ್. ಎಲ್. ಸಿ. ವಿದ್ಯಾರ್ಥಿಗಳು ಫಲಿತಾಂಶಕ್ಕಾಗಿ ಕಾಯುತ್ತಿರುವ, ಕಾಲೇಜು ಶಿಕ್ಷಣಕ್ಕಾಗಿ ಓಡಾಡುವಂಥ ದೃಶ್ಯಗಳು ಜೂನ್ ತಿಂಗಳಲ್ಲಿ ಸಾಮಾನ್ಯ. ಒಂದರ್ಥದಲ್ಲಿ ವಿದ್ಯಾರ್ಥಿಗಳ ಭವಿಷ್ಯದ ದೃಷ್ಟಿಯಿಂದ ಮಹತ್ವದ ತಿಂಗಳವಿದು. ಆದರೆ ಕೊರೋನಾ ವೈರಸ್‌ದಿಂದಾಗಿ ಪ್ರಸಕ್ತ ಸಾಲಿನ ಜೂನ್ ತಿಂಗಳಲ್ಲಿ ಅಂಥ ಯಾವ ಚಟುವಟಿಕೆಗಳೂ ಗೋಚರಿಸುತ್ತಿಲ್ಲ. ಕೊರೋನಾ ಅಬ್ಬರದಲ್ಲಿ ಮಕ್ಕಳು ಮನೆಯಂಗಳಕ್ಕೂ ಕಾಲಿಡಲು ಭಯಪಡುವಂತಾಗಿದೆ. ಪಾಲಕರಾದರೂ 'ಮಕ್ಕಳ ವಿದ್ಯಾಭ್ಯಾಸದ ಭವಿಷ್ಯವೇನು?' ಎಂದು ಆತಂಕಪಡುವಂತಾಗಿದೆ.

ಮುಖ್ಯವಾದ ಸಂಗತಿ ಎಂದರೆ ಎಸ್. ಎಸ್. ಎಲ್. ಸಿ. ಪರೀಕ್ಷೆ ನಡೆಸುವುದು ಹೇಗೆ? ಎಂಬುದು. ಪರೀಕ್ಷೆ ನಡೆಸುವುದಕ್ಕಾಗಿ ಸರಕಾರ ಸಿದ್ಧತೆ ನಡೆಸಿದೆ. ಮಕ್ಕಳ ಆರೋಗ್ಯ ಮತ್ತು ಹಿತಚಿಂತನೆಯ ದೃಷ್ಟಿಯಿಂದ ಕೆಲವು ಶಿಕ್ಷಣತಜ್ಞರು, ಪಾಲಕರು ಪರೀಕ್ಷೆ ನಡೆಸದಿರಲು ಒತ್ತಾಯಿಸುತ್ತಿದ್ದಾರೆ. ಪರೀಕ್ಷೆ ಸಂದರ್ಭದಲ್ಲಿ ಸ್ವಚ್ಛತೆ ಮತ್ತು ಸುರಕ್ಷಿತ ಅಂತರ ಕಾಯ್ದುಕೊಳ್ಳುವುದು ಅಷ್ಟೊಂದು ಸುಲಭದ ಕೆಲಸವಲ್ಲವೆಂದು, ಒಂದು ವೇಳೆ ಕೊರೋನಾ ಸೋಂಕು ಹರಡಿದರೆ ಮುಂದೇನು ಗತಿಯೆಂಬ ಚಿಂತೆಯೂ ಕೆಲವರನ್ನು ಬಾಧಿಸುತ್ತಿದೆ. ಪರೀಕ್ಷಾರ್ಥಿಗಳ ಪ್ರಗತಿ, ಅರ್ಹತೆ ಕುರಿತ ವಿವರಗಳು ಆಯಾ ಹೈಸ್ಕೂಲಗಳಲ್ಲಿ ಇದ್ದೇ ಇರುತ್ತದೆ. ಅದನ್ನೇ ಆಧರಿಸಿ ಅವರನ್ನು ಉತ್ತೀರ್ಣ ಮಾಡಿ, ಅವರ ಮುಂದಿನ ವಿದ್ಯಾಭ್ಯಾಸಕ್ಕೆ ಅನುಕೂಲ ಕಲ್ಪಿಸಬೇಕೆಂಬ ಒತ್ತಡವೂ ಇದೆ. ಒಟ್ಟಿನಲ್ಲಿ ಎಸ್. ಎಸ್. ಎಲ್. ಸಿ. ಪರೀಕ್ಷೆ ಪಾರುಗಾಣಿಸುವುದು ಸರಕಾರ ಮತ್ತು ಶಿಕ್ಷಣ ಇಲಾಖೆಗೆ ದೊಡ್ಡ ಸವಾಲಾಗಿ ಪರಿಣಮಿಸಿದೆಯೆಂದು ಹೇಳಬೇಕು.

ಎರಡನೆಯ ಸಂಗತಿಯೆಂದರೆ ಪ್ರಾಥಮಿಕ, ಪೂರ್ವಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗಾಗಿ ಆನ್‌ಲೈನ್ ಮೂಲಕ ಪಾಠ ಮಾಡುವ ಏರ್ಪಾಡಿಗೆ ಸರಕಾರ ಮುಂದಾಗಿದೆ. ಗ್ರಾಮೀಣ ಭಾಗದ ಬಡಮಕ್ಕಳು ಈ ವ್ಯವಸ್ಥೆಗೆ ಹೇಗೆ ಹೊಂದಿಕೊಳ್ಳಬಲ್ಲರೆಂಬುದು ನಮ್ಮ ಮುಂದಿರುವ ದೊಡ್ಡ ಪ್ರಶ್ನೆ. ಕೊರೋನಾ ಹಾವಳಿಯಲ್ಲಿ ವಿದ್ಯಾರ್ಥಿಗಳ ಬದುಕು ಯೋಚಿಸಿದಷ್ಟು ಗೊಂದಲಮಯವಾಗಿಯೇ ಕಾಣುತ್ತಿದೆ.

ಕೊರೋನಾ ಸೃಷ್ಟಿಸಿದ ಗಂಡಾಂತರಗಳಲ್ಲಿ ವಲಸೆ ಕಾರ್ಮಿಕರ ಬದುಕು ಅತ್ಯಂತ ಗಂಭೀರವಾಗಿದೆ. ಒಂದು ಕಡೆಗೆ ಜನಜೀವನ ಸಹಜತೆಯತ್ತ ಹೊರಳುತ್ತಿದ್ದರೂ, ಇನ್ನೊಂದು ಕಡೆಗೆ ವಲಸೆ ಕಾರ್ಮಿಕರು ತಮ್ಮ ತಮ್ಮ ಊರು, ಮನೆಗಳನ್ನು ಸೇರಲು ಬಸ್‌ನಿಲ್ದಾಣ, ರೈಲು ನಿಲ್ದಾಣಗಳಲ್ಲಿ ತಂಡೋಪತಂಡವಾಗಿ ಕಾದು ಕುಳಿತಿದ್ದಾರೆ. ಅನೇಕ ಜನರು ಹಸಿವು ನೀರಡಿಕೆ ಲೆಕ್ಕಿಸದೆ ಕಾಲು ಹಾದಿ ತುಳಿಯುತ್ತಿದ್ದಾರೆ; ಪಡಬಾರದ ಕಷ್ಟ ಪಡುತ್ತಿದ್ದಾರೆ. ಕೊರೋನಾ ಸೋಂಕಿನ ದೃಷ್ಟಿಯಿಂದ ಇವರು ಎಷ್ಟು ಸುರಕ್ಷಿತ? ಮತ್ತು ಇವರು ಪ್ರವೇಶಿಸುವ ಊರುಗಳು ಎಷ್ಟು

ಸುರಕ್ಷಿತವೆಂಬ ಪ್ರಶ್ನೆ ಸರಕಾರಗಳಿಗೆ ತಲೆನೋವಾಗಿ ಪರಿಣಮಿಸಿದೆ. ಅವರಿಲ್ಲದೆ ನಗರಜೀವನವು ಇನ್ಮುಂದೆ ದುಸ್ತರವಾಗಲಿದೆ. ಶ್ರಮಜೀವಿಗಳಾದರೂ ಸಮಾಧಾನದಿಂದ ಯೋಚಿಸಿ ಹೆಜ್ಜೆ ಇಡಬೇಕಾಗಿದೆ.

ಇದು, ಕುಂಬಾರ ಗುಂಡಯ್ಯ, ಅಂಬಿಗರ ಚೌಡಯ್ಯನವರ ಜಯಂತಿ ತಿಂಗಳು. ಕಳೆದ ತಿಂಗಳು ಬಸವಣ್ಣನವರ ಜಯಂತಿಯನ್ನು ಸರಳವಾಗಿ ಅರ್ಥಪೂರ್ಣವಾಗಿ ಆಚರಿಸಿದೆವು. ಬಸವಣ್ಣನವರೆಂದರೆ ಸರಳತೆ, ಬಸವಣ್ಣನವರೆಂದರೆ ಪಾರದರ್ಶಕತೆ, ನಡೆ–ನುಡಿಗಳ ಸಾಮರಸ್ಯ, ಕಾಯಕ, ಭಕ್ತಿ, ದಾಸೋಹ. ಬಸವಣ್ಣನವರೆಂದರೆ ಕಲ್ಯಾಣ. ೧೨ನೆಯ ಶತಮಾನದಲ್ಲಿ ಬಸವಣ್ಣನವರು ಮೌಲ್ಯಗಳ ಪ್ರತಿನಿಧಿಯಾಗಿ ಬದುಕಿದರು. ಸಮಾಜದಲ್ಲಿ ಮೌಲ್ಯಗಳನ್ನು ಪಸರಿಸಿದರು. ಇಂಥ ಮಹಾಮಾನವತಾವಾದಿ ಬಸವಣ್ಣನವರ ಕುರಿತು ಸಣ್ಣ ಮಾತುಗಳನ್ನಾಡಿದರೆ, ಆಡಿದವರೇ ಸಣ್ಣವರಾಗುತ್ತಾರೆ. ಅದರಿಂದ ಬಸವಣ್ಣನವರ ವ್ಯಕ್ತಿತ್ವ ಇನ್ನಷ್ಟು ಉಜ್ವಲವಾಗಿ ಬೆಳಗುತ್ತದೆ. ಈ ಹಿನ್ನೆಲೆಯಲ್ಲಿ ಪೂಜ್ಯದ್ವಯರಿಂದ ಮೂಡಿ ಬಂದ ಲೇಖನಗಳು ಗಮನಾರ್ಹವಾಗಿವೆ.

ಶರಣ ಚಳುವಳಿಯಲ್ಲಿ ಅಂಬಿಗರ ಚೌಡಯ್ಯನವರದು ಎದ್ದು ಕಾಣುವ ವ್ಯಕ್ತಿತ್ವ. ನೈತಿಕ ಬದುಕು, ಸಮಾನತೆಯ ಸಮಾಜ ಕಟ್ಟುವುದಕ್ಕಾಗಿ ಅನ್ಯಾಯವನ್ನು, ಅಸಮತೆಯನ್ನು ಉಗ್ರವಾಗಿ ಪ್ರತಿಭಟಿಸುತ್ತಾರೆ. ಬಂಡಾಯದ ಧ್ವನಿಯಿಂದ ಅವರ ವಚನಗಳು ಜೀವಶಕ್ತಿ ಪಡೆಯುತ್ತವೆ.

**ಜಾತಿ ವಿಚಾರ ನೀತಿ ವಿಚಾರ ಸಮಯ ವಿಚಾರವೆಂಬ**
**ತ್ರಿವಿಧವ ಹಿಡಿದು ಬಿಡದೆ**
**ಉತ್ತಮ ಮಧ್ಯಮ ಕನಿಷ್ಠವೆಂಬುವ ಕಾಲಿಗೆ**
**ಮಾನವ ಕಟ್ಟಿ ಸಿಕ್ಕಿಸಿ**
**ಸರ್ವ ಸಮತೆಯ ಮರೆತೊಡಾತ**
**ನಾಯಕ ನರಕಿ.....**

ಎನ್ನುತ್ತಾರೆ ಅಂಬಿಗರ ಚೌಡಯ್ಯ. ಜಾತಿ, ಧರ್ಮ ಆಧರಿಸಿ ಜನರನ್ನು ಉತ್ತಮ, ಮಧ್ಯಮ, ಕನಿಷ್ಠ ಎಂದು ಭೇದ ಭಾವ ಮಾಡಿದವರಿಗೆ ನರಕ ಕಟ್ಟಿಟ್ಟ ಬುತ್ತಿ ಎಂದು ಅವರು ಪ್ರತಿಪಾದಿಸುತ್ತಾರೆ.

ಶರಣ ಚಳುವಳಿ ಎಂದರೆ ಅದು ಕಾಯಕ ಜೀವಿಗಳ ಚಳುವಳಿ, ಶ್ರಮಜೀವಿಗಳ ಚಳುವಳಿ. ತರ ತರದ ಶ್ರಮಜೀವಿಗಳು ಅದರಲ್ಲಿ ಪಾಲ್ಗೊಂಡಿದ್ದರು. ಅಂಬಿಗರ ಚೌಡಯ್ಯ, ಮಡಿವಾಳ ಮಾಚಯ್ಯ, ಮೇದಾರ ಕೇತಯ್ಯ, ನುಲಿಯ ಚಂದಯ್ಯ, ಹಡಪದ ಅಪ್ಪಣ್ಣ, ಮೋಳಿಗೆ ಮಾರಯ್ಯ, ಜೇಡರ ದಾಸಿಮಯ್ಯ, ಕೊಟ್ಟಣದ ರೆಮ್ಮೆವ್ವೆ, ತುರುಗಾಹಿ ರಾಮಣ್ಣ, ವೈದ್ಯ ಸಂಗಣ್ಣ, ಕುಂಬಾರ ಗುಂಡಯ್ಯ, ಗಾಣದ ಕಲ್ಲಪ್ಪ, ಮಕತದ ಭೀಮಣ್ಣ, ಸುಂಕದ ಬಂಕಣ್ಣ, ಮಾದಾರ ಚನ್ನಯ್ಯ, ಡೋಹರ ಕಕ್ಕಯ್ಯ, ಸಮಗಾರ ಹರಳಯ್ಯ ಹೀಗೆ ಹಲವಾರು ವೃತ್ತಿಯ ಶ್ರಮಜೀವಿಗಳು ಕಲ್ಯಾಣದಲ್ಲಿ ಸೇರಿ ಕಾಯಕ ಮತ್ತು ದಾಸೋಹ ತತ್ವಗಳಿಗೆ ಮಹತ್ವ ತಂದರು. ಇಂದು ಇಂಥ ಕಾಯಕಜೀವಿಗಳನ್ನು ಸ್ಮರಿಸುವ ಮೂಲಕ ಕಾಯಕವನ್ನು ಪ್ರೋತ್ಸಾಹಿಸುವ, ಕಾಯಕಕ್ಕೆ ಗೌರವ ತಂದುಕೊಡುವ ಕೆಲಸ ನಡೆಯಬೇಕು.

ಕೊರೋನಾದ ಕಾರಸ್ಥಾನದಿಂದ, ಲಾಕ್‌ಡೌನ್‌ದಿಂದಾಗಿ ಅನೇಕ ವೃತ್ತಿಯ ಶ್ರಮಜೀವಿಗಳು ಇಂದು ಆರ್ಥಿಕ ಸಂಕಷ್ಟದಲ್ಲಿದ್ದಾರೆ. ಗುಡಿ ಕೈಗಾರಿಕೆಗಳು ಸಂಕಷ್ಟದಲ್ಲಿವೆ. ಇವರೆಲ್ಲರ ಯೋಗಕ್ಷೇಮ ನೋಡಿಕೊಳ್ಳುವುದು ಸಮಾಜದ ಮತ್ತು ಆಡಳಿತದ ಜವಾಬ್ದಾರಿಯಾಗಿದೆ. ಇವರ ಬದುಕನ್ನು, ನಾಡಿನ ಪರಂಪರೆಯನ್ನು ಧ್ಯಾನಿಸಿ, ಸರಕಾರವು ಮಾರ್ಗದರ್ಶಿ ಸೂತ್ರಗಳನ್ನು ವಿಶೇಷ, ಅನುದಾನವನ್ನು ಜಾರಿಗೊಳಿಸಬೇಕು. ಇವರೆಲ್ಲರಿಗೆ ಕೊರೋನಾದ ಜೊತೆಗೆ ಬದುಕುವ ಶಕ್ತಿಯನ್ನು, ವಿವೇಕವನ್ನು ತಂದುಕೊಡಬೇಕಾಗಿದೆ. ಅಲ್ಲದೆ ಕಾಯಕ ಜೀವಿಗಳ ಧ್ವನಿಯಾದ 'ಲಿಂಗಾಯತ ದರ್ಶನ'ವನ್ನು ಎಂದಿನಂತೆ ಸ್ವಾಗತಿಸಿ, ಪ್ರೋತ್ಸಾಹಿಸುತ್ತಿರೆಂದು ನಂಬಿದ್ದೇವೆ.

■■

# ವಚನಾರ್ಥ–ಚಿಂತನ

● ಡಾ. ಸಿದ್ಧರಾಮ ಸ್ವಾಮಿಗಳು

**ಕದಳಿಯ ಬನವ ಹೊಕ್ಕು ಹೊಲಬ ತಿಳಿಯದನ್ನಕ್ಕ**
**ಬಯಲು ಗಾಳಿಯ ಹಿಡಿದು ಗಟ್ಟಿ ಮಾಡದನ್ನಕ್ಕ**
**ಬರಿದೆ ಬಹುದೆ ಶಿವಜ್ಞಾನ?**
**ಷಡುವರ್ಗವಳಿಯದನ್ನಕ್ಕ ಬರಿದೆ ಬಹುದೆ?**
**ಅಷ್ಟಮದವನಳಿಯದನ್ನಕ್ಕ?**
**ಮದಮತ್ಸರವ ಮಾಡಲಿಲ್ಲ, ಹೊದಕುಳಿಗೊಳಲಿಲ್ಲ**
**ಗುಹೇಶ್ವರಲಿಂಗ ಕಲ್ಪಿತದೊಳಗಲ್ಲ.**

ಲಿಂಗಾಯತ ಧರ್ಮ ಸಾಧಕನು ಷಟ್‌ಸ್ಥಲ ಸಾಧನಾಕ್ರಮದಲ್ಲಿ ಮುನ್ನಡೆದಾಗ ಪ್ರಾಣಲಿಂಗಿ ಸ್ಥಲದಲ್ಲಿ ತನ್ನ ಮನಸ್ಸನ್ನು ಪರಿಶುದ್ಧಗೊಳಿಸಿಕೊಳ್ಳಬೇಕಾಗುತ್ತದೆ. ಪರಿಶುದ್ಧ ಮನಸ್ಸಿನಲ್ಲಿ ಮಾತ್ರ ಲಿಂಗತತ್ವದ ಅನುಭವ ಸಾಧ್ಯವಾಗುವುದರಿಂದ ಮನಸ್ಸನ್ನು ಮದ ಮತ್ಸರ ಮಾಯಾ ಮೋಹಗಳಿಂದ ಮುಕ್ತಗೊಳಿಸಿ ಪರಮಸತ್ಯವನ್ನು ಅರಿಯಬೇಕೆಂದು ಅಲ್ಲಮಪ್ರಭುಗಳು ಈ ವಚನದಲ್ಲಿ ಸ್ಪಷ್ಟಪಡಿಸಿದ್ದಾರೆ.

ಮಾನವ ಶರೀರವನ್ನು ಕೆಡುವ ಕಾಯವೆಂದು ಗ್ರಹಿಸಿ ಅದರಲ್ಲಿರುವ ಮೋಹವನ್ನು ತ್ಯಜಿಸಬೇಕೆಂದು ಅನುಭಾವಿಗಳು ಸದಾ ನಮ್ಮನ್ನು ಎಚ್ಚರಿಸುತ್ತಾರೆ. ಅಕ್ಕಮಹಾದೇವಿ, ಅಲ್ಲಮಪ್ರಭುವಿನಂತಹ ಅನುಭಾವಿಗಳು ಶರೀರವನ್ನು ಕದಳಿ, ಕದಳಿಯಬನ ಎಂಬ ವಿಶಿಷ್ಟ ಶಬ್ದಗಳಿಂದ ಸಂಕೇತಿಸುತ್ತಾರೆ. ಕದಳಿ ಎಂಬುದು ತನು, ಕದಳಿ ಎಂಬುದು ಮನ, ಕದಳಿ ಎಂಬುದು ಭವಘೋರಾರಣ್ಯ ಎಂದು ಅಕ್ಕಮಹಾದೇವಿ ಹೇಳಿದ ರೀತಿಯಲ್ಲಿಯೇ ಅಲ್ಲಮಪ್ರಭುಗಳು ಕೂಡ ದೇಹವನ್ನು ಕದಳಿಯ ಬನಕ್ಕೆ ಹೋಲಿಸಿದ್ದಾರೆ. ಆಶೆ, ಆಮಿಷ, ವಿಷಯ ವ್ಯಾಮೋಹಗಳಿಂದ ಕೂಡಿದ ದೇಹವೆಂಬ ಭಯಂಕರ ಕಾಡಿನಲ್ಲಿ ಪ್ರವೇಶಿಸಿದ ಆತ್ಮನು ತನ್ನನ್ನು ತಾನು ಸಂರಕ್ಷಿಸಿಕೊಂಡು ಆ ಕಾಡಿನಿಂದ ಪಾರುಗೊಳ್ಳಬೇಕು. ಹಾಗೆ ಪಾರಾಗದೇ ಅವನಿಗೆ ಸುಖವಿಲ್ಲ. ಆದ್ದರಿಂದ ಸುಖಾಪೇಕ್ಷಿಯಾದ ಆತ್ಮನು ಮಾಯಾ ಮೋಹಗಳಿಂದ ಮುಕ್ತನಾಗುವ ದಾರಿಯನ್ನು ಕಂಡುಕೊಳ್ಳಬೇಕಾದುದು ಅನಿವಾರ್ಯ. ಅದಕ್ಕಾಗಿ ಶರಣರ, ಅನುಭಾವಿಗಳ ಸಂಗದಲ್ಲಿ ಇದ್ದು ಲಿಂಗಾಂಗಯೋಗವನ್ನು ಸಾಧಿಸಬೇಕು. ಅದರಿಂದ ವಾಯುವಿನ ಗತಿ ನಿಧಾನವಾಗುತ್ತ ಮನಸ್ಸು ಸ್ಥಿರಗೊಳ್ಳುವುದು. ಹೀಗೆ ಮನಸ್ಸು ಶಾಂತ ಪ್ರಶಾಂತವಾಗಬೇಕಾದರೆ, ಸಾಂಸಾರಿಕ ಮೋಹಗಳಿಂದ ಮುಕ್ತಗೊಳ್ಳಬೇಕು ಭ್ರಮೆಗಳನ್ನು, ಕುಲ, ಛಲಾದಿ ಅಷ್ಟಮದಗಳನ್ನು ಅಳಿಯಬೇಕಾಗುವುದು. ಮನುಷ್ಯನಿಗಿರುವ ಭ್ರಮೆಗಳು ಆರು. ಅವುಗಳೆಂದರೆ ಜಾತಿ, ವರ್ಣ, ಕುಲ, ಗೋತ್ರ, ಆಶ್ರಮ ಮತ್ತು ನಾಮ. ಈ ಭ್ರಮೆಗಳಲ್ಲಿರುವ ಮನುಷ್ಯನಿಗೆ ಲಿಂಗದ ನೆಲೆ, ಕಲೆಗಳು ತಿಳಿಯಲಾರವು. ತಾನು ಲಿಂಗಾನುಭಾವಿಗಳ ದಾಸನಾಗಿ ಸಂಸಾರ ಬಂಧನದಿಂದ ಮುಕ್ತನಾಗುವುದನ್ನು ಮರೆತು ಬರೀ ತನ್ನ ಜಾತಿ, ವರ್ಣ, ಆಶ್ರಮಗಳ ಶ್ರೇಷ್ಠತ್ವದಲ್ಲಿ ಕಾಲಹರಣ ಮಾಡುವುದು ಮತ್ತು ತನ್ನ ಹೆಸರು, ಕೀರ್ತಿ ವಾರ್ತೆಗಳಿಗಾಗಿ ಪರಿತಪಿಸುವುದು ಮನುಷ್ಯನ ಸಹಜ ಸ್ವಭಾವವಾಗಿದ್ದರೂ, ಅದರಿಂದ ಮೇಲೇರದೆ ಅವನಿಗೆ ಲಿಂಗತತ್ವವು ಅಳವಡುವುದಿಲ್ಲ. ಈ ಆರು ಭ್ರಮೆಗಳಲ್ಲದೆ ಅಷ್ಟಮದಗಳನ್ನು ಅಳಿಯಬೇಕಾದುದು ಅತ್ಯವಶ್ಯವೆಂದು ಅಲ್ಲಮಪ್ರಭು ಸ್ಪಷ್ಟವಾಗಿ ನಿರ್ದೇಶಿಸುತ್ತಾರೆ. ಕುಲ, ಛಲ, ಧನ, ರೂಪ, ಯೌವ್ವನ, ವಿದ್ಯೆ, ರಾಜ್ಯ, ತಪ ಎಂಬ ಅಷ್ಟಮದಗಳು ಕ್ರೂರ ಮೃಗಗಳಾಗಿ ಸಂಸಾರವೆಂಬ ದಟ್ಟ ಕಾಡಿನಲ್ಲಿರುವ ಜೀವಾತ್ಮನನ್ನು ಪೀಡಿಸುತ್ತವೆ. ಅವುಗಳನ್ನು ನಾಶಗೊಳಿಸಬೇಕು. 'ಕಾಯಕಾಂತಾರವ ಹೊಕ್ಕು ಬೇಂಟೆಯನಾಡಿ ಮಾಯಾ ಮೋಹದ ಮೃಗಗಳ ಕೊಲ್ಲಿರೋ' ಎನ್ನುವ ಅನುಭಾವಿ ಸರ್ಪಭೂಷಣ ಶಿವಯೋಗಿಗಳು ಕುಲ, ಛಲಾದಿ ಅಷ್ಟಮದಗಳನ್ನು ಮೆಟ್ಟಿ ನಿಲ್ಲುವ ಸಂದೇಶ ನೀಡುತ್ತಾರೆ. ನಾನು ಶ್ರೇಷ್ಠ ಕುಲದವನು, ನನ್ನದೇ ನಡೆಯಬೇಕು, ನಾನೇ ಶ್ರೀಮಂತ, ನಾನೇ ಸುಂದರ, ನಾನೇ ಶಕ್ತಿಶಾಲಿ, ನಾನೇ ಪ್ರಕಾಂಡ ಪಂಡಿತ, ನಾನೇ ಒಡೆಯ, ತಪಸ್ವಿ ಮುಂತಾದ ಮದಗಳಿಂದಾಗಿ ಮನುಷ್ಯನು ತನ್ನ ಮನಸ್ಸಿನ ಪ್ರಶಾಂತತೆಯನ್ನೇ ಹಾಳುಮಾಡಿಕೊಳ್ಳುತ್ತಾನೆ. ಹೀಗೆ ಮನಸ್ಸಿನ ನೆಮ್ಮದಿಯನ್ನು ಕಳೆದುಕೊಂಡು ಲಿಂಗಪಥದಿಂದ

ನಾಗನೂರು ಶ್ರೀ ರುದ್ರಾಕ್ಷಿಮಠ, ಬೆಳಗಾವಿ

ವಿಚಲಿತನಾಗುತ್ತಾನೆ. ಲಿಂಗತತ್ವವು ಅವನಿಗೆ ಮರೀಚಿಕೆಯಾಗುತ್ತದೆ.

ಲಿಂಗತತ್ವವೆಂಬುದು ಕಲ್ಪನೆಯ ವಸ್ತುವಲ್ಲ, ಸತ್ತುಚಿತ್ತ ಆನಂದ ಸ್ವರೂಪವಾದ ಪರಮಸತ್ಯವನ್ನೇ ನಮ್ಮ ಶರಣರು ಲಿಂಗತತ್ವವೆಂದು ಹೆಸರಿಸಿರುವರು. ಅದು ಅನಂತವೂ ಅವಿನಾಶಿಯೂ ಆಗಿದೆ. ನಮ್ಮ ಗುರಿ ಈ ಪರಮ ಸತ್ಯವನ್ನು ಅರಿತು ನಿಜಾನಂದದಲ್ಲಿ ಲೀನವಾಗುವ ಗುರಿಯಾಗಿದ್ದಲ್ಲಿ ನಮ್ಮಲ್ಲಿರುವ ಮದಮತ್ಸರಗಳನ್ನು ಅಳಿದು ಸಾಂಸಾರಿಕ ದುಃಖದಿಂದ ಮುಕ್ತವಾಗಬೇಕು. ಬಸವಾದಿ ಶಿವಶರಣರು ಲಿಂಗತತ್ವವನ್ನು ಅರಿತು ಆನಂದಿಸುವ ಸನ್ಮಾರ್ಗವನ್ನು ನಮಗೆ ತೋರಿದ್ದಾರೆ. ಪರಮಸತ್ಯವನ್ನು ಸಾಕ್ಷಾತ್ಕರಿಸಿಕೊಂಡು, ನಿಜಾನಂದವನ್ನು ಅನುಭವಿಸಿ ಆನಂದಿಸಿದ ಶರಣರ ಮಾರ್ಗದಲ್ಲಿ ಮುನ್ನಡೆದಾಗ ಖಂಡಿತವಾಗಿಯೂ ಲಿಂಗತತ್ವವು ಕರಗತವಾಗುತ್ತದೆ. ಒಟ್ಟಾರೆ ಲಿಂಗತತ್ವವನ್ನು ಅರಿತು ಆನಂದಿಸಬೇಕೆಂದು ಬಯಸುವವರು ಮದಮತ್ಸರಗಳನ್ನು ಮನಸ್ಸಿನಿಂದ ತೆಗೆದು ಹಾಕಿ ದೃಢಮನವುಳ್ಳವರಾಗಬೇಕು. ಮನಸ್ಸಿನಲ್ಲಿ ಚಂಚಲತೆ ಉಳಿದರೆ ಲಿಂಗತತ್ವದ ಅನುಭವ ಉಂಟಾಗದು. ಮನಸ್ಸಿನ ಪರಿಶುದ್ಧತೆ ಇಲ್ಲದೆ ನಾವು ಮಾಡುವ ಸಾಧನೆ ನಿಷ್ಪ್ರಯೋಜಕವೆನಿಸುವುದು. ಆದ್ದರಿಂದ ಮನದ ಹಲವಾರು ಬಯಕೆಗಳನ್ನು ದೂರಮಾಡಿ, ಕರಸ್ಥಲದ ಇಷ್ಟಲಿಂಗವನ್ನು ಮನವಾರೆ ಪೂಜಿಸಿ, ಧ್ಯಾನಿಸಿ ಪ್ರಾಣವೇ ಲಿಂಗ, ಲಿಂಗವೇ ಪ್ರಾಣ ಎಂಬ ಅನ್ಯೋನ್ಯ ಸಂಬಂಧವನ್ನು ಅರಿತಾಗ ಲಿಂಗತತ್ವ ಕರಗತವಾಗಿ ಲಿಂಗಾನುಭವ ಉಂಟಾಗುವಲ್ಲಿ ಯಾವುದೇ ಸಂದೇಹವಿಲ್ಲ ಎಂಬ ಆಶಯವನ್ನು ಅಲ್ಲಮಪ್ರಭುಗಳು ಈ ವಚನದಲ್ಲಿ ಸ್ಪಷ್ಟಪಡಿಸಿದ್ದಾರೆ.

***

## ಡಾ. ಸವದತ್ತಿಮಠ ಅವರ ಬರಹ ಖೇದಕರ

**ಡಾ. ತೋಂಟದ ಸಿದ್ಧರಾಮ ಮಹಾಸ್ವಾಮಿಗಳು, ಡಂಬಳ–ಗದಗ**

(ಪ್ರಜಾವಾಣಿ ಕೃಪೆ)

'ನಾನು ವೃಷಭನೆಂಬ ವಾಹನನಾಗಿರ್ದೆ' ಎಂಬ ಬಸವಣ್ಣನವರ ವಚನದ ಸಾಲೊಂದನ್ನು ತಪ್ಪಾಗಿ ಗ್ರಹಿಸಿದ ಮತ್ತು ಬಸವ ಜಯಂತಿಯಂದು ಕೆಲವು ಅಜ್ಞಾನಿಗಳು ಎತ್ತನ್ನು ಪೂಜಿಸಿರುವುದನ್ನು ಸಮರ್ಥಿಸಿ 'ದಿನಪತ್ರಿಕೆಗೆ' ಲೇಖನ ಬರೆದ ಡಾ. ಸಂಗಮೇಶ ಸವದತ್ತಿಮಠರ ಸಂಶೋಧನೆಗೆ ಏನೆನ್ನಬೇಕು ತಿಳಿಯದಾಗಿದೆ ಎಂದು ಡಂಬಳ–ಗದಗ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠದ ಡಾ. ತೋಂಟದ ಸಿದ್ಧರಾಮ ಸ್ವಾಮಿಗಳವರು ಸಖೇದಾಶ್ಚರ್ಯ ವ್ಯಕ್ತಪಡಿಸಿದ್ದಾರೆ.

ಯಾವುದೇ ಒಬ್ಬ ವ್ಯಕ್ತಿಯ ಚಿಂತನೆಯಲ್ಲಿ ವೈಚಾರಿಕತೆ ಇರಬೇಕು. ಅವನು ಹೇಳುವ ಮಾತುಗಳು ವಿಜ್ಞಾನಕ್ಕೆ ಸಮ್ಮತವಾಗಿರಬೇಕು. ಇಪ್ಪತ್ತೊಂದನೆಯ ಶತಮಾನದಲ್ಲಿ ಪೌರಾಣಿಕ ಕಲ್ಪನೆಗಳನ್ನು ಪ್ರತಿಪಾದಿಸಿದರೆ ಜನ ನಂಬುತ್ತಾರೆಯೆ? ವೃಷಭ, ವೃಷಭೇಂದ್ರ ಎಂದು ಹೆಸರಿರುವ ವ್ಯಕ್ತಿಗಳು ನಾಲ್ಕು ಕಾಲಿನ ಎತ್ತುಗಳು ಎನ್ನುವುದು ಸರಿಯೆ? ಕೊರೋನಾ ವೈರಸ್ ಸಂಕಟದಿಂದ ದೇಶವೇ ಕಂಗಾಲಾಗಿದೆ ಎಂದು ಹೇಳುತ್ತ ಎತ್ತನ್ನು ಪೂಜಿಸಿರುವುದನ್ನು ಸಮರ್ಥಿಸುವ ಲೇಖನ ಬರೆದು ಮತ್ತಷ್ಟು ಗೊಂದಲವೆಬ್ಬಿಸುವುದು ಸರಿಯೆ? ಮಹಾಮಾನವತಾವಾದಿ, ಧರ್ಮಗುರು ಬಸವಣ್ಣನವರ ಜಯಂತಿಯಂದು ಎತ್ತನ್ನು ಪೂಜಿಸುವ ಅಜ್ಞಾನಕ್ಕೆ ನೂರೆಂಟು ವರ್ಷಗಳ ಹಿಂದೆಯೇ ಹರ್ಡೇಕರ ಮಂಜಪ್ಪನವರು ತಡೆಯೊಡ್ಡಿ, ಮುರುಘಾಮಠದ ಮೃತ್ಯುಂಜಯಪ್ಪಗಳ ನೇತೃತ್ವದಲ್ಲಿ ಜಯಂತಿಯನ್ನು ಆಚರಿಸಿರುವುದು ಎಲ್ಲರೂ ತಿಳಿದ ಸಂಗತಿಯಾಗಿದೆ.

ಬಸವಣ್ಣನವರು ಒಬ್ಬ ಐತಿಹಾಸಿಕ ವ್ಯಕ್ತಿಗಳು. ಜಾಗತಿಕ ಇತಿಹಾಸದಲ್ಲಿಯೇ ಅನುಪಮವಾದ ಸಮಾಜೋಧಾರ್ಮಿಕ ಚಳುವಳಿಯ ನೇತಾರರು. ವೈದಿಕ ಕರ್ಮಕಾಂಡಕ್ಕೆ ಪ್ರತಿದ್ವಂದ್ವಿಯಾಗಿ ಲಿಂಗಾಯತ ಧರ್ಮವೆಂಬ ನಿತ್ಯನೂತನ ಧರ್ಮವನ್ನು ಸಂಸ್ಥಾಪಿಸಿದವರು. ಜನ್ಮತಃ ಬ್ರಾಹ್ಮಣರಾಗಿದ್ದ ಅವರು ಶ್ರೇಷ್ಠತೆಯ ವ್ಯಸನದಿಂದ ಹೊರಬಂದವರು. ಅವರು ಮತ್ತೆ ವೈದಿಕ ಧರ್ಮದ ಪ್ರತಿರೂಪದಂತಿರುವ ವೀರಶೈವ ಧರ್ಮವನ್ನು ಸ್ವೀಕರಿಸಿದರು ಎಂಬ ಮಾತನ್ನು ಡಾ. ಸವದತ್ತಿಮಠ ಅವರು ಸಮರ್ಥಿಸುವುದು ಪೂರ್ವಾಗ್ರಹದಿಂದ ಕೂಡಿರುವುದಲ್ಲದೆ ಯಾರನ್ನೋ ಮೆಚ್ಚಿಸಲಿಕ್ಕೆ ಅವರು ಹೇಳಿದಂತಿದೆ. 'ಹುಸಿ ಮಾತನಾಡಿ ಕೆಡಬೇಡ ಲಿಂಗಾಯತಕ್ಕೆ ಬಸವಣ್ಣನೇ ಕರ್ತೃ ಸರ್ವಜ್ಞ" ಎಂಬ ಸರ್ವಜ್ಞನ ವಚನದ ಸಾಲನ್ನು ಅವರು ನೆನಪಿಸಿಕೊಳ್ಳಬೇಕಾಗಿತ್ತು. ಡಾ. ಸವದತ್ತಿಮಠ ಅವರ ಇಂತಹ ಅವಿಚಾರದ ಹೇಳಿಕೆ ಮತ್ತು ಅವೈಜ್ಞಾನಿಕ ಬರಹಗಳಿಂದಾಗಿ ಸಾಮರಸ್ಯದಿಂದ ಬದುಕುತ್ತಿರುವ ಲಿಂಗಾಯತ ಸಮಾಜ ಬಾಂಧವರಲ್ಲಿ ಭಕ್ತ–ಜಂಗಮ ಎಂಬ ಭೇದವನ್ನು ಹುಟ್ಟು ಹಾಕಿದಂತಾಗಿದೆ ಎಂದು ಶ್ರೀಗಳು ಖೇದ ವ್ಯಕ್ತಪಡಿಸಿದ್ದಾರೆ.

■■

# ಒಕ್ಕುಮಿಕ್ಕ ಪ್ರಸಾದ : ಹಾಗೆಂದರೇನು?

● **ಡಾ. ವೀರಣ್ಣ ದಂಡೆ**

ದಾಸೋಹ–ಪ್ರಸಾದದ ಸಂಗತಿಗಳು ಬಂದಾಗಲೆಲ್ಲ 'ಒಕ್ಕುದ/ದು', 'ಒಕ್ಕುದನಿಕ್ಕಿ', 'ಒಕ್ಕುಮಿಕ್ಕ ಪ್ರಸಾದ' ಎಂಬ ಮಾತುಗಳು ಶರಣರ ವಚನಗಳಲ್ಲಿ ಹಲವಾರು ಕಡೆ ಪ್ರಸ್ತಾಪವಾಗುತ್ತವೆ. 'ಒಕ್ಕು' ಎಂದರೆ ಗಳಿಸು, ಸಂಗ್ರಹಿಸು ಎಂದೂ 'ಒಕ್ಕುದ/ದು' ಎಂದರೆ ಗಳಿಸಿದ, ಸಂಗ್ರಹಿಸಿದ ಎಂದೂ ಅರ್ಥಗಳು ಹೊರಡುತ್ತವೆ. ಅಲ್ಲಮಪ್ರಭುಗಳು ಒಂದು ವಚನದಲ್ಲಿ 'ಬಯಲ ಬಿತ್ತಲಿಲ್ಲ, ಬೆಳೆಯಲಿಲ್ಲ, ಒಕ್ಕಲಿಲ್ಲ, ತೂರಲಿಲ್ಲ' (೬೩೫) ಎನ್ನುತ್ತಾರೆ. ವಚನದ ಈ ಸಾಲಿನಲ್ಲಿ ಬಳಕೆಯಾದ 'ಒಕ್ಕಲಿಲ್ಲ' ಎಂಬ ಪದವನ್ನು ಗಮನಿಸಬೇಕು. ಅಲ್ಲಿ ಧಾನ್ಯ ಬಿತ್ತುವ, ಬೆಳೆಯುವ, ರಾಶಿಮಾಡಲು ಕೊಯ್ದು ಒಕ್ಕುವ, ತೂರುವ ಪದಗಳನ್ನು ಬಳಸಿಕೊಂಡಿದ್ದಾರೆ. ಒಕ್ಕಲಿಗರು ಬೆಳೆದ ಬೆಳೆಯನ್ನು ರಾಶಿ ಮಾಡಬೇಕಾದರೆ ಬೆಳೆಯನ್ನು ಕೊಯ್ದು, ಕಿತ್ತಿ ಸೂಡು ಕಟ್ಟುತ್ತಾರೆ. ಈ ಸೂಡುಗಳನ್ನು ಸಂಗ್ರಹಿಸಿ ಒಂದೆಡೆ ತಂದು ಕ್ರಮಬದ್ಧವಾಗಿ ಒಟ್ಟು(ಒಕ್ಕು)ತ್ತಾರೆ. ಹೀಗಾಗಿ 'ಒಟ್ಟು' ಮತ್ತು 'ಒಕ್ಕು' ಪದಗಳು ಸಂಗ್ರಹಿಸು ಎಂಬ ಅರ್ಥದಲ್ಲಿ ಬಳಕೆಯಾಗುತ್ತವೆ. 'ಒಕ್ಕುದನಿಕ್ಕಿ' ಎಂದರೆ ಸ್ವತಃ ಗಳಿಸಿದುದನ್ನು ನೀಡಿ, ಕೊಟ್ಟು, ಹಂಚಿ, ದಾಸೋಹ ಮಾಡಿ ಎಂದಾಗುತ್ತದೆ. 'ಮಿಕ್ಕ' ಎಂದರೆ ಉಳಿದ, ಹಂಚಿ (ವಿತರಿಸಿ) ಹೆಚ್ಚಾಗಿ ಉಳಿದ ಎಂಬ ಅರ್ಥಕೊಡುತ್ತದೆ. 'ಒಕ್ಕುಮಿಕ್ಕ ಪ್ರಸಾದ' ಎಂದರೆ ತಮ್ಮಲ್ಲಿ ಸಂಗ್ರಹವಾಗಿರುವ (ಆಹಾರ, ದವಸಧಾನ್ಯ, ಸಂಪತ್ತು) ಯಾವುದೇ ಬಗೆಯ ಗಳಿಕೆಯನ್ನು ಅನುವರಿತು (ತಕ್ಕಷ್ಟು) ದಾಸೋಹ ಮಾಡಿದ ನಂತರ ಉಳಿದದ್ದು 'ಒಕ್ಕುಮಿಕ್ಕ ಪ್ರಸಾದ' ಎನಿಸುತ್ತದೆ.

ಬಸವಣ್ಣನವರು ಒಂದು ವಚನದಲ್ಲಿ **'ಮರ್ತ್ಯಲೋಕದ ಮಹಾಗಣಂಗಳ ಒಕ್ಕುದನಿಕ್ಕಿ ಎನ್ನ ಸಲಹಿದಿರಿ'(೧೦೦೭)** ಎನ್ನುತ್ತಾರೆ. 'ಮರ್ತ್ಯಲೋಕದ ಮಹಾಗಣಂಗಳು' ಅಂದರೆ ಈ ಲೋಕದ ಸಜ್ಜನರು–ಸದ್ಭಕ್ತರು, ತಾವು ಬೆಳೆದು, ಗಳಿಸಿ ಸಂಗ್ರಹಿಸಿದ ಸಂಪತ್ತನ್ನು ಕೊಟ್ಟು (ಇಕ್ಕಿ) ನನ್ನನ್ನು ಕಾಪಾಡಿದಿರಿ ಎನ್ನುತ್ತಾರೆ. ಇಲ್ಲಿ ಒಕ್ಕಲಿಗರು ತಮ್ಮ ಹೊಲದಲ್ಲಿ ಬೆಳೆದು ಸಂಗ್ರಹಿಸಿದ ದವಸ ಧಾನ್ಯಗಳಲ್ಲಿ ಸ್ವಲ್ಪಭಾಗವನ್ನು ಬಸವಣ್ಣನವರ ಮಹಾಮನೆಯ ದಾಸೋಹಕ್ಕೆ ಕೊಡುತ್ತಿದ್ದರೆಂದು ಇಟ್ಟುಕೊಳ್ಳುವುದು ಸಮಂಜವೆನಿಸುತ್ತದೆ.

ಒಕ್ಕಲಿಗನು ತನ್ನ ಹೊಲದಲ್ಲಿ ಬೆಳೆದ ಯಾವುದೇ ಬೆಳೆಯ ರಾಶಿಯ ಕಾಲಕ್ಕೆ ಆಯಗಾರರು ಆಗಮಿಸಿದಾಗ ಅವರಿಗೆ ಆಯ ಕೊಡುವ ಪದ್ಧತಿ ಇವತ್ತಿಗೂ ಉಳಿದುಕೊಂಡು ಬಂದಿದೆ. ಆಯಗಾರರಲ್ಲದೆ ಅನೇಕ ಜನ ಬಡವರೂ ಹೀಗೆ ರಾಶಿ ನಡೆದಾಗ ಬರುವುದುಂಟು. ಅವರಿಗೂ ಒಕ್ಕಲಿಗ ಇಲ್ಲ ಎನ್ನದೆ ದಾಸೋಹ ಮಾಡುತ್ತಾನೆ. ತಮ್ಮ ಸನಿಹದ ಸುತ್ತಮುತ್ತಲ ಮಠಮಾನ್ಯಗಳ ದಾಸೋಹಕ್ಕೆಂದು ರಾಶಿಯಲ್ಲಿ ಸ್ವಲ್ಪಭಾಗವನ್ನು ತೆಗೆದಿಟ್ಟು, ದಾಸೋಹ ಮಠಗಳಿಗೆ ಮುಟ್ಟಿಸುವ ಪದ್ಧತಿ ಇವತ್ತಿಗೂ ಕಂಡುಬರುತ್ತದೆ. ಕಲಬುರಗಿ ಭಾಗದ ದೊಡ್ಡ ದೈವ ಶ್ರೀ ಶರಣಬಸವೇಶ್ವರರು. ಅವರು ದಾಸೋಹದಿಂದಲೇ ಪ್ರಸಿದ್ಧರಾದ ಅನುಭಾವಿಗಳು. ಇವತ್ತಿಗೂ ಒಕ್ಕಲಿಗರು ತಮ್ಮ ಬೆಳೆಯ ರಾಶಿಯಲ್ಲಿ, ವಿಶೇಷವಾಗಿ ಜೋಳದ ರಾಶಿಯಲ್ಲಿ ಹಂತಿ ಹೊಡೆಯುವುದು ಮುಗಿದ ನಂತರ, ಕಾಳುಗಳನ್ನು ಸುಂಕದಿಂದ ಬೇರೆ ಮಾಡುವ ಮುನ್ನ, ಅಂದರೆ ಮದನವನ್ನು ತೂರುವ ಮುನ್ನ ಒಂದಿಷ್ಟು ಮದನವನ್ನು (ಸುಂಕ ಬೆರೆತ ಕಾಳು) ತಮ್ಮ ತಮ್ಮ ಅನುಕೂಲಕ್ಕೆ ತಕ್ಕಂತೆ ಒಂದು ಚೀಲದಲ್ಲಿ ತೆಗೆದಿರಿಸುತ್ತಾರೆ. ಅದನ್ನು ನಂತರ ಕಲಬುರಗಿಯ ಶ್ರೀ ಶರಣಬಸವೇಶ್ವರ ಮಹಾಮನೆಗೆ ದಾಸೋಹಕ್ಕೆಂದು ತಲುಪಿಸುತ್ತಾರೆ. ಈ ಪದ್ಧತಿ ದಾಸೋಹ ಮಠಗಳಿದ್ದೆಡೆಯಲ್ಲಿ ಸಾಮಾನ್ಯವಾಗಿ ಕಂಡುಬರುತ್ತದೆ. ಮೇಲಿನ ವಚನದ ಸಾಲಿನಲ್ಲಿ ಬಸವಣ್ಣನವರು ಇದನ್ನೆ ಹೇಳುತ್ತಿದ್ದಾರೆನಿಸುತ್ತದೆ. ಮರ್ತ್ಯಲೋಕದ ಮಹಾಗಣಂಗಳು ತಾವು ಬೆಳೆದು ಸಂಗ್ರಹಿಸಿದ ದವಸಧಾನ್ಯಗಳಲ್ಲಿ ಸ್ವಲ್ಪಭಾಗವನ್ನು ತಮ್ಮ ಮಹಾಮನೆಗೆ ಕೊಟ್ಟು, ದಾಸೋಹ ನಿರಂತರವಾಗಿ ನಡೆಯುವುದಕ್ಕೆ ಸಹಾಯ ಮಾಡಿದರು ಎಂಬ ಕೃತಜ್ಞತಾ ಭಾವ ವ್ಯಕ್ತಪಡಿಸಿದ್ದಾರೆ ಎನಿಸುತ್ತದೆ.

**ವಿಶ್ರಾಂತ ಪ್ರಾಧ್ಯಾಪಕರು, ಸರಸ್ವತಿಪುರ, ವಿಶ್ವವಿದ್ಯಾಲಯ ಅಂಚೆ, ಕಲಬುರಗಿ–೫೮೫ ೧೦೬, ಮೊ. ೯೪೪೮೭೭೮೪೯೧.**

**ಹರನ ನದಿಯ ತೆರನ ಹೋಲಬಲ್ಲಡೆ ಭಕ್ತಿ**
**ಕೂಡಿ ಸಯದಾನವ ನೀಡಬಲ್ಲಡೆ ಭಕ್ತಿ**
**ನೀಡಿ ಮಿಕ್ಕುದ ಕಾಯ್ದುಕೊಂಡಿರಬಲ್ಲಡೆ**
**ಕೂಡಿಕೊಂಡಿಪ್ಪ ನಮ್ಮ ಕೂಡಲಸಂಗಮದೇವ (೫೨೪)**

ಈ ವಚನದಲ್ಲಿ ದಾಸೋಹಕ್ಕಾಗಿ 'ಸಯದಾನ' (ದವಸಧಾನ್ಯ) ಕೊಡುವ ಸೂಚನೆ ಇದೆ. ಈ ಕ್ರಿಯೆ ಭಕ್ತಿಯಿಂದ ನಡೆಯಬೇಕು ಎಂಬುದು ಬಸವಣ್ಣನವರ ಅಭಿಪ್ರಾಯವಾಗಿದೆ. 'ಕೂಡಿ ಸಯದಾನವ ನೀಡಬಲ್ಲಡೆ ಭಕ್ತಿ' ಎನ್ನುವಲ್ಲಿ ಮನೆಯವರೆಲ್ಲರೂ ಒಮ್ಮನಸ್ಸಿನಿಂದ ಕೂಡಿ ಸಯದಾನ ನೀಡಬೇಕು ಎಂದಿದೆ. ಇದೇ ಭಕ್ತಿ ಎನಿಸಿಕೊಳ್ಳುತ್ತದೆ. ಇಲ್ಲಿ 'ಸಯದಾನ' ಎನ್ನುವುದು ಪ್ರಮುಖವಾದ ಪದವಾಗಿದೆ. ಅದರ ಅರ್ಥ ಆಹಾರ ತಯಾರಿಸಲು ಅವಶ್ಯವಾದ ದವಸಧಾನ್ಯ ಎಂದಾಗುತ್ತದೆ. ಜನಪದ ಜೀವನದಲ್ಲಿ ಹೀಗೆ ಸಯದಾನವನ್ನು ಕೊಡುವ ಪದ್ಧತಿ ಇವತ್ತಿಗೂ ಇದೆ. ತಮ್ಮ ಮನೆಯ ಒಂದು ಧಾರ್ಮಿಕ ಕಾರ್ಯಕ್ರಮ ನಡೆಸಿಕೊಟ್ಟ ಸ್ವಾಮಿಗಳಿಗೆ, ಬ್ರಾಹ್ಮಣರಿಗೆ ತಯಾರಿಸಿದ ಆಹಾರದ ಬದಲಾಗಿ ಹೀಗೆ ದವಸಧಾನ್ಯ ಕೊಡುವ ಪದ್ಧತಿ ಇದ್ದು, ಇದನ್ನು 'ಸೀದಾ' ಕೊಡುವುದು ಎನ್ನುತ್ತಾರೆ. 'ಸೀದಾ' ಎನ್ನುವ ಪದ 'ಸಯದಾನದ' ಅರ್ಥ ಕೊಡುವ ಸಮಾನ ಪದವಾಗಿದೆ. ಅಷ್ಟೆ ಅಲ್ಲ 'ಸಯದಾನ' ಪದವು ಸಾಮಾನ್ಯರ ಬಾಯಿಯಲ್ಲಿ ಸಂಕ್ಷಿಪ್ತಗೊಂಡು 'ಸೀದಾ' ಆಗಿದೆ ಎನಿಸುತ್ತದೆ.

ಸಜ್ಜನರು ತಮ್ಮಲ್ಲಿ ಸಂಗ್ರಹವಾದ ಸಂಪತ್ತನ್ನು ಭಕ್ತಿಯಿಂದ **'ನೀಡಿ ಮಿಕ್ಕುದ ಕಾಯ್ದುಕೊಂಡಿರಬಲ್ಲಡೆ/ ಕೂಡಿಕೊಂಡಿಪ್ಪ ನಮ್ಮ ಕೂಡಲ ಸಂಗಮದೇವ' (೫೨೪)** ಎನ್ನುತ್ತಾರೆ ಬಸವಣ್ಣನವರು. ಅಂದರೆ ಗಳಿಸಿ ಸಂಗ್ರಹಿಸಿದ (ಒಕ್ಕ) ಸಂಪತ್ತಿನಲ್ಲಿ (ಅದು ದವಸಧಾನ್ಯವೇ ಆಗಿರಬಹುದು, ಹಣ ಅಥವಾ ಬೇರೆ ರೂಪದ ಪದಾರ್ಥ ಆಗಿರಬಹುದು) ಅನುವರಿತು (ಸಾಧ್ಯವಾದಷ್ಟನ್ನು) ದಾಸೋಹ ಮಾಡಿ, ಮಿಕ್ಕುದನ್ನು ಅವಶ್ಯವಾಗಿ ಕಾಯ್ದುಕೊಂಡಿರಬೇಕು. ಅಂದರೆ ಎಲ್ಲವನ್ನೂ ದಾಸೋಹ ಮಾಡುವುದಲ್ಲ; ಮಾಡಬಾರದು ಕೂಡ. ತಮ್ಮ ಕುಟುಂಬಕ್ಕೆ ಬೇಕಾಗುವಷ್ಟನ್ನು ಉಳಿಸಿಕೊಳ್ಳುವುದೇ 'ಮಿಕ್ಕುದು= ಕಾಯ್ದುಕೊಂಡದ್ದು'. ಅಂದರೆ ತಮ್ಮ ಶಕ್ತ್ಯಾನುಸಾರ ದಾಸೋಹ ಮಾಡಿ, ತಮಗೆ ಬೇಕಾದಷ್ಟನ್ನು ಉಳಿಸಿಕೊಂಡವರೊಂದಿಗೆ ಕೂಡಲಸಂಗಮದೇವ ಕೂಡಿಕೊಂಡಿರುತ್ತಾನೆ ಎನ್ನುತ್ತಾರೆ ಬಸವಣ್ಣನವರು. ದಾಸೋಹ ಮಾಡುವುದು ಎಷ್ಟು ಮುಖ್ಯವೋ ತಮಗಾಗಿ ಉಳಿಸಿಕೊಳ್ಳುವುದೂ ಅಷ್ಟೇ ಮುಖ್ಯ ಎನಿಸುತ್ತದೆ. ಒಕ್ಕುದು ಅಂದರೆ ಒಟ್ಟು ಗಳಿಕೆ. ಮಿಕ್ಕುದು ಎಂದರೆ ದಾಸೋಹ ಮಾಡಿ ಉಳಿದದ್ದು ಎಂದರ್ಥ. ಈ ಉಳಿದದ್ದು ತಮಗಾಗಿ ಬಳಸಿಕೊಳ್ಳಬೇಕು. ಇದು ಬಸವಣ್ಣನವರ ದಾಸೋಹದ ಪರಿಕಲ್ಪನೆಯ ಬಹುಮುಖ್ಯವಾದ ವಿಶ್ಲೇಷಣೆಯಾಗಿದೆ.

ಈ ಅಭಿಪ್ರಾಯದಲ್ಲಿ ತನ್ನ ಗಳಿಕೆಯನ್ನು 'ಇದು ಶಿವನದು' ಎಂಬ ಭಾವ ಹೊಂದುವುದು ಮೊದಲನೆಯದು. ಇದು ಭಕ್ತಿ ಎನಿಸಿಕೊಳ್ಳುತ್ತದೆ. ಈ ಭಕ್ತಿಭಾವದಿಂದ ಸ್ವಲ್ಪಭಾಗವನ್ನು ಜಂಗಮಕ್ಕೆ/ಸಮಾಜಕ್ಕಾಗಿ ವ್ಯಯಮಾಡುವುದು ಒಬ್ಬ ಶರಣನ ಕರ್ತವ್ಯ. ಇದಾದ ನಂತರ ಉಳಿಯುವುದು ತನಗಾಗಿ, ತನ್ನವರಿಗಾಗಿ. ಈ ಉಳಿದುದೇ ಮಿಕ್ಕಪ್ರಸಾದ. ಇಂತಹ ಮಿಕ್ಕಪ್ರಸಾದವನ್ನು ಬಳಸಿಕೊಳ್ಳುವವನೇ ಪ್ರಸಾದಿ. ಈ ಅರ್ಥದಲ್ಲಿ ತನ್ನದೆಲ್ಲವನ್ನೂ ದಾಸೋಹ ಮಾಡಬೇಕೆಂಬ ಅರ್ಥ ಖಂಡಿತ ಇಲ್ಲ. ದಾಸೋಹ ಮಾಡಬಹುದಾದುದು ಪದಾರ್ಥವನ್ನು. ಈ ಪಾದಾರ್ಥ ಶಿವನದು ಎಂಬ ಭಾವದಿಂದ ದಾಸೋಹ ಮಾಡಿ, ಉಳಿದ (ಮಿಕ್ಕಿದ) ಪ್ರಸಾದವನ್ನು ತಮಗಾಗಿ ಬಳಸಿಕೊಳ್ಳಬೇಕು ಎಂಬ ತತ್ತ್ವ ಇಲ್ಲಿದೆ.

ಬಸವಣ್ಣನವರು ತಮ್ಮ ಸ್ವಂತ ಆದಾಯದಲ್ಲಿಯೇ ತಮ್ಮ ಮಹಾಮನೆಗೆ ಬರುವ ಶರಣರೆಲ್ಲರಿಗೂ ಪ್ರಸಾದ ತಯಾರಿಸಿ ದಾಸೋಹ ನಡೆಸುತ್ತಿದ್ದರು ಎಂದು ನಂಬುವುದಕ್ಕಿಂತ ಈ ಮೇಲಿನ ವಚನದ ಭಾವದಂತೆ ತಮ್ಮ ದಾಸೋಹ ಸೇವೆಯಲ್ಲಿ ಸಾರ್ವಜನಿಕರನ್ನೂ ತೊಡಗಿಸಿಕೊಂಡರೆಂದು ಗ್ರಹಿಸುವುದು ಹೆಚ್ಚು ಸಮಂಜಸವೆನಿಸುತ್ತದೆ. ಬಸವಣ್ಣನವರು ಜನರ ಜೊತೆಗೆ ಇರಬೇಕೆಂದು ಬಯಸಿದವರು. ತಾವೇ ತಮ್ಮ ಗಳಿಕೆಯಿಂದ ದಾಸೋಹ ಮಾಡಿ ತಮ್ಮ ಶ್ರೇಷ್ಠತೆಯನ್ನೇ ಪ್ರತಿಷ್ಠಾಪಿಸಬೇಕೆಂಬ ಅಹಂಮಿಕೆಯುಳ್ಳವರಲ್ಲ. ಮಹಾಮನೆಯಂಥಲ್ಲಿ ನಡೆಯುವ ದಾಸೋಹವು ಅದು ವೈಯಕ್ತಿಕ ಸಂಪತ್ತನ್ನು ಸವೆಸಿ ನಡೆಸುವಂತಹದಲ್ಲ. ಎಲ್ಲರಿಂದಲೂ ಸಂಗ್ರಹವಾದುದನ್ನು ತಿರುಗಿ ಸಮಾಜಕ್ಕೆ ಒಪ್ಪಿಸುವ ರೀತಿಯದು. ಇದು ಸಮೂಹ ದಾಸೋಹ ಪದ್ಧತಿ. ಇಂದೂ ಕೂಡ ಅನೇಕ ಮಠಮಾನ್ಯಗಳಲ್ಲಿ ಇಂತಹ ಪದ್ಧತಿ ಉಳಿದುಬಂದಿದೆ. ವೈಯಕ್ತಿಕವಾಗಿ ಒಂದು ಕುಟುಂಬ ಮಾಡುವ ದಾಸೋಹ ರೀತಿಯೇ ಬೇರೆ, ಮಠಗಳಂಥ ಸಾರ್ವಜನಿಕ ಸಂಸ್ಥೆಗಳು ಮಾಡುವ ದಾಸೋಹ

ರೀತಿಯೇ ಬೇರೆ. ಬಸವಣ್ಣನವರ ಮಹಾಮನೆಯ ದಾಸೋಹ ಅದು ಸಾರ್ವಜನಿಕರಿಗಾಗಿ ನಡೆಯುವ ದಾಸೋಹ ಪದ್ಧತಿಯಾಗಿದ್ದು, ಅಲ್ಲಿ ಸಾಮಾಜಿಕರಿಂದಲೇ ಆಹಾರಧಾನ್ಯಗಳನ್ನು ಸಂಗ್ರಹಿಸಿ ದಾಸೋಹಕ್ಕೆಡೆ ಮಾಡುವ ಪದ್ಧತಿ ಇರುವುದು ಸಹಜ.

**ಸಯದಾನ ಸವೆಯಿತ್ತೆಂದು ಬೆದರಿದೆನಾದಡೆ**
**ನಿಮ್ಮಾಣೆ ನಿಮ್ಮ ಪ್ರಮಥರಾಣೆ**
**ಪಡಿಪದಾರ್ಥಂಗಳು ಅವಸರಕ್ಕೆ ಒದಗದೆ ಇದ್ದಲ್ಲಿ**
**ಮನವಳುಕಿ ಬೆದರಿದೆನಾದಡೆ ನಿಮ್ಮ ಭಕ್ತರಿಗೆ ಸಲ್ಲೆನು**
**ಒಡವೆ ಸವೆದಡೆ ಒಡಲನೆ ಸಲಿಸುವೆನು**
**ಕಡೆಮುಟ್ಟ ಪೂರೈಸದಿದ್ದೆನಾದಡೆ**
**ಮಡಿವಾಳ ಮಾಚಿತಂದೆಯ ಪಾದಸಾಕ್ಷಿಯಾಗಿ**
**ಕೂಡಲಸಂಗಮದೇವರಿಗೆ ದೂರವಹೆನು (೧೩೮೭)**

ಸಜ್ಜನಸದ್ಭಕ್ತರಿಂದ ಸಂಗ್ರಹವಾದ ಪಡಿಪದಾರ್ಥಗಳ ಸಂಗ್ರಹ ಒಮ್ಮೊಮ್ಮೆ ಸವೆದು ಹೋಗಿ, ಅವಸರಕ್ಕೆ (ಸರಿಯಾದ ಸಮಯಕ್ಕೆ) ಆಹಾರಪದಾರ್ಥಗಳು ಒದಗದೆ ಇದ್ದಲ್ಲಿ ದಾಸೋಹಕ್ಕೆ ತೊಂದರೆಯಾಯಿತು ಎಂದು ಹೆದರುವುದು ಸರಿಯಾದ ಕ್ರಮವಲ್ಲ ಎನ್ನುತ್ತಾರೆ ಬಸವಣ್ಣನವರು. ಇಂತಹ ವೇಳೆಯಲ್ಲಿ ದಾಸೋಹ ವ್ಯವಸ್ಥೆಯಲ್ಲಿ ತೊಡಗಿಸಿಕೊಂಡವರು ತಮ್ಮ ವೈಯಕ್ತಿಕ ಸಂಪತ್ತನ್ನೂ ದಾಸೋಹಕ್ಕಾಗಿ ವ್ಯಯಿಸಲು ಸಿದ್ಧರಾಗಿರಬೇಕಾಗುತ್ತದೆ. ಹೀಗೆ ಮಾಡದೆ ದಾಸೋಹದ ವ್ಯವಸ್ಥೆಗೆ ಕುಂದುಂಟಾದರೆ ಕೂಡಲಸಂಗಮದೇವರಿಂದ ದೂರ ಉಳಿಯಬೇಕಾಗುತ್ತದೆ ಎಂಬುದು ಬಸವಣ್ಣನವರ ಪ್ರಮಾಣದ ಮಾತು.

ತಮ್ಮ ಗಳಿಕೆಯಲ್ಲಿ ಸ್ವಲ್ಪಭಾಗವನ್ನು ದಾಸೋಹಕ್ಕೆ ನೀಡುವ ಒಂದು ಸಾಮಾನ್ಯ ಮನೋಭಾವವನ್ನು ಸಾರ್ವಜನಿಕರಲ್ಲಿ ತುಂಬುವ ಪ್ರಯತ್ನವನ್ನು ಬಸವಣ್ಣನವರು ತಮ್ಮ ಮಹಾಮನೆಯ ದಾಸೋಹ ಪದ್ಧತಿಯಿಂದ ಮಾಡಿದರೆಂದು ತೋರುತ್ತದೆ. ಹೀಗೆ ಮಹಾಮನೆಯ ದಾಸೋಹಕ್ಕೆ ಜನಸಾಮಾನ್ಯರು ಕೊಡುವ ದವಸಧಾನ್ಯಗಳ ಸಂಗ್ರಹ ಒಂದು ಬಗೆಯದು. ಜೋಳಿಗೆ ಹಿಡಿದು ಮನೆಮನೆಗೂ ತೆರಳಿ ಕಂತಿಭಿಕ್ಷೆ ಮಾಡಿ, ತಯಾರಾದ ಆಹಾರವನ್ನು ಸಂಗ್ರಹಿಸುವ ಪದ್ಧತಿ ಇನ್ನೊಂದು ಬಗೆಯದು. ಇದು ಒಟ್ಟಿಗೆ ದಾಸೋಹಕ್ಕಾಗಿ 'ಆಹಾರವನ್ನು ಸಂಗ್ರಹಿಸುವ(ಒಕ್ಕುವ)' ರೀತಿಯಾಗಿತ್ತೆಂದು ತೋರುತ್ತದೆ. ಇವತ್ತಿಗೂ ಲಿಂಗಾಯತ ಮಠಮಾನ್ಯಗಳಲ್ಲಿ ಈ ಪದ್ಧತಿ ಉಳಿದುಕೊಂಡು ಬಂದಿದೆ. ಹಳ್ಳಿಗಳಲ್ಲಿ ನಾವು ಬಾಲ್ಯದಲ್ಲಿ ನೋಡಿದಂತೆ, ಸ್ವಾಮಿಗಳಾದವರು ಸ್ವತಃ ಮನೆಮನೆಗೂ ತೆರಳಿ ಕಂತಿಭಿಕ್ಷೆ ಎತ್ತಿ, ಆ ಪ್ರಸಾದವನ್ನೇ ಮಠಕ್ಕೆ ಬಂದ ಭಕ್ತರಿಗೆ ದಾಸೋಹ ಮಾಡುತ್ತಿದ್ದರು, ತಾವೂ ಅದನ್ನೇ ಸ್ವೀಕರಿಸುತ್ತಿದ್ದರು. ಸಾಮಾನ್ಯರು ತಾವು ತಮ್ಮ ಕುಟುಂಬದವರಿಗಾಗಿ ತಯಾರಿಸುವ ಆಹಾರದಲ್ಲಿ ಸ್ವಲ್ಪಭಾಗವನ್ನು ದಾಸೋಹ ಮಾಡಲೆಂದೇ ಹೆಚ್ಚಿಗೆ ತಯಾರಿಸಿ, ಕಂತಿಭಿಕ್ಷೆಗೆ ಬಂದ ಜಂಗಮರಿಗೆ ಹಾಗೂ ಇತರರಿಗೆ/ಹಸಿದವರಿಗೆ ಹಂಚುವುದನ್ನು ದಾಸೋಹವೆಂದೇ ಪರಿಗಣಿಸಬೇಕು.

ದಾಸೋಹ ಪ್ರಸಾದ ಸೇವನೆಯ ಪರಿಣಾಮವನ್ನು ಹೇಳುವ ಬಸವಣ್ಣನವರ ವಚನದ ಸಾಲುಗಳು ಹೀಗಿವೆ:

**ಆನು ನಿಮ್ಮ ಶರಣರ ಒಕ್ಕುದನುಂಡು ಬದುಕಿದೆನಯ್ಯಾ**
**ಮೇರುವ ಸಾರಿದ ಕಾಗೆ ಹೊಂಬಣ್ಣವಪ್ಪುದು ತಪ್ಪದು**
**ಕೂಡಲಸಂಗಮದೇವಾ (೪೭೧)**

ದಾಸೋಹದಲ್ಲಿ ಸಂಗ್ರಹವಾದ ಪ್ರಸಾದವನ್ನು ಸ್ವೀಕರಿಸುವುದರಿಂದ ಉಂಟಾಗುವ ಪರಿಣಾಮವನ್ನು ಹೇಳುವಲ್ಲಿ, ಮೇರುಪರ್ವತಕ್ಕೆ ಹಾರಿದ ಕಾಗೆಯ ಬಣ್ಣವೆ ಬದಲಾಗಿ ಬಂಗಾರ ಬಣ್ಣವಾದಂತಾಗಿದೆ ತಮ್ಮ ವ್ಯಕ್ತಿತ್ವದ ಘನತೆ ಎನ್ನುತ್ತಾರೆ. ತಮ್ಮನ್ನು ಕಾಗೆಗೆ ಹೋಲಿಸಿಕೊಳ್ಳುವಲ್ಲಿ ಹಿಂಜರಿಯದ ಬಸವಣ್ಣನವರ ಮನೋಭಾವವನ್ನು ಇಲ್ಲಿ ಗಮನಿಸಬೇಕು. ದಾಸೋಹದ ಪ್ರಸಾದ ಸೇವನೆಯಿಂದ ಹೀಗೆ ಅಗಾಧವಾದ ಬದಲಾವಣೆಯಾಗುತ್ತದೆ ಎಂಬುದು ಬಸವಣ್ಣನವರ ವಿಚಾರವಾಗಿದೆ.

### ಪದಾರ್ಥವು ಪ್ರಸಾದವಾಗುವ ಪ್ರಕ್ರಿಯೆ

ಸಂಗ್ರಹಿಸಿದ ದವಸಧಾನ್ಯಗಳು, ಆಹಾರ ಪ್ರದಾರ್ಥಗಳು, ಸಂಪತ್ತು ಪ್ರಸಾದವಾಗುವ ಬಗೆಯನ್ನು ಚೆನ್ನಬಸವಣ್ಣನವರು ಹೀಗೆ ಹೇಳುತ್ತಾರೆ:

**ಲಿಂಗಕ್ಕೆ ಕೊಟ್ಟುಕೊಂಡರೆ ಪ್ರಸಾದ**
**ಜಂಗಮವಾರೋಗಣೆಯ ಮಾಡಿ ಮಿಕ್ಕುದು ಪ್ರಸಾದ**
**ಇದೆ ಪ್ರಸಾದದಾದಿ ಕಂಡಯ್ಯಾ (೨೪೭)**

ಸಜ್ಜನರು ತಮ್ಮ ಮನೆಯಲ್ಲಿ ಸಂಗ್ರಹವಾದ ತಮ್ಮ ಕಾಯಕದಿಂದ ಬಂದ ಯಾವುದೇ ಬಗೆಯ ಪದಾರ್ಥವನ್ನು ಅದು ತನ್ನದಲ್ಲ, ಎಲ್ಲ ಶಿವನ ಸೊಮ್ಮು ಎಂಬ ಭಾವದಿಂದ ಮೊದಲು ಶಿವನಿಗೆ (ಲಿಂಗಕ್ಕೆ) ಅರ್ಪಿಸಬೇಕು. ಜೊತೆಗೆ ಜಂಗಮಕ್ಕೆ ಅಂದರೆ ಸಾಮಾಜಿಕರಿಗೆ, ಅವಶ್ಯಕತೆ ಇದ್ದವರಿಗೆ ದಾಸೋಹ ಮಾಡಬೇಕು. ನಂತರ ತಮ್ಮಲ್ಲಿ ಮಿಕ್ಕದ್ದು–ಉಳಿದದ್ದು

ಪ್ರಸಾದವೆನಿಸುತ್ತದೆ. ಅದು ತನಗೆ, ತನ್ನ ಕುಟುಂಬಕ್ಕೆ ಬಳಸಿಕೊಳ್ಳಲು ಯೋಗ್ಯವಾಗುತ್ತದೆ ಎಂಬುದು ಚೆನ್ನಬಸವಣ್ಣನವರ ಆಲೋಚನೆ. ಈ ಆಲೋಚನೆ ಬಸವಣ್ಣ, ಅಲ್ಲಮರಾದಿಯಾಗಿ ಎಲ್ಲ ಶರಣರಲ್ಲೂ ಕಂಡುಬರುತ್ತದೆ.

**ತನ್ನ ಶ್ರೀಗುರುವಿಂಗೆ ಸಕಲ ಪದಾರ್ಥವ ಕೊಟ್ಟು ಕೊಂಡಡೆ ಪ್ರಸಾದ, ತನ್ನ ಪ್ರಾಣಲಿಂಗಕ್ಕೆ ಸಕಲ ಪದಾರ್ಥವ ಕೊಟ್ಟು ಕೊಂಡಡೆ ಪ್ರಸಾದ, ಜಂಗಮಕ್ಕೆ ಸಕಲ ಪದಾರ್ಥವ ಕೊಟ್ಟು ಕೊಂಡಡೆ ಪ್ರಸಾದ, ಇದೇ ಪ್ರಸಾದದ ಹಾದಿ ಕಂಡಯ್ಯಾ**

(ಸಂ.ವ.೭೬೬)

ಇದು ಸೊಡ್ಡಳ ಬಾಚರಸರ ವಿವರಣೆ. ಭಕ್ತನು ಸತ್ಯ ಶುದ್ಧ ಕಾಯಕದಿಂದ ಸಂಗ್ರಹಿಸಿದ (ಒಕ್ಕಿದ) ಪದಾರ್ಥವನ್ನು (ಸಂಪತ್ತನ್ನು) ಮೊದಲು ಭಕ್ತಿಯಿಂದ ಲಿಂಗಕ್ಕೆ ಅರ್ಪಿಸಿ, ಗುರುವಿನ ಆರೋಗಣೆ ಮಾಡಿ, ಜಂಗಮ ದಾಸೋಹ ಮಾಡಬೇಕು. ಹೀಗೆ ಗುರುಲಿಂಗಜಂಗಮಕ್ಕೆ ಅರ್ಪಣೆಯಾಗುವ ಪದಾರ್ಥ ಪ್ರಸಾದವಾಗಿ ಪರಿವರ್ತನೆ ಹೊಂದುತ್ತದೆ. ನಂತರ ತನ್ನಲ್ಲಿ ಉಳಿಯುವುದು 'ಮಿಕ್ಕಪ್ರಸಾದ' ಎನಿಸುತ್ತದೆ.

**ಗುರು ಲಿಂಗ ಜಂಗಮಕ್ಕೆ ಅರ್ಪಿತವ ಮಾಡಿ**
**ಒಕ್ಕುಮಿಕ್ಕ ಪ್ರಸಾದವ ಭೋಗಿಸುವಲ್ಲಿ**
**ಪದಾರ್ಥವೆಂದು ಭಾವಿಸಿದಡೆ ಪ್ರಸಾದ ದ್ರೋಹ**

(ಚೆ. ಬ. ೫೯೭)

ದಾಸೋಹಕ್ಕಾಗಿ ಸಲ್ಲಿಸುವ ಸಂಪತ್ತು, ದವಸಧಾನ್ಯ, ತಯಾರಿಸಿದ ಆಹಾರ ಇವು ಪದಾರ್ಥಗಳೆನಿಸುತ್ತವೆ. ಇವನ್ನು ಗುರುಲಿಂಗಜಂಗಮಕ್ಕೆ ಅರ್ಪಿಸಿದ ನಂತರ ಉಳಿಯುವ ಪ್ರಸಾದವನ್ನು ತಾನು ಉಪಭೋಗಿಸುವಲ್ಲಿ ಅದನ್ನು ಪದಾರ್ಥವೆಂದು ಭಾವಿಸಲಾಗದು. ಒಮ್ಮೆ ಪ್ರಸಾದವಾದುದು ಮತ್ತೆ ಪದಾರ್ಥವೆನಿಸದು ಎಂಬುದು ಚೆನ್ನಬಸವಣ್ಣನವರ ಆಲೋಚನೆ.

ಈ ಮೇಲಿನ ವಿವೇಚನೆಯಂತೆ ಪ್ರಸಾದ ಪರಿಕಲ್ಪನೆ ಎರಡು ಹಂತಗಳಲ್ಲಿ ಬೆಳೆಯುವುದನ್ನು ಕಾಣುತ್ತೇವೆ. ೧. ಪದಾರ್ಥವು ಲಿಂಗಕ್ಕೆ ಅರ್ಪಣೆಯಾದ ನಂತರ ಶಿವನ ಕರುಣೆಯ ಭಾವ ಹೊತ್ತು ಅದು ಪ್ರಸಾದವೆನಿಸುತ್ತದೆ. ಈ ಪ್ರಸಾದವನ್ನು ಲಿಂಗಪ್ರಸಾದವೆಂದು ಕರೆಯಬಹುದು. ೨. ಈ ಲಿಂಗಪ್ರಸಾದದಿಂದ ಗುರುವಿನ ಹಾಗೂ ಜಂಗಮದ ಆರೋಗಣೆ ಮಾಡಬೇಕು. ಹೀಗೆ ಗುರು ಮತ್ತು ಜಂಗಮ ಇಬ್ಬರೂ ಲಿಂಗಪ್ರಸಾದ ಸ್ವೀಕರಿಸಿದ ನಂತರ ಉಳಿದುದು ಮಿಕ್ಕಪ್ರಸಾದ ಎನಿಸುತ್ತದೆ. ಇದನ್ನು ದಾಸೋಹಿ ತನ್ನ ಬದುಕಿಗಾಗಿ ಬಳಸಿಕೊಳ್ಳಬೇಕು.

ಈ ಕ್ರಮವನ್ನು ಅಂಬಿಗರ ಚೌಡಯ್ಯನವರು 'ಲಿಂಗಾಚಾರ' ಎನ್ನುತ್ತಾರೆ.

**ಅನಾದಿ ಗುರುಲಿಂಗಜಂಗಮದ ಅರ್ಚನೆ ಪೂಜೆಯ ಮಾಡಿ ಕಿಂಕುರ್ವಾಣದಿಂದ ಅವರ ಒಕ್ಕುಮಿಕ್ಕ ಪ್ರಸಾದವ ಹಾರೈಸುವುದೆ ಲಿಂಗಾಚಾರ**

(ಅಂಬಿಗರ ಚೌಡಯ್ಯ, ವ. ೩೬)

ಪದಾರ್ಥ ಲಿಂಗಕ್ಕೆ ಅರ್ಪಣೆ>ಲಿಂಗಪ್ರಸಾದ>ಗುರು, ಜಂಗಮದ ಆರೋಗಣೆ> ಮಿಕ್ಕಪ್ರಸಾದ = ಲಿಂಗಾಚಾರ.

**ಸತ್ಯಶುದ್ಧ ಕಾಯಕದ ಗಳಿಕೆ ದಾಸೋಹಕ್ಕೆ ಯೋಗ್ಯ :**

ದಾಸೋಹ ನಡೆಯುವುದು ಸದ್ಭಕ್ತರು ವ್ಯಯಿಸುವ ಸಂಪತ್ತಿನಿಂದ. ದಾಸೋಹಕ್ಕೆ ಸಲ್ಲಬೇಕಾದ ಯಾವುದೇ ಬಗೆಯ ಗಳಿಕೆ ಸತ್ಯಶುದ್ಧ ಕಾಯಕದಿಂದ ಬಂದುದಾಗಿರಬೇಕು ಎಂಬುದು ಶರಣರ ಕಟ್ಟುನಿಟ್ಟಾದ ನಿಯಮ. 'ಕಾರೆಯ ಸೊಪ್ಪಾದರೂ ಕಾಯಕದಿಂದ ಬಂದಿರಬೇಕು' ಎಂಬುದು ಅವರ ನಿಲುವು. ನುಲಿಯ ಚಂದಯ್ಯನವರು ಈ ಬಗೆಗೆ ಹೀಗೆ ಹೇಳುತ್ತಾರೆ:

**ಸತ್ಯ ಶುದ್ಧ ಕಾಯಕದಿಂದ ಬಂದ ದ್ರವ್ಯದಲ್ಲಿ**
**ಚಿತ್ತ ವಿಚ್ಛಂದವಾಗದಿರಬೇಕು**
**ನೇಮದ ಕೂಲಿಯಂದಿನ ನಿತ್ಯ ನೇಮದಲ್ಲಿ ಸಂದಿರಬೇಕು**
**ನೇಮದ ಕೂಲಿಯ ಬಿಟ್ಟು**
**ಹೇಮದಾಸೆಗೆ ಕಾಮಿಸಿ ದ್ರವ್ಯವ ಹಿಡಿದರೆ**
**ತಾ ಮಾಡುವ ಸೇವೆ ನಷ್ಟವಯ್ಯಾ**

(ಸಂ.೭, ವ.೧೩೨೬)

ವಚನದ ಈ ಕೆಳಗಿನ ಸಾಲುಗಳಲ್ಲಿ ಎರಡು ಸಂಗತಿಗಳು ಪ್ರಸ್ತಾಪವಾಗಿವೆ:

**'ಸತ್ಯ ಶುದ್ಧ ಕಾಯಕದಿಂದ ಬಂದ ದ್ರವ್ಯದಲ್ಲಿ**
**ಚಿತ್ತ ವಿಚ್ಛಂದವಾಗದಿರಬೇಕು'**

ಶರಣರು ಕೈಗೊಳ್ಳುವ ಕಾಯಕ ಅದು ಸತ್ಯ ಶುದ್ಧವಾಗಿರಬೇಕು. ಅಂದರೆ ಕೈಗೊಳ್ಳುವ ಕಾಯಕವು ಧರ್ಮ ಮತ್ತು ನೀತಿ ಮಾರ್ಗವನ್ನು ಹೊಂದಿರಬೇಕು. ನೈತಿಕತೆಗೆ ಕುಂದು ತರುವಂತಹ ಕೆಲಸ ಅದು ಕಾಯಕ

ಅನಿಸಿಕೊಳ್ಳಲಾರದು ಎಂಬ ನಿಯಮ ಮೊದಲನೆಯದು. ಸಂಪತ್ತು ಮನಸ್ಸಿನ ಮೇಲೆ ಅಗಾಧವಾದ ಪರಿಣಾಮವನ್ನು ಬೀರುವಂಥದ್ದು. ಕಾರಣ ತಾವು ಗಳಿಸಿದ ಸಂಪತ್ತಿನಿಂದ ಮನಸ್ಸು ಯಾವುದೇ ಗಳಿಗೆಯಲ್ಲಿ ವಿಚಲಿತವಾಗದಂತೆ ಎಚ್ಚರಿಕೆಯಿಂದ ಇರಬೇಕು ಎಂಬ ಕಠಿಣ ನಿಯಮ ಎರಡನೆಯದು. ಈ ಎರಡೂ ನಿಯಮಗಳಲ್ಲಿ ಮುಖ್ಯವಾಗಿ ಮನಸ್ಸು ವಿಚಲಿತವಾಗದಂತೆ ನಿಯಂತ್ರಣ ಹೊಂದುವ ಸಂಗತಿಯೇ ಪ್ರಸ್ತಾಪವಾಗಿದೆ.

**'ನೇಮದ ಕೂಲಿಯಂದಿನ ನಿತ್ಯನೇಮದಲ್ಲಿ ಸಂದಿರಬೇಕು'** ಎಂಬ ಸಾಲಿನಲ್ಲಿ ಕಾಯಕ ಅನುಸರಿಸುವ ನಿಯಮವು ಬದುಕು ಮತ್ತು ದಾಸೋಹಕ್ಕೆ ಸಂಬಂಧಿಸಿದೆ. 'ನೇಮದ ಕೂಲಿ'– ಅಂದರೆ ತಾನು ಗೈಯುವ ಸತ್ಯಶುದ್ಧ ಕಾಯಕದಿಂದ ಪ್ರತಿಫಲವಾಗಿ ಬರುವ ಸಂಪತ್ತು. **'ಅಂದಿನ ನಿತ್ಯನೇಮದಲ್ಲಿ ಸಂದಿರಬೇಕು'**– ಅಂದರೆ ಗೈದ ಕಾಯಕದ ಫಲವಾಗಿ ತನಗೆ ಬಂದ ಸಂಪತ್ತನ್ನು ತನ್ನ ಪ್ರತಿನಿತ್ಯದ ಬದುಕಿನಲ್ಲಿ ವ್ಯಯಿಸಬೇಕು. 'ನಿತ್ಯನೇಮ' ಎಂದರೆ ಪ್ರತಿದಿನ ಅನುಸರಿಸುವ ನಿಯಮ. ಅಂದರೆ ತನ್ನ ಸತ್ಯಶುದ್ಧ ಬದುಕು ಮತ್ತು ಪ್ರತಿನಿತ್ಯ ಮಾಡುವ ದಾಸೋಹ; ಈ ಎರಡೂ ತಾನು ದುಡಿದು ಗಳಿಸಿದ ಕೂಲಿಯಿಂದಲೇ ನಡೆಯಬೇಕು.

**'ನೇಮದ ಕೂಲಿಯಂದಿನ ನಿತ್ಯನೇಮದಲ್ಲಿ ಸಂದಿರಬೇಕು'** ಎಂಬ ಈ ಮಾತನ್ನು 'ಅಂದಂದಿನ ದುಡಿಮೆಯಿಂದ ಬಂದ ಕೂಲಿಯ ದ್ರವ್ಯವನ್ನು ಅಂದೇ ದಾಸೋಹ ಮಾಡಿ ಮುಗಿಸಬೇಕು' ಎಂಬ ಅರ್ಥ ಬರುವಂತೆ ನಮ್ಮ ಹಿರಿಯರು ಅರ್ಥೈಸುತ್ತ ಬಂದಿದ್ದಾರೆ. ಅಂದಿನ ದುಡಿಮೆಯ ಫಲವನ್ನು ಅಂದೇ ದಾಸೋಹದಿಂದ ವ್ಯಯಮಾಡಿ ಮುಗಿಸಿದರೆ, ಆ ಶರಣನು ತನಗೆ ಮತ್ತು ತನ್ನ ಕುಟುಂಬಕ್ಕೆ ಅವಶ್ಯವಾದುದನ್ನು ಹೇಗೆ ಪೂರೈಸಿಕೊಳ್ಳಬೇಕು? ರೋಗರುಜಿನುಗಳು ಬಂದರೆ ಗತಿಯೇನು? ಎಂಬ ಪ್ರಶ್ನೆಗಳನ್ನು ಎದುರಿಸುತ್ತ ಬರಲಾಗಿದೆ. ಹೀಗೆ ಮಾಡಿದರೆ ಶರಣರೇ ಹೇಳುವ 'ಮಿಕ್ಕಪ್ರಸಾದ' ಎಂಬುದು ಅರ್ಥ ಕಳೆದುಕೊಳ್ಳುತ್ತದೆ. ಶರಣ ನುಲಿಯ ಚಂದಯ್ಯನವರು ಹೇಳುವುದು 'ತನ್ನ ಪ್ರತಿನಿತ್ಯ ಜೀವನದ ಚಟುವಟಿಕೆಗಳಲ್ಲಿ ತನ್ನ ದುಡಿಮೆಯಿಂದ ಬಂದ ಸಂಪತ್ತನ್ನೇ ತೊಡಗಿಸಬೇಕು' ಎಂದು. ಇಲ್ಲಿ ಈ ಬಗೆಯ ಅರ್ಥವೇ ಹೊರಡುತ್ತದೆ ಎಂಬುದಕ್ಕೆ ನಮಗೆ ವಚನದ ಮುಂದಿನ ಎರಡ್ಮೂರು ಸಾಲುಗಳು ಸಹಾಯಕ್ಕೆ ಬರುತ್ತವೆ.

**ನೇಮದ ಕೂಲಿಯ ಬಿಟ್ಟು**
**ಹೇಮದಾಸೆಗೆ ಕಾಮಿಸಿ ದ್ರವ್ಯವ ಹಿಡಿದರೆ**
**ತಾ ಮಾಡುವ ಸೇವೆ ನಷ್ಟವಯ್ಯಾ**

ತನ್ನ ದುಡಿಮೆಗೆ ಬರುವ ಸಂಭಾವನೆಯನ್ನು ಬಿಟ್ಟು, ಇನ್ನಷ್ಟು ಸಂಪತ್ತಿನ ವ್ಯಾಮೋಹಕ್ಕೆ ಒಳಗಾಗಿ ಅನ್ಯಮಾರ್ಗದಿಂದ ಧನವ ಸಂಪಾದನೆ ಮಾಡಿದರೆ, ಅದರಿಂದ ತಾನು ಮಾಡುವ ಒಳ್ಳೆಯ ಕೆಲಸವೂ ವ್ಯರ್ಥವಾಗಿ ಹೋಗುತ್ತದೆ. ಹೀಗಾಗಿ ತನ್ನ ಕಾಯಕದಿಂದ ಬರುವ ಕೂಲಿಯಲ್ಲಿಯೇ ತನ್ನ ಪ್ರತಿನಿತ್ಯದ ಬದುಕು ಮತ್ತು ದಾಸೋಹ ಚಟುವಟಿಕೆಗಳು (ನಿತ್ಯನೇಮ) ನಡೆಯಬೇಕು ಎಂಬ ಅರ್ಥದಲ್ಲಿ 'ನೇಮದ ಕೂಲಿಯಂದಿನ ನಿತ್ಯ ನೇಮದಲ್ಲಿ ಸಂದಿರಬೇಕು' ಎಂಬ ಮಾತಿನ ಅರ್ಥ ಇಟ್ಟುಕೊಳ್ಳುವುದು ಉಚಿತವೆನಿಸುತ್ತದೆ. ಈ ವಿಚಾರವನ್ನು ನುಲಿಯ ಚಂದಯ್ಯನವರ ಇನ್ನೊಂದು ವಚನದಲ್ಲಿ ಕಾಣಬಹುದಾಗಿದೆ.

> **ಕಂದಿಸಿ ಕುಂದಿಸಿ ಬಂಧಿಸಿ ಕಂಡವರ ಬೇಡಿ ತಂದು ಜಂಗಮಕ್ಕೆ ಮಾಡಿದೆನೆಂಬ ದಂದುಗದೋಗರ ಲಿಂಗಕ್ಕೆ ನೈವೇದ್ಯ ಸಲ್ಲ. ತನು ಕರಗಿ ಮನ ಬಳಲಿ ಬಂದ <u>ಚರದ</u> ಅನುವರಿತು ಸಂದಿಲ್ಲದೆ ಸಂಶಯವಿಲ್ಲದೆ ಜಂಗಮಲಿಂಗಕ್ಕೆ ದಾಸೋಹವ ಮಾಡುವುದೇ ಮಾಟ, ಕಾಶಿಯ ಕಾಯಿ ಕಾಡಿನ ಸೊಪ್ಪಾಯಿತ್ತಾದಡೂ ಕಾಯಕದಿಂದ ಬಂದುದು ಲಿಂಗಾರ್ಪಿತ ಚನ್ನಬಸವಣ್ಣಪ್ರಿಯ ಚಂದೇಶ್ವರಲಿಂಗಕ್ಕೆ ನೈವೇದ್ಯ ಸಂದಿತ್ತು.**
>
> (ಸಂ.೭, ವ.೧೨೯೧)

ಈ ವಚನದಲ್ಲಿ ಮೂರು ಸಂಗತಿಗಳನ್ನು ಚಂದಯ್ಯನವರು ಸ್ಪಷ್ಟಪಡಿಸಿದ್ದಾರೆ. ವಚನದ ಎರಡೆರಡು ಸಾಲುಗಳಲ್ಲಿ ಒಂದೊಂದು ಸಂಗತಿಯ ಪ್ರಸ್ತಾಪ ಮತ್ತು ಸ್ಪಷ್ಟತೆ ಇದೆ.

**ಕಂದಿಸಿ ಕುಂದಿಸಿ ಬಂಧಿಸಿ ಕಂಡವರ ಬೇಡಿ ತಂದು ಜಂಗಮಕ್ಕೆ ಮಾಡಿದೆನೆಂಬ ದಂದುಗದೋಗರ ಲಿಂಗಕ್ಕೆ ನೈವೇದ್ಯ ಸಲ್ಲ.**

'ಕಂದಿಸಿ ಕುಂದಿಸಿ ಬಂಧಿಸಿ' ಎಂಬಲ್ಲಿ ಬರುತ್ತಿರುವ ಅರ್ಥ ಸ್ಪಷ್ಟವಾಗುತ್ತಿಲ್ಲ. ಇದಕ್ಕೆ 'ಕಾಡಿ ಬೇಡಿ' ಎಂದು ಅರ್ಥೈಸಿಕೊಂಡರೆ ಸಾಕೆನಿಸುತ್ತದೆ. 'ಕಂಡವರ ಬೇಡಿ ತಂದು' ಎಂಬುದು ಸ್ಪಷ್ಟವಾದ ಅರ್ಥ ಕೊಡುತ್ತಿದೆ. ಯಾರ್‍ಯಾರದೋ ಮುಂದೆ ಗೋಗರೆದು ಅವರಲ್ಲಿ ಕಾಡಿಬೇಡಿ ತಂದ ಸಂಪತ್ತಿನ ಪ್ರಸ್ತಾಪ ಇಲ್ಲಿದೆ ಎಂದು ಇಟ್ಟುಕೊಳ್ಳಬಹುದು. ಹೀಗೆ

ಕಾಯಕದಿಂದ ಗಳಿಸಿದ ಸಂಪತ್ತಿನಿಂದಲ್ಲದ ದುಡ್ಡಿನಿಂದ ಲಿಂಗಕ್ಕೆ ನೈವೇದ್ಯ ಸಲ್ಲದು, ಜಂಗಮಾರೋಗಣೆ ಆಗದು ಎಂಬುದು ಚಂದಯ್ಯನವರ ಅಭಿಪ್ರಾಯ.

**ತನು ಕರಗಿ ಮನ ಬಳಲಿ ಬಂದ ಚರದ ಅನುವರಿತು**
**ಸಂದಿಲ್ಲದೆ ಸಂಶಯವಿಲ್ಲದೆ ಜಂಗಮಲಿಂಗಕ್ಕೆ**
**ದಾಸೋಹವ ಮಾಡುವುದೇ ಮಾಟ.**

ಇಲ್ಲಿಯ ಮೊದಲ ಸಾಲಿನಲ್ಲಿಯ **'ಚರದ'** ಎಂಬ ಪದ ಸರಿಯಾದ ಅರ್ಥಕೊಡುತ್ತಿಲ್ಲ. ಅಲ್ಲಿ **'ಕೂಲಿ'** ಎಂಬ ಅರ್ಥಕೊಡುವ ಪದ ಇರಬೇಕು. ಇಲ್ಲವೆ 'ಚರದ' ಪದವನ್ನು ತೆಗೆದುಹಾಕಬೇಕು. (ಡಾ. ಎಲ್. ಬಸವರಾಜು ಅವರು ಸಂಪಾದಿಸಿದ 'ಶಿವಗಣಪ್ರಸಾದಿ ಮಹಾದೇವಯ್ಯನ ಪ್ರಭುದೇವರ ಶೂನ್ಯಸಂಪಾದನೆ'ಯಲ್ಲಿ 'ಚರದ' ಎನ್ನುವ ಪದ ಇಲ್ಲ, ಪು.೩೧೩). ಮೊದಲಿನ ವಚನದಲ್ಲಿ ಹೇಳಿದಂತೆ ಕಾಯಕ ಎಂಬುದು ಸತ್ಯಶುದ್ಧವಾಗಿರಬೇಕು. ಸ್ವತಃ ತನ್ನ ದೇಹ-ಮನಸ್ಸುಗಳನ್ನು ಬಳಲಿಸಿ ಅದರಿಂದ ಬಂದ ಗಳಿಕೆಯಿಂದಲೇ 'ಅನುವನರಿತು' ಅಂದರೆ ಯಾವುದಕ್ಕೆ ಎಷ್ಟು ಸಂಪತ್ತನ್ನು ಸವೆಸಬೇಕು ಎಂಬುದನ್ನು ಚಿಂತಿಸಿ, ಮನದಲ್ಲಿ ಯಾವುದೇ ಸಂದೇಹಕ್ಕೆ ಎಡಗೊಡದೆ ಗುರುಲಿಂಗಜಂಗಮಕ್ಕೆ ದಾಸೋಹವ ಮಾಡಬೇಕು ಎನ್ನುತ್ತಾರೆ ಶರಣ ನುಲಿಯ ಚಂದಯ್ಯ. ಶ್ರಮದಿಂದ ಬಂದ ಸಂಪತ್ತಿನಿಂದ ಮಾತ್ರ ಲಿಂಗಕ್ಕೆ ನೈವೇದ್ಯ, ಗುರುವಿಗೆ ಆರೋಗಣೆ ಹಾಗೂ ಜಂಗಮಕ್ಕೆ ದಾಸೋಹ ಸಲ್ಲುತ್ತದೆ ಎಂಬುದು ಇಲ್ಲಿ ಸ್ಪಷ್ಟವಾಗುತ್ತದೆ. ಯಾರ‍್ಯಾರಿಂದಲೋ ಬೇಡಿ ತಂದು ಅಂದರೆ ಸಾಲಸೂಲ ಮಾಡಿ, ಸುಳ್ಳು ಹೇಳಿ, ಕದ್ದು ತಂದು ಮಾಡುವ ದಾಸೋಹ ಗುರುಲಿಂಗಜಂಗಮಕ್ಕೆ ಸಲ್ಲುವುದಿಲ್ಲ. ಅದು ತನ್ನ ದುಡಿಮೆಯ ಫಲ ಮಾತ್ರದಿಂದ ನಡೆಸಬೇಕಾದ ಕ್ರಿಯೆ.

**'ಕಾಶಿಯ ಕಾಯಿ ಕಾಡಿನ ಸೊಪ್ಪಾಯಿತ್ತಾದಡೂ**
**ಕಾಯಕದಿಂದ ಬಂದುದು ಲಿಂಗಾರ್ಪಿತ'**

ಒಂದು ಸಾಮಾನ್ಯವಾದ ಗಿಡದ ಕಾಯಿ, ಕಾಡಿನ ಸೊಪ್ಪಾದರೂ ಸರಿ ಅದನ್ನು ಸುಮ್ಮನೆ ಹರಿದು ತಂದುದಾದರೆ ಲಿಂಗಕ್ಕೆ ಅರ್ಪಿತವಾಗಲಾರದು. ಅದೇನಿದ್ದರೂ ಕಾಯಕದಿಂದ ಬಂದುದು ಮಾತ್ರ ಲಿಂಗಕ್ಕೆ ಅರ್ಪಿಸಲು ಯೋಗ್ಯ, ಗುರುವಿನ ಆರೋಗಣೆಗೆ, ಜಂಗಮ ದಾಸೋಹಕ್ಕೆ ಯೋಗ್ಯ. ಹಾಗಿಲ್ಲದಿದ್ದರೆ ತಾನೇನು ಮಾಡಿದರೂ ಅದೆಲ್ಲ ವ್ಯರ್ಥ ಎನ್ನುವುದು ಚಂದಯ್ಯನವರ ಚಿಂತನೆಯಾಗಿದೆ.

ನುಲಿಯ ಚಂದಯ್ಯನವರು ಈ ಎರಡು ವಚನಗಳಲ್ಲಿ ಹೇಳಿದ ಒಟ್ಟು ಸಂಗತಿಯನ್ನು ಒಂದೆರಡು ಮಾತುಗಳಲ್ಲಿ ಚೆನ್ನಬಸವಣ್ಣನವರು ಹೀಗೆ ಹೇಳುತ್ತಾರೆ:

**ತನು ಮನ ಬಳಲದೆ ಉದ್ದಂಡ ವೃತ್ತಿಯಲ್ಲಿ ಧನವ ಗಳಿಸಿ**
**ಗುರುಲಿಂಗಜಂಗಮಕ್ಕೆ ವೆಚ್ಚಿಸಿ, ದಾಸೋಹವ ಮಾಡಿ**
**ಭಕ್ತನಾದೆನೆಂಬವನ ತೋರದಿರಯ್ಯಾ**
(೧೨೫೩)

ಗುರುಲಿಂಗಜಂಗಮ ದಾಸೋಹಕ್ಕೆ ಸಲ್ಲಬೇಕೆಂದರೆ ಅದು ತನ್ನ ತನುಮನಗಳನ್ನು ಬಳಲಿಸಿ ಗಳಿಸಿದ ಧನವಾಗಿರಬೇಕು. ಉದ್ದಂಡ ವೃತ್ತಿಯಿಂದ ಗಳಿಸಿದ ಸಂಪತ್ತು ಶರಣರ ದೃಷ್ಟಿಯಲ್ಲಿ ಅದು ಕನಿಷ್ಟವಾದುದು. ಹೀಗೆ ಗಳಿಸಿ ದಾಸೋಹ ಮಾಡುವವ ಭಕ್ತನೆಂದೆನಿಸಲಾರನು. ಲದ್ದೆಯ ಸೋಮಣ್ಣನವರು ಹೇಳುತ್ತಾರೆ:

**ಆವ ಕಾಯಕವಾದಡೂ ಸ್ವಕಾಯಕವ ಮಾಡಿ**
**ಗುರುಲಿಂಗ ಜಂಗಮದ ಮುಂದಿಟ್ಟು**
**ಒಕ್ಕುದ ಹಾರೈಸಿ, ಮಿಕ್ಕುದು ಕೈಕೊಂಡು**

(ಸಂ.೯, ವ.೨೦)

ಈ ಎಲ್ಲ ಸಮೀಕ್ಷೆಯಿಂದ ಗೊತ್ತಾಗುವುದೆಂದರೆ ಸತ್ಯಶುದ್ಧ ಕಾಯಕವನ್ನು ತಾನು ಸ್ವತಃ ಗೈಯ್ಯಬೇಕು. ಅದರಿಂದ ಬಂದ ಕೂಲಿಯಿಂದ ಅಹಮಿಕೆಗೆ ಒಳಗಾಗದೆ ಇದ್ದು, ಭಕ್ತಿಯಿಂದ ಲಿಂಗಕ್ಕೆ ಅರ್ಪಿಸಿ, ಗುರುವಿಗೆ ಆರೋಗಣೆ ಮಾಡಿ, ಜಂಗಮಕ್ಕೆ ದಾಸೋಹವ ಮಾಡಿ, ಮಿಕ್ಕುದ್ದನ್ನು ತಮ್ಮ ಬದುಕಿಗೆ ಬಳಸಿಕೊಳ್ಳಬೇಕು. ಇದು ಒಬ್ಬ ಶರಣನ ಜೀವನದ ನಿತ್ಯಕ್ರಮವಾಗಿರಬೇಕು ಎಂಬುದು ಶರಣರ ಅಭಿಮತವಾಗಿದೆ.

**ಸಹಾಯಕ ಗ್ರಂಥಗಳು :**

೧. ಪ್ರಭುದೇವರ ಶೂನ್ಯ ಸಂಪಾದನೆ (ಶಿವಗಣಪ್ರಾಸಾದಿ ಮಹಾದೇವಯ್ಯ), ಸಂ. ಎಲ್. ಬಸವರಾಜು, -ಶ್ರೀ ಶರಣಬಸವೇಶ್ವರ ವಿದ್ಯಾವರ್ಧಕ ಸಂಘ, ಕಲಬುರಗಿ, ೨೦೦೪.

೨. ಸಮಗ್ರ ವಚನ ಸಂಪುಟಗಳು, -ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೧೯೯೩.

■■

# ಬಸವಣ್ಣ ಎತ್ತಲ್ಲ, ವಿಶ್ವಮಾನವ

● ಪೂಜ್ಯಶ್ರೀ ಡಾ. ಬಸವಲಿಂಗ ಪಟ್ಟದ್ದೇವರು

ವಿಜಯವಾಣಿ ದಿನಪತ್ರಿಕೆಯಲ್ಲಿ ದಿನಾಂಕ ೧೨, ಮೇ ೨೦೨೦ ರಂದು "ಬಸವಣ್ಣ, ಎತ್ತು ಮತ್ತು ಬ್ರಾಹ್ಮಣ...." ಎಂಬ ಶೀರ್ಷಿಕೆಯಲ್ಲಿ ಡಾ. ಸಂಗಮೇಶ ಸವದತ್ತಿಮಠ ಅವರ ಒಂದು ಲೇಖನ ಪ್ರಕಟವಾಗಿದೆ. ಅದರಲ್ಲಿ ಅವರು ಇತ್ತೀಚಿಗೆ ಬಸವ ಜಯಂತಿಯ ಸಂದರ್ಭದಲ್ಲಿ ಶಾಮನೂರು ಶಿವಶಂಕರಪ್ಪನವರು ಬಸವಣ್ಣನವರನ್ನು ಎತ್ತಿಗೆ ಹೋಲಿಸಿ ಪೂಜೆ ಮಾಡಿದ್ದು ಹಾಗೂ ರಂಭಾಪುರಿ ಶ್ರೀಗಳ ಬಸವಣ್ಣನವರು ವೀರಶೈವ ಧರ್ಮಕ್ಕೆ ಮಾರು ಹೋಗಿ ವೀರಶೈವ ಧರ್ಮವನ್ನು ಸ್ವೀಕರಿಸಿದರು ಎಂಬ ಹೇಳಿಕೆಯನ್ನು ಸಮರ್ಥಿಸುವ ಉದ್ದೇಶ ಹೊಂದಿದ್ದಾರೆ ಎಂಬುದು ಸ್ಪಷ್ಟವಾಗಿ ಗೊತ್ತಾಗುತ್ತದೆ.

ಸವದತ್ತಿಮಠರವರು ತಮ್ಮ ಲೇಖನದಲ್ಲಿ ಪ್ರಸ್ತುತ ದಿನಮಾನಗಳಲ್ಲಿ ಧರ್ಮ, ಜಾತಿ, ಸತ್ಯ, ಮಿಥ್ಯ ಎಂಬ ವಿಷಯಗಳನ್ನು ಎತ್ತುವುದಕ್ಕೆ ಸಕಾಲವಲ್ಲ ಎನ್ನುತ್ತಾ ಮನುಷ್ಯರನ್ನು ವಿಭಜಿಸುವ ನೀತಿಯ ಬಗ್ಗೆ ಕನಿಕರ ವ್ಯಕ್ತಪಡಿಸಿದ್ದಾರೆ. ಅವರಿಗೆ ಇಷ್ಟೊಂದು ಮನುಷತ್ವ ಹಾಗೂ ಮಾನವೀಯತೆಯ ಬಗ್ಗೆ ಕಾಳಜಿ ಇದ್ದರೆ ಅವರು ಈ ಲೇಖನ ಬರೆಯುವ ಉದ್ದೇಶವೇನು? ಶತ–ಶತಮಾನಗಳಿಂದ ಜಾತಿ, ಧರ್ಮ, ವರ್ಗ, ಲಿಂಗಭೇದ ಹೆಸರಿನಲ್ಲಿ ಮನುಷ್ಯರನ್ನು ವಿಭಜಿಸಿದವರು ಯಾರು? ದೀನರು, ದಲಿತರು, ಅಸ್ಪೃಶ್ಯರು, ವೇಶ್ಯಯರು ಹಾಗೂ ಸಮಸ್ತ ಸ್ತ್ರೀಯರನ್ನು ಮೇಲೆತ್ತಿದ ಐತಿಹಾಸಿಕ ಮಹಾಪುರುಷರಾದ ವಿಶ್ವಗುರು ಬಸವಣ್ಣನವರನ್ನು ಎತ್ತಿಗೆ ಹೋಲಿಸಿದವರು ಯಾರು? ಲಿಂಗಾಯತ ಧರ್ಮ ಸಂಸ್ಥಾಪಕರಾದ ಬಸವಣ್ಣನವರನ್ನು ವೀರಶೈವ ಧರ್ಮದ ಪ್ರಚಾರಕರು ಎಂದು ಸುಳ್ಳು ಅಪಪ್ರಚಾರ ಮಾಡುತ್ತಿರುವವರು ಯಾರು? ಎಂಬ ಪ್ರಶ್ನೆಗಳಿಗೆ ಸವದತ್ತಿಮಠರವರು ಉತ್ತರಿಸುವರೆ?.

ಸವದತ್ತಿಮಠರವರು "ಬಸವಣ್ಣನವರು ತಾವೇ ಎತ್ತು (ವೃಷಭ) ಎಂದು ಸ್ವತಃ ಹೇಳಿಕೊಂಡಿದ್ದಾರಲ್ಲ ಅದಕ್ಕೇನಂತೀರಿ?" ಎಂಬ ಪ್ರಶ್ನೆ ಎತ್ತಿದ್ದಾರೆ. ಅದಕ್ಕೆ ಕೆಲವು ವಚನಗಳ ಹಾಗೂ ಪುರಾಣಗಳಲ್ಲಿರುವ ದಾಖಲೆ ನೀಡಿದ್ದಾರೆ. ಬಸವಣ್ಣನವರು ತಮ್ಮ ಒಂದು ವಚನದಲ್ಲಿ "ಚನ್ನಯ್ಯನ ಮನೆಯ ದಾಸನ ಮಗನು, ಕಕ್ಕಯ್ಯನ ಮನೆಯ ದಾಸಿಯ ಮಗಳು, ಇವರಿಬ್ಬರು ಹೊಲದಲು ಬೆರಣಿಗೆ ಹೋಗಿ, ಸಂಗವ ಮಾಡಿದರು ಇವರಿಬ್ಬರಿಗೆ ಹುಟ್ಟಿದ ಮಗ ನಾನು, ಕೂಡಲಸಂಗಮದೇವ ಸಾಕ್ಷಿಯಾಗಿ" (ವ.ಸಂ.೩೪೬) ಎಂದಿದ್ದಾರೆ. ಹಾಗಾದರೆ ಇದಕ್ಕೇನಂತೀರಿ ಸವದತ್ತಿಮಠರೆ? ಬಸವಣ್ಣನವರು ದಾಸಿಪುತ್ರರೆ? ಬಸವಣ್ಣನವರು ತಮ್ಮ ಇನ್ನೊಂದು ವಚನದಲ್ಲಿ "ಆನು ಭಕ್ತನಲ್ಲಯ್ಯ, ಆನು ವೇಷಧಾರಿಯಯ್ಯಾ, ಕಾಟುಗ, ಕೇತುಗ, ಪೋಲುಗ ಎಂಬುದು ಎನ್ನ ಹೆಸರು ಕೂಡಲಸಂಗಮದೇವ ನಿಮ್ಮ ಶರಣರ ಮನೆಯ ಮಗ ನಾನಯ್ಯ" (ವ.ಸಂ.೩೩೬) ಎಂದು ಹೇಳಿದ್ದಾರೆ. ಹಾಗಾದರೆ ಬಸವಣ್ಣನವರು ಭಕ್ತಿಹೀನರೆ? ವೇಷಧಾರಿಗಳೆ? ಬಸವಣ್ಣನವರು ಭಕ್ತಿಭಂಡಾರಿ ಅಲ್ಲವೇ? ಬಸವಣ್ಣನವರು ಒಬ್ಬ ಮಹಾನ್ ಚಳುವಳಿಯ ಸಂಘಟಕರು, ಧರ್ಮ ಸಂಸ್ಥಾಪಕರು ಹಾಗೂ ಸಮಾಜ ಶಾಸ್ತ್ರಜ್ಞರು. ಆದರೂ ಅವರು ತಮ್ಮ ಅನೇಕ ವಚನಗಳಲ್ಲಿ ವಿನಯ, ನಮ್ರತೆ, ಕಿಂಕರತ್ವವನ್ನು ತೋರಿಸುತ್ತಾರೆ. ತಳಸಮುದಾಯದ ಜನರಲ್ಲಿರುವ ನ್ಯೂನತೆಯನ್ನು, ಕೀಳರಿಮೆಯನ್ನು ಹೋಗಲಾಡಿಸಲು ತಮ್ಮನ್ನು ತಾವೇ ಭಕ್ತಿ ಇಲ್ಲದ ಬಡವ ನಾನಯ್ಯ, ಎನಗಿಂತ ಕಿರಿಯರಿಲ್ಲ ಹೀಗೆ ಅನೇಕ ಪದಗಳನ್ನು ಬಳಸಿದ್ದಾರೆ. ಎಂಬುದು ಸವದತ್ತಿಮಠರವರ ಅರಿವಿಗೆ ಬಂದಿಲ್ಲವೆ?.

ಸವದತ್ತಿಮಠರವರು ಬಸವಣ್ಣ, ಚನ್ನಬಸವಣ್ಣ, ಅಲ್ಲಮಪ್ರಭು ಮುಂತಾದವರ ವಚನಗಳನ್ನು ಉಲ್ಲೇಖಿಸಿ ಬಸವಣ್ಣನವರು ತಾವೇ ಸ್ವತಃ ಎತ್ತು (ವೃಷಭ) ಎಂದು ಹೇಳಿಕೊಂಡಿದ್ದಾರೆ ಎನ್ನುತ್ತಾರೆ. ಅವರು ಉಲ್ಲೇಖಿಸಿದ ಬಸವಣ್ಣನವರ ಒಂದು ವಚನ "ಆರನೇಯ ಭವಾಂತರದಲ್ಲಿ

ಹಿರೇಮಠ ಸಂಸ್ಥಾನ, ಭಾಲ್ಕಿ

ವೃಷಭನೆಂಬ ಗಣೇಶ್ವರನ ಮಾಡಿ...." ಹೀಗಿದೆ. ಈ ವಚನಕ್ಕೆ ಅನೇಕ ವಿದ್ವಾಂಸರು ಅರ್ಥೈಸಿದ್ದಾರೆ. ಅದರಲ್ಲಿ ಡಾ. ಎಚ್. ತಿಪ್ಪೇರುದ್ರಸ್ವಾಮಿ ಅರ್ಥೈಸಿದ ರೀತಿ ಹೀಗಿದೆ, "...ಹಿಂದಿನ ಜನ್ಮಗಳಲ್ಲಿ ತಾವು ಈ ಆರು ಗಣೇಶ್ವರಾಗಿದ್ದುದನ್ನು ಕಲ್ಪಿಸಿಕೊಂಡು ಏಳನೇ ಜನ್ಮದಲ್ಲಿ ಬಸವನೆಂಬ ಗಣೇಶ್ವರರಾಗಿರುವುದನ್ನು ಹೇಳುತ್ತಾರೆ. ಗಣೇಶ್ವರನಿಗೂ ಶಿವನಿಗೂ ಇರುವ ಗಾಢ ಸಂಬಂಧವೇ ತಮಗೂ ಶಿವನಿಗೂ ಇದೆಯೆಂಬುದನ್ನು ಈ ರೀತಿಯಲ್ಲಿ ವ್ಯಕ್ತಪಡಿಸಿದ್ದಾರೆಂದು ಭಾವಿಸಿದರೆ ಇದು ಹೆಚ್ಚು ಅರ್ಥವಾಗುತ್ತದೆ. ಎಲ್ಲೆಲ್ಲಿ ಶಿವಭಾವ ಇದೆಯೋ ಅಲ್ಲೆಲ್ಲಾ ಸೇವಾಭಾವವನ್ನು ತಳೆಯುವ ಸಮರ್ಪಣೆ ಇಲ್ಲಿದೆ. ಹೀಗೆ ಪೌರಾಣಿಕ ಕಲ್ಪನೆಯನ್ನು ಅವಲಂಬಿಸಿ ತಾತ್ವಿಕ ಅನುಭವದ ನಿಲವನ್ನು ನಿರೂಪಿಸಿರುವುದು ಇಲ್ಲಿ ಕಂಡುಬರುತ್ತದೆ. (ಬಸವೇಶ್ವರ ವಚನ ದೀಪಿಕೆ, ವಚನ ಸಂಖ್ಯೆ ೦೪). ಸವದತ್ತಿಮಠರವರಂತಹ ಹಿರಿಯ ಸಂಶೋಧಕರಿಗೆ ವಚನಗಳನ್ನು ಅರ್ಥೈಸುವ ರೀತಿ ಗೊತ್ತಿಲ್ಲದಿರುವುದು ನಿಜಕ್ಕೂ ದುರಾದೃಷ್ಟಕರ.

ಸವದತ್ತಿಮಠರವರು ಮುಂದೆ ಹರಿಹರನ ರಗಳೆ ಹಾಗೂ ಬಸವಪುರಾಣ ದಾಖಲಿಸಿ ಕೆಲವು ಪೌರಾಣಿಕ ಕಲ್ಪನೆಯ ಪ್ರಸಂಗಗಳು ಉಲ್ಲೇಖಿಸಿದ್ದಾರೆ. ಅದರಲ್ಲಿ ಮಾದಲಾಂಬಿಕೆ ಮಾಡಿರುವ ನಂದಿ ವ್ರತ್ತ ಹಾಗೂ ಜಗತ್ತಿನಲ್ಲಿ ಪ್ರಾಚೀನ ಕಾಲದಿಂದಲೂ ಪ್ರಾಣಿಗಳನ್ನು ಸಂಕೇತಗಳನ್ನಾಗಿ ಬಳಸುವ ರೂಢಿ ಇದೆ ಎನ್ನುತ್ತಾರೆ. ಅದಕ್ಕಾಗಿ ಅವರು ದತ್ತಾತ್ರೇಯನಿಗೆ ನಾಯಿಗಳು, ಹಯವದನಿಗೆ ಕುದುರೆಮುಖ, ಹನುಮಂತನಿಗೆ ವಾನರ, ಗಣಪತಿಗೆ ಆನೆ ಮುಂತಾದ ಉದಾಹರಣೆಗಳನ್ನು ನೀಡಿದ್ದಾರೆ. ಈ ಎಲ್ಲಾ ಉದಾಹರಣೆಗಳು ಪೌರಾಣಿಕ ಕಲ್ಪನೆಗಳು ಅಷ್ಟೇ. ಇದರಲ್ಲಿ ಐತಿಹಾಸಿಕ ಮಹಾಪುರುಷರು ಯಾರಿದ್ದಾರೆ? ಪೌರಾಣಿಕ ಮಹಾಪುರುಷರ ಜೊತೆ ಐತಿಹಾಸಿಕ ಮಹಾಪುರುಷರಾದ ಬಸವಣ್ಣನವರಿಗೆ ಹೋಲಿಸುವುದು ಎಷ್ಟರಮಟ್ಟಿಗೆ ಸರಿ? ಸವದತ್ತಿಮಠರವರಿಗೆ ಇತಿಹಾಸ ಹಾಗೂ ಪುರಾಣಗಳ ಮಧ್ಯೆ ಇರುವ ವ್ಯತ್ಯಾಸ ಗೊತ್ತಿಲ್ಲವೆ? ಬಸವಣ್ಣನವರು ಐತಿಹಾಸಿಕ ಮಹಾಪುರುಷರು ಎಂಬುದು ಸವದತ್ತಿಮಠರವರಿಗೆ ಒಪ್ಪಿಗೆ ಇಲ್ಲದಂತೆ ಕಾಣುತ್ತದೆ.

ಸವದತ್ತಿಮಠರವರು ತಮ್ಮ ಲೇಖನದ ಮುಂದುವರಿದ ಭಾಗದಲ್ಲಿ ಬಸವಣ್ಣನವರ ಬ್ರಾಹ್ಮಣತ್ವದ ಬಗ್ಗೆ ಕೆಲವು ಮಾತುಗಳನ್ನು ಹೇಳಿದ್ದಾರೆ. ಆದರೆ ಈ ವಿಷಯದ ಬಗ್ಗೆ ಇತ್ತೀಚಿನ ದಿನಗಳಲ್ಲಿ ಯಾರು ಚರ್ಚೆ ಮಾಡಲಿಲ್ಲ. ಸವದತ್ತಿಮಠರವರು ರಂಭಾಪುರಿ ಶ್ರೀಗಳಿಗೆ ಬೆನ್ನಿಗೆ ಹಾಕುವ ಉದ್ದೇಶದಿಂದ ಯಾರು ವಾದಿಸದೆ ಇರುವ ಪ್ರಶ್ನೆಗೆ ಉತ್ತರ ನೀಡುವ ವ್ಯರ್ಥ ಪ್ರಯತ್ನ ಮಾಡಿದ್ದಾರೆ. ತಮ್ಮ ಅರೆ ಜಾಣತನದಿಂದ ಬಸವಣ್ಣನವರು ವೀರಶೈವ ಧರ್ಮವನ್ನು ಸ್ವೀಕರಿಸಿ ಈ ಧರ್ಮಪ್ರಸಾರ ಮಾಡಿದ್ದಾರೆ ಎಂಬ ರಂಭಾಪುರಿ ಶ್ರೀಗಳ ಹೇಳಿಕೆಗೆ ಉತ್ತರವಿಲ್ಲದ ಕಾರಣ ಇಂತಹ ಒಂದು ಅವಾಂತರ ಪ್ರಶ್ನೆಯನ್ನು ಮುಂಡಿಸಿದ್ದಾರೆ.

ವಿಶ್ವಗುರು ಬಸವಣ್ಣನವರ ತತ್ವಾದರ್ಶಗಳಿಗೆ ಶತ–ಶತಮಾನಗಳಿಂದ ದ್ರೋಹ ಬಗೆಯುತ್ತಾ ಬಸವ ನಿಷ್ಠರಾದ ಲಿಂಗಾಯತರ ಮೇಲೆ ಸವಾರಿ ಮಾಡುತ್ತಿರುವ ಕೆಲವು ದುಷ್ಟ ಶಕ್ತಿಗಳು ಇಂದು ಲಿಂಗಾಯತ ಸಮಾಜದ ಮೇಲೆ ತಮ್ಮ ಹತೋಟಿಯನ್ನು ಹಿಡಿದಿಡಲು ಶತಾಯಗತಾಯ ಪ್ರಯತ್ನ ಮಾಡುತ್ತಿವೆ. ಅವು ಎಂದಿಗೂ ಸಫಲವಾಗುವುದಿಲ್ಲ ಎಂಬುದನ್ನು ಸವದತ್ತಿಮಠರವರು ಮರೆಯಬಾರದು.

ಸಮಸ್ತ ಬಸವಾಭಿಮಾನಿಗಳು ಇಂದಿಗೂ ಎಲ್ಲರನ್ನೂ ಆಹ್ವಾನಿಸುತ್ತೇವೆ. "ಬನ್ನಿ, ನಮ್ಮ ಜೊತೆ ಲಿಂಗಾಯತ ಸ್ವತಂತ್ರ ಧರ್ಮ ಹೋರಾಟದಲ್ಲಿ ಕೈಜೋಡಿಸಿ. ನಮ್ಮ ಅಸ್ಮಿತೆಯ ಜೊತೆಗೆ ಲಿಂಗಾಯತರಲ್ಲಿರುವ ತಳಸಮುದಾಯಗಳನ್ನು ಮೇಲೆತ್ತೋಣ." ಸವದತ್ತಿಮಠರವರೆ, ಮನುಷ್ಯರನ್ನು ವಿಭಜಿಸುವುದು ನಮ್ಮ ತತ್ವವಲ್ಲ. "ಇವನಮ್ಮವ, ಇವನಮ್ಮವ, ಇವನಮ್ಮವ" ಎಂಬ ಬಸವ ವಾಣಿ ನಮಗೆ ಇಡೀ ಜಗತ್ತನ್ನು ಪ್ರೀತಿಸುವ ಸಂದೇಶ ನೀಡುತ್ತದೆ. ನಾವು ಅದೇ ಮಾರ್ಗದಲ್ಲಿ ಮುನ್ನಡೆಯುತ್ತಿದ್ದೇವೆ ಎಂಬ ಹೆಮ್ಮೆ ನಮಗಿದೆ.

■■

# ಬಸವಣ್ಣ ಎತ್ತಲ್ಲ

● ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು

೧೨, ಮೇ ೨೦೨೦ರ 'ವಿಜಯವಾಣಿ' ದಿನಪತ್ರಿಕೆಯಲ್ಲಿ ಬಂದಿರುವ ಡಾ. ಸಂಗಮೇಶ ಸವದತ್ತಿಮಠ ಅವರ 'ಬಸವಣ್ಣ, ಎತ್ತು ಮತ್ತು ಬ್ರಾಹ್ಮಣ' ಎನ್ನುವ ಲೇಖನ ನೋಡಿ ಅವರ ಜ್ಞಾನದ ಬಗ್ಗೆ ಮರುಕವುಂಟಾಯ್ತು. ಈ ವರ್ಷ (೨೬/೪) ಬಸವಜಯಂತಿಯ ಸಂದರ್ಭದಲ್ಲಿ ಎತ್ತುಗಳ ಪೂಜೆ ಮಾಡಿದ್ದವರ ಮತ್ತು ರಂಭಾಪುರಿ ಜಗದ್ಗುರುಗಳವರ ಪ್ರಸ್ತಾಪವನ್ನು 'ಈಗ' ಮಾಡಿ ಅವರೇ ಬರದಿರುವಂತೆ 'ಸಮಾಜವು ಪ್ರಶಾಂತವಾಗುತ್ತಿರುವ ಮತ್ತು ಕೊರೊನಾ ಸೋಂಕು ಜಗತ್ತಿನ ಮನುಷ್ಯ ಕುಲವನ್ನು ಹಿಂಡಿ ಹೈರಾಣ ಮಾಡುತ್ತಿರುವ ಇಂದಿನ ಸಂದರ್ಭದಲ್ಲಿ 'ಧರ್ಮ, ಜಾತಿ', 'ಅದು ಸತ್ಯ, ಇದು ಮಿಥ್ಯ' ಎಂಬ ಅಪ್ರಸ್ತುತ ವಿಷಯಗಳನ್ನು ಎತ್ತುತ್ತ ಮನುಷ್ಯರನ್ನು ವಿಭಜಿಸುವ ಇಂಥ ಜನರ ಮನಸ್ಥಿತಿಯನ್ನು ನೋಡಿ ಕನಿಕರ ಎನಿಸುತ್ತಿದೆ...' ಎಂದೆಲ್ಲ ಗೇಲಿ ಮಾಡುವ ರೀತಿಯಲ್ಲಿ ವಿಡಂಬಿಸಿ ತಾವೂ ಅದನ್ನೇ ಮಾಡುತ್ತಿದ್ದೇವೆ ಎನ್ನುವ ಸತ್ಯವನ್ನು ಮರೆತಿದ್ದಾರೆ. ಹಿಂದೆ ಸಾಮಾಜಿಕ ಜಾಲತಾಣಗಳಲ್ಲಿ ಬಂದಾಗಲೇ ಉತ್ತರಿಸಬೇಕಾಗಿತ್ತು. ಅದನ್ನು ಬಿಟ್ಟು ಈಗ ಈ ಪ್ರಸಂಗವನ್ನೆತ್ತಿರುವುದು 'ಶೋಚನೀಯ'.

ಡಾ. ಸಂಗಮೇಶ ಅವರ ಮೂಲ ಉದ್ದೇಶ ಬಸವಣ್ಣ ಎಂದರೆ ನಾಲ್ಕು ಕಾಲಿನ ಎತ್ತು ಎಂದು ಸಾಬೀತುಪಡಿಸುವುದು ಮತ್ತು ರಂಭಾಪುರಿ ಜಗದ್ಗುರುಗಳವರ ಹೇಳಿಕೆ ಸತ್ಯ ಎಂದು ದಾಖಲಿಸುವುದು. ಬಸವಣ್ಣ ನಾಲ್ಕು ಕಾಲಿನ ಎತ್ತಲ್ಲ. ಮನುಕುಲವನ್ನು ಎತ್ತಿ ಹಿಡಿದ ಪುಣ್ಯಾತ್ಮ. ಅವರನ್ನು ಎತ್ತಿಗೆ ಹೋಲಿಸುವುದು ತಮಗೆ ತಾವೇ ಅವಹೇಳನ ಮಾಡಿಕೊಂಡಂತೆ. ಗೋಯೆಲ್ ಹೇಳುವ 'ಮನುಷ್ಯರನ್ನು ಒಂದುಗೂಡಿಸುವುದೇ ನಿಜವಾದ ಧರ್ಮ, ಒಡೆಯುವುದು ಅಧರ್ಮ' ಎನ್ನುವ ತತ್ವವನ್ನು ಎತ್ತಿ ಹಿಡಿಯುವ ಕಾರ್ಯವನ್ನೇ ಬಸವಣ್ಣನವರು ತಮ್ಮ ಎಲ್ಲ ವಚನಗಳಲ್ಲಿ ಮಾಡಿದ್ದಾರೆಂದು ದಾಖಲೆ ಕೊಡಬೇಕಾಗಿಲ್ಲ. ವೃಷಭ ಎಂದರೆ ಎತ್ತಲ್ಲ. ಅವನು ಒಬ್ಬ ದೇವಲೋಕದ ಗಣಾಧೀಶ್ವರ. ವಚನಗಳನ್ನು ತಮಗೆ ಬೇಕಾದಂತೆ ಅರ್ಥ ಮಾಡಬಾರದು. ಅವರು ಪ್ರಸ್ತಾಪಿಸಿರುವ ವಚನಗಳಲ್ಲಿ ಸೃಷ್ಟಿಕ್ರಿಯೆಯ ವಿವರಣೆ ಇದೆಯಷ್ಟೆ. ಅಲ್ಲಿ ಶಿವನಿಗೂ ತಮಗೂ ಇರುವ ಗಾಢ ಸಂಬಂಧದ ಸಂಕೇತವಾಗಿ ಬಳಸಿದ್ದಾರೆಯೇ ಹೊರತು ತಾವು ನಾಲ್ಕು ಕಾಲಿನ ಎತ್ತಾಗಿದ್ದೇವೆಂದಲ್ಲ.

ಬಸವಣ್ಣನವರನ್ನು ಗುರು ಎಂದು ಒಪ್ಪದ ಹಲವರು ಏನೆಲ್ಲ ಸೃಷ್ಟಿ ಮಾಡಿ ಇಲ್ಲದ ಕಟ್ಟು ಕತೆಗಳನ್ನು ಕಟ್ಟುತ್ತಲೇ ಬಂದಿದ್ದಾರೆ; ಈಗಲೂ ಕಟ್ಟುವ ಕ್ರಿಯೆಯಲ್ಲಿ ನಿರತರಾಗಿದ್ದಾರೆ. ವಜ್ರ ಎಲ್ಲೇ ಇದ್ದರೂ ವಜ್ರವೇ. ಅದರ ಬೆಲೆಯನ್ನು ಯಾರೂ ಕಳೆಯಲು, ಕಡಿಮೆ ಮಾಡಲು ಸಾಧ್ಯವಿಲ್ಲ. ಸುಳ್ಳನ್ನು ಪದೇ ಪದೇ ಹೇಳಿದರೆ ಅದೇ ಸತ್ಯವಾಗುತ್ತದೆ ಎನ್ನುವ ಭ್ರಮೆ ಕೆಲವರಿಗೆ. ಆದರೆ ಅದು ಭ್ರಮೆಯೇ ಹೊರತು ಸತ್ಯವಲ್ಲ. ಸತ್ಯ ಯಾವಾಗಲೂ ಬಯಲಿನಲ್ಲೇ ಇರುವುದು. ಅದೆಂದಿಗೂ ಮುಖವಾಡ ಧರಿಸುವುದಿಲ್ಲ. ಶ್ರೀ ತರಳಬಾಳು ಜಗದ್ಗುರು ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳವರು ೧೯೬೭ ರಲ್ಲೇ 'ಶತಮಾನೋತ್ಸವ ಸಂದೇಶ' ಎನ್ನುವ ಬಿಡಿ ಲೇಖನಗಳ ಕೃತಿಯನ್ನು ಪ್ರಕಟಿಸಿದ್ದಾರೆ. ಆ ಕೃತಿಯ ಮೊದಲ ಲೇಖನವೇ 'ಬಸವಣ್ಣ ಎತ್ತಲ್ಲ' ಎನ್ನುವುದು. ಮಾನವರೂಪಿ ಬಸವಣ್ಣ ಎತ್ತಾದುದನ್ನು ಅದರಲ್ಲಿ ವಿವರಿಸುವರು. ಅವರ ಮಾತುಗಳನ್ನೇ ಓದಿ:

'ಬಸವಣ್ಣನ ನಂತರ ಆತನ ಸ್ಮಾರಕಗಳು ಎತ್ತುಗಳಾಗಿಯೇ ಚಿತ್ರಿಸಲ್ಪಟ್ಟವು. ಹೆಸರು ಬಸವಣ್ಣನದಾಯಿತು, ಆಕಾರ ಮಾತ್ರ ಎತ್ತುಗಳದೇ ಆಯಿತು. ಪರಿಣಾಮವಾಗಿ ಬಸವಣ್ಣನು ಹಿಂದಾದನು, ಎತ್ತು ಮುಂದಾಯಿತು. ಏಕೆಂದರೆ ಇಲ್ಲಿನ ಜನಸಾಮಾನ್ಯರು ಓದಿದವರಲ್ಲ. ಓದಿದವರಿದ್ದರೂ ವಿಚಾರ ವಿಮರ್ಶೆ ಮಾಡುವ ಪರಿಪಾಠದವರಲ್ಲ. ತತ್ಫಲವಾಗಿ ಕಲ್ಯಾಣದ ಕಣ್ಮಣಿ ಬಸವಣ್ಣನು ಜನರ ಸ್ಮೃತಿಪಟಲದಿಂದ ದೂರವಾಗಿ ನಿಂತನು. ಇದು ಕಾರಣ ಬಸವಣ್ಣ ಬಸವಣ್ಣನೇ ವಿನಾ ಎತ್ತಲ್ಲ. ಹಿಂದಿನ ಕಾಲವೇನಾದರಾಗಲಿ, ಮುಂದಿನ ಕಾಲದಲ್ಲಾದರೂ ಬಸವಣ್ಣನು ಬಸವಣ್ಣನಾಗಿಯೇ

ಉಳಿಯಬೇಕು. ಯಾವ ಸದುದ್ದೇಶವೇ ಇರಲಿ, ದುರುದ್ದೇಶವೇ ಇರಲಿ; ಜನತೆಯಲ್ಲಿ ದುರುಪಯೋಗವಾಗುವುದು, ತಪ್ಪು ಕಲ್ಪನೆ ಮಾಡಿಕೊಳ್ಳುವುದು, ಅಂಧಶ್ರದ್ಧೆಯನ್ನಿಡುವುದು ಸ್ವಾಭಾವಿಕ. ಬಸವಣ್ಣನು ಇವೆಲ್ಲಕ್ಕೂ ಕಡುವೈರಿ. ಅಂತೆಯೇ ಧಾರ್ಮಿಕ ರಂಗದಲ್ಲಿ ಮನೆಮಾಡಿಕೊಂಡಿದ್ದ ಅಂಧಶ್ರದ್ಧೆಯನ್ನು ನಿರ್ಮೂಲ ಮಾಡಲು ವಿಚಾರವೆಂಬ ಜೀಜ ಬಿತ್ತಿದನು. ಇಂತಹ ವಿಚಾರಧಾರಿಯಾದ ಬಸವಣ್ಣನ ಬಗ್ಗೆ ಇಂತಪ್ಪ ಅವಿಚಾರದ ವರ್ತನೆಗಳು ನಡೆಯಬಾರದು' ಎಂದು ಜನರನ್ನು ನಮ್ಮ ಗುರುಗಳು ಜಾಗೃತಿ ಮಾಡುತ್ತಲೇ ಬಂದಿದ್ದಾರೆ. ನಮ್ಮ ಗುರುಗಳ ಪರಮಶಿಷ್ಯರಲ್ಲೊಬ್ಬರಾಗಿದ್ದ ಸಾಹಿತಿ, ರಾಜಕಾರಣಿ, ಅಪರೂಪದ ಚಿಂತಕ ಡಾ. ಮಹಾದೇವ ಬಣಕಾರರು ಎತ್ತುಗಳ ಪೂಜೆ ಮಾಡುವವರನ್ನು ಕಂಡು ಬರೆದಿರುವ ವಚನ ನೋಡಿ.

**ಬಸವಣ್ಣಗೊಂದು ಗುಡಿಯ ಕಟ್ಟಿ,**
**ಬಸವಣ್ಣನೆಂದು ಪಶುವ ಪೂಜಿಪ,**
**ನರ ಪಶುಗಳಿಗೇನೆಂಬೆನಯ್ಯಾ?**
**ಬಸವಣ್ಣಂಗೆ ಕೋಡು, ಬಸವಣ್ಣಂಗೆ ಬಾಲ**
**ಬಸವಣ್ಣಂಗೆ ಪಶುವಿನಭಿದಾನ**
**ಅಂತಪ್ಪ ಚೋದ್ಯಕ್ಕೆ ಬೆಕ್ಕಸ ಬೆರಗಾಗಿರ್ಪೆನಯ್ಯಾ.**
**ಬಸವಣ್ಣನೆಂದರೆ ಗುರು,**
**ಬಸವಣ್ಣನೆಂದರೆ ಲಿಂಗ,**
**ಬಸವಣ್ಣನೆಂದರೆ ಜಂಗಮ,**
**ಬಸವಣ್ಣನೆಂದರೆ ಹರನ ಚಿತ್ ಸ್ವರೂಪ.**
**ಬಸವಣ್ಣನೆಂದರೆ ಬ್ರಹ್ಮಾಂಡ ಚೈತನ್ಯ,**
**ಬಸವಣ್ಣನೆಂದರೆ ಪಶುವೆಂಬವನ**
**ಬಾಯಲ್ಲಿ, ಬೀಳವೇ ಬಾಲಹುಳಂಗಳು?**
**ಎನ್ನ ವರಗುರು ಶಿವಕುಮಾರ ಪ್ರಭುವೆ.**

ಬಸವಣ್ಣನೆಂದರೆ ಎತ್ತೆಂದು ಪೂಜಿಸುತ್ತ ಬಂದವರು ಬಣಕಾರರ ಈ ವಚನದ ಸಾರವನ್ನು ಅರಿತಾದರೂ ತಮ್ಮ ಮನಸ್ಸಿನ ಕತ್ತಲೆ ಕಳೆದುಕೊಂಡರೆ ಸಂತೋಷ. ನಮಗೆ ಗೊತ್ತಿದ್ದಂತೆ ಈ ಹಿಂದೆ ಪಂಚಪೀಠದ ಬಹುತೇಕ ಗುರುಗಳು, ಜಗದ್ಗುರುಗಳವರಿಗೆ ಬಸವಣ್ಣನ ಹೆಸರು ಕೇಳಿದರೆ ಚೇಳು ಕುಟುಕಿದ ಅನುಭವವಾಗುತ್ತಿತ್ತು. ಹಾಗಾಗಿ ಅವರು ಬಸವಣ್ಣ ಭಕ್ತ, ನಾವು ಗುರುಗಳು ಎಂದು ಬಹಿರಂಗವಾಗಿಯೇ ಹೇಳುತ್ತಿದ್ದರು. ಬಸವಣ್ಣನ ಭಾವಚಿತ್ರದ ಕೆಳಗೆ ತಮ್ಮ ಉತ್ಸವ ಹೋದರೆ ಭಕ್ತನ ಪಾದದ ಕೆಳಗೆ ಹೋದಂತಾಗುತ್ತದೆ ಎಂದು ಸ್ವಾಗತ ಕಮಾನುಗಳಲ್ಲಿದ್ದ ಬಸವಣ್ಣನ ಫೋಟೋಗಳನ್ನೇ ಬಿಚ್ಚಿಸಿದ ಮಹಾನ್ ಜಗದ್ಗುರುಗಳೂ ಇದ್ದಾರೆ. ಅದೇ ಸ್ವಾಗತ ಕಮಾನುಗಳಿಗೆ ಇಳಿಬಿಟ್ಟಿದ್ದ ಶೂಟು, ಬೂಟು ಧರಿಸಿದ ನೆಹರು ಅವರ ಚಿತ್ರವನ್ನೂ ತೆಗೆಯಬೇಕೇ ಎಂದಾಗ 'ಇರಲಿ ಪರವಾಯಿಲ್ಲ' ಎಂದಿದ್ದರಂತೆ. ಅಂದರೆ ಅವರಿಗೆ ಬಸವಣ್ಣನವರ ಬಗ್ಗೆ ಎಷ್ಟೊಂದು ಮತ್ಸರ, ಹೊಟ್ಟೆಕಿಚ್ಚು ಇತ್ತು ಎನ್ನುವುದು ಇದರಿಂದಲೇ ವ್ಯಕ್ತವಾಗುವುದು. ಲಿಂಗಾಯತವೇ ಬೇರೆ, ವೀರಶೈವವೇ ಬೇರೆ ಎನ್ನುವ ವಾದ ಬಲವಾಗುತ್ತಿದ್ದಂತೆ ಅವರು ಸಹ ಜಾಗೃತರಾಗಿ ಬಸವಣ್ಣನವರ ವಚನಗಳನ್ನು ತಮ್ಮ ಆಶೀರ್ವಚನದಲ್ಲಿ ಪ್ರಸ್ತಾಪಿಸಲು ಮುಂದಾಗಿದ್ದಾರೆ. ಹಾಗಂತ ಅವರಿಗೆ ಬಸವಭಕ್ತಿ ಉದಯವಾಗಿದೆ ಎಂದು ಯಾರೂ ಭಾವಿಸಬೇಕಾಗಿಲ್ಲ.

**ಎನಗೆ ಗುರುಪಥವ ತೋರಿದವರಾರು?**
**ಲಿಂಗಪಥವ ತೋರಿದವರಾರು?**
**ಜಂಗಮಪಥವ ತೋರಿದವರಾರು?**
**ಪಾದೋದಕ ಪ್ರಸಾದ ಪಥವ ತೋರಿದವರಾರು?**
**ತೋರುವ ಮನವೆ ನೀವೆಂದರಿತೆ.**
**ಎನಗಿನ್ನಾವ ಭವವಿಲ್ಲ.**

ಬಸವಣ್ಣನವರ ಈ ವಚನದಲ್ಲಿ ಎನಗೆ ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ ಪಥವ ಯಾರೂ ತೋರಲಿಲ್ಲ. 'ತೋರುವ ಮನವೆ ನೀವೆಂದರಿತೆ' ಎಂದು ಸ್ಪಷ್ಟಪಡಿಸಿದ್ದಾರೆ. ಇವೆಲ್ಲ ಬಸವಣ್ಣನವರ ಹೃದಯದಲ್ಲೇ ಹುಟ್ಟಿದವು ಎಂದು ಶರಣರು ಮತ್ತೆ ಮತ್ತೆ ಸ್ಮರಿಸಿಕೊಳ್ಳುವರು. ಹಾಗಾಗಿ ಅನುಭಾವಿ, ವಯೋವೃದ್ಧ ಅಲ್ಲಮಪ್ರಭುದೇವರು 'ಬಸವಣ್ಣ ಎನಗೆಯೂ ಗುರು, ನಿನಗೆಯೂ ಗುರು, ಜಗವೆಲ್ಲಕ್ಕೆಯೂ ಗುರು' ಎಂದಿದ್ದಾರೆ. 'ಬಸವಣ್ಣನ ಉದರದಲ್ಲಿ ಹುಟ್ಟಿತ್ತು ಗುರು, ಲಿಂಗ, ಜಂಗಮ' ಎನ್ನುವ ನುಡಿಮುತ್ತು ಶರಣರದೇ. 'ಪೂರ್ವಾಚಾರಿ ಬಸವಣ್ಣ' ಎಂದು ಸ್ತುತಿಸಿದ್ದಾರೆ. 'ಬಸವ ಗುರುವಿನಿಂದ ಪಾವನವಾದೆ' ಎಂದು ಮನದುಂಬಿ ಸ್ಮರಿಸಿಕೊಂಡಿದ್ದಾರೆ. 'ಇಷ್ಟಲಿಂಗ ಜನಕ ಬಸವಣ್ಣ' ಎಂದು ಸ್ಪಷ್ಟಪಡಿಸಿದ್ದಾರೆ. ಇಷ್ಟೆಲ್ಲ ಅರಿತಿದ್ದರೂ ಬಸವಣ್ಣನವರನ್ನು ಗುರುವೆಂದು ಒಪ್ಪಲು ಮನಸ್ಸಿಲ್ಲದೆ, ಆದರೂ ಅವರನ್ನು ಬಿಡಲಾಗದೆ ೨೬/೪ರ 'ವಿಜಯವಾಣಿ' ದಿನಪತ್ರಿಕೆಯಲ್ಲಿ ಶ್ರೀ ರಂಭಾಪುರಿ ವೀರಸೋಮೇಶ್ವರ ಶ್ರೀಗಳು 'ಬಸವಣ್ಣನವರು ವೀರಶೈವ ಧರ್ಮದ ಉದಾತ್ತ ತತ್ವಗಳಿಗೆ ಮಾರು ಹೋಗಿ ವೀರಶೈವ ಧರ್ಮವನ್ನು ಸ್ವೀಕರಿಸಿದರು. ಸಕಲ ಜೀವಾತ್ಮರಿಗೂ ಲೇಸನ್ನೇ ಬಯಸಿದ ವೀರಶೈವ ಧರ್ಮ ಸಿದ್ಧಾಂತವನ್ನು ಅರ್ಥೈಸಿಕೊಂಡು ಆಚರಣೆ ಮಾಡಿಕೊಂಡು ಬಂದ ಮಹಾನುಭಾವ' ಎಂದು ಹೇಳಿದ್ದಾರೆ. ಮುಂದುವರಿದು 'ಏಣಿಯ ಮೆಟ್ಟಿಲುಗಳಿಗೆ ಬೆಂಕಿಯಿಟ್ಟು ಚಳಿ ಕಾಯಿಸಬಾರದು.

ತಾತ್ಕಾಲಿಕ ಸುಖಕ್ಕಾಗಿ ಆದರ್ಶಗಳನ್ನು ಬಲಿ ಕೊಡಬಾರದೆಂಬ ಬಸವಣ್ಣನವರ ದೂರದೃಷ್ಟಿ ಅದ್ಭುತವಾದುದು. ತುಳಿದು ಬದುಕುವುದಕ್ಕಿಂತ ತಿಳಿದು ಬದುಕುವುದು ಶ್ರೇಷ್ಠವೆಂದು ಸಾರಿದ ಬಸವಣ್ಣನವರು ಜಾತಿ ಮತ ಪಂಥಗಳೆನ್ನದೆ ಎಲ್ಲರ ಉನ್ನತಿಗಾಗಿ ಶ್ರಮಿಸಿದ ಚಿಂತಕ. ಬಸವಣ್ಣನವರ ಹೆಸರಿನಲ್ಲಿ ಇಂದು ಸಮಾಜ ಛಿದ್ರಗೊಳಿಸುವ ಜನರಿದ್ದಾರೆ. ಅಂಥವರ ಬಗೆಗೆ ಸಮಾಜ ಬಾಂಧವರು ಎಚ್ಚೆತ್ತುಕೊಳ್ಳಲಿ' ಎನ್ನುವ ಕರೆ ಕೊಟ್ಟಿದ್ದಾರೆ.

ರಂಭಾಪುರಿ ಜಗದ್ಗುರುಗಳ ಅಭಿಪ್ರಾಯವನ್ನೇ ಎತ್ತಿಹಿಡಿಯುವ ಹಿನ್ನೆಲೆಯಲ್ಲಿ ಡಾ. ಸಂಗಮೇಶ ಅವರು ೧೫–೨೦ ದಿನಗಳನಂತರ ಈ ಲೇಖನ ಬರೆದಿದ್ದಾರೆ. ಯಾರ ಮನಸ್ಸಿನಲ್ಲಿ ಏನಿದೆ ಎಂದು ಅರ್ಥ ಮಾಡಿಕೊಳ್ಳದಷ್ಟು ದಡ್ಡರು ಈಗ ಯಾರೂ ಇಲ್ಲ 'ಜ್ಞಾನದ ಬಲದಿಂದ ಅಜ್ಞಾನದ ಕೇಡ ನೋಡಯ್ಯಾ' ಎನ್ನುವ ಹಾಗೆ ಎಲ್ಲರೂ ಜ್ಞಾನಿಗಳಾಗಿ ಇದುವರೆಗೂ ನಡೆದುಕೊಂಡು ಬಂದಿದ್ದ ಕುಟಿಲತೆಯನ್ನು ಅರ್ಥ ಮಾಡಿಕೊಂಡಿದ್ದಾರೆ. ಬಸವಣ್ಣ ವೀರಶೈವ ಧರ್ಮವನ್ನು ಸ್ವೀಕರಿಸಿದರು ಎನ್ನುವ ಮಾತೇ ಅಪ್ಪಟ ಸುಳ್ಳು. ಅವರು ಲಿಂಗಾಯತ ಧರ್ಮದ ಪ್ರತಿಪಾದಕರು, ಜನಕರು. ಅವರ ಹೆಸರಿನಲ್ಲಿ ಖಂಡಿತ ಬೆಂಕಿಯಿಟ್ಟು ಚಳಿ ಕಾಯಿಸಬಾರದು. ಬಸವಗುರುವಿನ ಸಂದೇಶಗಳನ್ನು ಅರಿತು ಸಮಾಜಕ್ಕೆ ಮಾರ್ಗದರ್ಶನ ಮಾಡಿದರೆ ಆಗ ವ್ಯಕ್ತಿತ್ವಕ್ಕೆ ಇನ್ನಷ್ಟು ಮೆರಗು ಬರುವುದು. ಈ ಸತ್ಯವನ್ನು ಅರಗಿಸಿಕೊಳ್ಳುವ ಮನಸ್ಸು ಹಲವರಿಗಿಲ್ಲ ಎನ್ನುವುದು ನಮಗೂ ಗೊತ್ತು. ಪರಂಪರೆಯ ಕೆಸರಲ್ಲಿ ಮುಳುಗಿದವರಿಗೆ ಅಲ್ಲಿಂದ ಹೊರಬರುವ ಬಯಕೆ ಇದ್ದರೆ ತಾನೆ ಶುದ್ಧ ನೀರಿನ ಮಹತ್ವ ತಿಳಿಯುವುದು? ಬಸವಾದಿ ಶಿವಶರಣರು ನಿಷ್ಠುರವಾದಿಗಳು. ಹಾಗಂತ ಅಹಂಕಾರಿಗಳಲ್ಲ. ವಿನಯವೇ ಸಾಕಾರವೆತ್ತಂತೆ ಬಾಳಿದವರು. ಹಾಗಾಗಿ ಅಂಥವರ ಪರಿಶುದ್ಧ ಬದುಕಿಗೆ ಮಸಿ ಬಳಿಯುವ ಯಾರೇ ಆದರೂ ಕೊನೆಗೆ ತಾವೇ ತಮ್ಮ ಮುಖಕ್ಕೆ ಮಸಿ ಬಳಿದುಕೊಳ್ಳುವರೆಂಬುದನ್ನು ಮರೆಯಬಾರದು.

ಬಸವಣ್ಣನವರು ಹುಟ್ಟಿನಿಂದ ಬ್ರಾಹ್ಮಣರೇ ಹೊರತು ಬದುಕಿನ ವಿಧಾನದಿಂದ ಅಲ್ಲ. ಅವರು ಅಲ್ಲಿಯ ಕರ್ಮಠತನಗಳಿಂದ ನೊಂದು ಹೊರಬಂದು 'ಲಿಂಗಾಯತ' ಧರ್ಮದ ಸ್ಥಾಪಕರಾದರು. ಆದರೂ ಅವರನ್ನು ಬ್ರಾಹ್ಮಣ ಎಂದೇ ನೋಡುವ ಮನಸ್ಸುಗಳು ಇಂದಿಗೂ ಇವೆಯಲ್ಲಾ ಎನ್ನುವುದೇ ಆಶ್ಚರ್ಯ. ಬಸವಣ್ಣ ಜಾತಿಯ ಕೊಳಕಿನಿಂದ ಹೊರಬಂದು ಜಾತ್ಯತೀತವಾದ ಶರಣತ್ವ ಅಪ್ಪಿಕೊಂಡ ಪುಣ್ಯಪುರುಷ. ಅವರನ್ನು ಜಾತಿಯಿಂದ ಪರಿಗಣಿಸುವುದೇ ಕಾಮಾಲೆಪೀಡಿತರ ಲಕ್ಷಣ ಎನ್ನಿಸುವುದಿಲ್ಲವೇ?

**ಆದಿ ಬಸವಣ್ಣ, ಅನಾದಿ ಲಿಂಗವೆಂದೆಂಬರು,**
**ಹುಸಿ ಹುಸಿ ಈ ನುಡಿಯ ಕೇಳಲಾಗದು.**
**ಆದಿ ಲಿಂಗ, ಅನಾದಿ ಬಸವಣ್ಣನು!**
**ಲಿಂಗವು ಬಸವಣ್ಣನ ಉದರದಲ್ಲಿ ಹುಟ್ಟಿತ್ತು,**
**ಜಂಗಮವು ಬಸವಣ್ಣನ ಉದರದಲ್ಲಿ ಹುಟ್ಟಿತ್ತು,**
**ಪ್ರಸಾದವು ಬಸವಣ್ಣನನುಕರಿಸಲಾಯಿತ್ತು.**
**ಇಂತೀ ತ್ರಿವಿಧಕ್ಕೆ ಬಸವಣ್ಣನೆ ಕಾರಣವೆಂದರಿದೆನಯ್ಯಾ**
**ಕೂಡಲಚೆನ್ನಸಂಗಮದೇವಾ.**

ಹೌದು, ಬಸವಣ್ಣ ಇಷ್ಟಲಿಂಗದ ಜನಕ. ಗುಡಿಯ ದೇವರನ್ನು ದೇಹವೆನ್ನುವ ಗುಡಿಗೆ ಬರಮಾಡಿಕೊಂಡು ದೇವರ ಜಡತ್ವ ನೀಗಿಸಿ ಜಂಗಮತ್ವಗೊಳಿಸಿದ. ಪೌರಾಣಿಕ ಕಲ್ಪನೆಗಳಿಗೆ ಎಳ್ಳು ನೀರು ಬಿಟ್ಟ. ಲಿಂಗೋದ್ಭವ ಎನ್ನುವ ಕಟ್ಟುಕತೆಗೆ ಹೆಡಮುರಿಗೆ ಕಟ್ಟಿದ. ದೇವರಿಗೆ ಮಡಿ ಮೈಲಿಗೆ ಇಲ್ಲವೆಂದು ಸಾರಿದ. ಯಾರು ಬೇಕಾದರೂ ದೇವರನ್ನು ತನ್ನ ಎದೆಯ ಮೇಲೇ ಇಷ್ಟಲಿಂಗದ ರೂಪದಲ್ಲಿ ಧರಿಸಿ ಪೂಜೆ ಮಾಡಬಹುದೆಂದ. ಅದಕ್ಕೆ ಹಾಲಿನ, ತುಪ್ಪದ, ಎಳನೀರಿನ, ಪಂಚಾಮೃತದ ಅಭಿಷೇಕ ಬೇಕಿಲ್ಲ. ನೀನು ಕುಡಿಯುವ ನೀರಿನ ಅಭಿಷೇಕ ಮಾಡಿದರೆ ಸಾಕು, ನೀನು ಊಟ ಮಾಡುವ ಆಹಾರವನ್ನೇ ನೈವೇದ್ಯ ಮಾಡಿದರೆ ಸಾಕು ಎಂದು ಪೂಜಾರಿ ಪುರೋಹಿತರ ಕಪಿಮುಷ್ಠಿಯಿಂದ ಏಕಕಾಲಕ್ಕೆ ದೇವರನ್ನು ಮತ್ತು ಭಕ್ತರನ್ನು ಮುಕ್ತಗೊಳಿಸಿದ. ಇಂಥ ಗುರು ಬಸವಣ್ಣನವರ ಬಗ್ಗೆ ಈಗಲೂ ಹಗುರವಾಗಿ ಮಾತನಾಡುವವರು ಆತ್ಮಾವಲೋಕನ ಮಾಡಿಕೊಳ್ಳಬೇಕು. ಬಸವಾದಿ ಶಿವಶರಣರ ಧರ್ಮಗ್ರಂಥಗಳಾಗಿರುವ ವಚನ ಸಾಹಿತ್ಯದ ಗಂಭೀರ ಅಧ್ಯಯನ ಮಾಡಬೇಕು. ಆಗ ಅವರ ಬುದ್ಧಿಗೆ ಕವಿದಿರುವ ಮಂಕು ಮರೆಯಾಗಿ ಮತ್ತೆ ದೀಪ ಪ್ರಖರವಾಗಿ ಬೆಳಗಿ ಬೆಳಕು ಪಸರಿಸುವುದು.

■■

# ಆನೆಯ ಜರಿದು ಕೋಣವನೇರಿದರೆ ಸವದತ್ತಿಮಠರು?

● ಅಕ್ಕ ಅನ್ನಪೂರ್ಣತಾಯಿ

ಮೇ ೧೨ ವಿಜಯವಾಣಿ ಪತ್ರಿಕೆಯ ಚಿಂತನ ವಿಭಾಗದಲ್ಲಿ ಪ್ರಕಟವಾದ ಡಾ॥ ಸಂಗಮೇಶ ಸವದತ್ತಿಮಠರ ಲೇಖನವು ಜಾಣ ಕುರುಡುತನ ಮತ್ತು ಕಪಟತನಗಳಿಂದ ಕೂಡಿದ್ದು, ನಾವು ತೀವ್ರವಾಗಿ ಖಂಡಿಸುತ್ತೇವೆ.

ಬಸವಣ್ಣನವರು ತಾವೇ 'ಎತ್ತು' ಎಂದು ಹೇಳಿಕೊಂಡಿದ್ದಾರಲ್ಲ ಅದಕ್ಕೇನಂತೀರಿ? ಎಂಬ ಅವರ ಮಾತೆ ಬಾಲಿಶತನ; ಆತ್ಮವಂಚನೆ. ವಚನ ಸಾಹಿತ್ಯದಲ್ಲಿಯೇ ಹರಿದಾಡುತ್ತಾ ದಪ್ಪ ದಪ್ಪ ಗ್ರಂಥಗಳನ್ನು ಬರೆದು ಪದವಿ–ಪ್ರಶಸ್ತಿಗಳನ್ನು ಗಿಟ್ಟಿಸಿಕೊಂಡ ಸವದತ್ತಿಮಠರಿಗೆ 'ವೃಷಭನೆಂಬ ವಾಹನವಾಗಿರ್ದೆ' ಎಂಬ ಸಾಲು ಅರ್ಥವಾಗಲಿಲ್ಲವೆ? ವೃಷಭ ವಾಹನವೆಂದರೆ ಧರ್ಮ ಹೊತ್ತು ಬಂದವರು. ಧರ್ಮ ತಂದವರು ಎಂದರ್ಥ. ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸಿದ ಮಹಾನುಭಾವರು ಬಸವಣ್ಣನವರು. ಅವರು ಎತ್ತಲ್ಲ; ಬಿದ್ದವರನ್ನು ಎತ್ತಲು ಬಂದ ಮಹಾಮಾನವತಾವಾದಿ. ವಿಶ್ವಗುರು. ಜಗಜ್ಯೋತಿ. ಯುಗಪುರುಷರೆಂಬುದು ಲೋಕಕ್ಕೆಲ್ಲ ತಿಳಿದಿದೆ.

೧೨ನೇ ಶತಮಾನದ ನಂತರ ಇಡೀ ಕರುನಾಡನ್ನು, ಸಕಲ ಜಾತಿ–ಮತ–ಪಂಥದವರ ಆರಾಧ್ಯರಾಗಿ ಅವತರಿಸಿದ ಬಸವಣ್ಣನವರ ಪ್ರಭಾವಕ್ಕೆ ಕಂಗಾಲಾಗಿ, ಬಸವಣ್ಣ ಎಂದರೆ ನಂದಿಯ ಅವತಾರವೆಂದು ಗೌರವಾನ್ವಿತವಾಗಿ ಸಂಬೋಧಿಸುತ್ತಲೇ, ಕ್ರಾಂತಿಪುರುಷ – ದೀನ ದಲಿತರ ಆರಾಧ್ಯ ಬಸವಣ್ಣನವರನ್ನು ಎತ್ತಾಗಿ ಬಿಂಬಿಸಿ, ಮುಗ್ಧರನ್ನು ದಾರಿತಪ್ಪಿಸುವುದು ಸರಿಯೆ? ಈಗ ಸಮಾಜ ಜಾಗೃತವಾಗಿದೆ. ಇಂಥ ಪೊಳ್ಳುವಾದಗಳಿಗೆ ಯಾರೂ ಸೊಪ್ಪು ಹಾಕರು.

ಜನಸಾಮಾನ್ಯರ ಅಥವಾ ಮೂಢರ ಮೌಢ್ಯವನ್ನು ತಿದ್ದಬೇಕಾದ ತಮ್ಮಂಥವರು ವಚನಗಳನ್ನು ತಪ್ಪಾಗಿ ಅರ್ಥೈಸಿ ದಾರಿ ತಪ್ಪಿಸುತ್ತಿರುವುದು ದುರದೃಷ್ಟಕರ. 'ಲಾಂಛನಕ್ಕೆ ತಕ್ಕ ಆಚರಣೆ ಇಲ್ಲದಿರೆ ಕೂಡಲಸಂಗಮದೇವಾ ನೀ ಸಾಕ್ಷಿಯಾಗಿ ಛೀ ಎಂಬೆ' ಎಂಬ ಬಸವಣ್ಣನವರ ವಚನ ನೆನಪಾಗುತ್ತಿದೆ.

ಇನ್ನು ಸವದತ್ತಿಮಠರು ಅಲ್ಲಮಪ್ರಭು, ಚನ್ನಬಸವಣ್ಣ, ಬಸವಪುರಾಣ, ಹರಿಹರನ ರಗಳೆಗಳನ್ನು ಉಲ್ಲೇಖಿಸಿ ವೃಷಭತ್ವವನ್ನು ಗಟ್ಟಿಗೊಳಿಸಲು ಪ್ರಯತ್ನಿಸಿರುವುದು ಆಶ್ಚರ್ಯಕರ. ಏಕೆಂದರೆ "ಮರ್ತ್ಯಲೋಕದ ಮಹಾಮನೆ ಹಾಳಾಗಿ ಹೋಗಬಾರದೆಂದು ಕರ್ತನಟ್ಟಿದನಯ್ಯಾ ಒಬ್ಬ ಶರಣನ", 'ಆನೂ ನೀನೂ ಬಸವಾ ಬಸವಾ ಎನುತಿರ್ದೆವಯ್ಯಾ ಗುಹೇಶ್ವರಾ', 'ಸಮಾಧಾನವೆಂಬ ಪ್ರಸಾದ ಬಸವಣ್ಣನಿಂದ ಎನಗಾಯಿತ್ತು', 'ಬಸವಣ್ಣನೆಂಬ ಜ್ಯೋತಿ ಮುಟ್ಟಿಸಲು ತೊಳಗಿ ಬೆಳಗುತ್ತಿದ್ದಿತ್ತಯ್ಯಾ ಶಿವನ ಪ್ರಕಾಶ', ಬಸವಣ್ಣನಿಂದ ಸದ್ಭಕ್ತನಾದೆನಯ್ಯಾ ಎಂಬ ಅಲ್ಲಮಪ್ರಭುದೇವರ ಅನೇಕ ವಚನಗಳು, ಷಟಸ್ಥಲಜ್ಞಾನಿ ಚೆನ್ನಬಸವಣ್ಣನವರ 'ಭಕ್ತಿಪಥವ ತೋರಬಂದನಯ್ಯಾ ನಮ್ಮ ಬಸವಣ್ಣನು', 'ಬಸವಣ್ಣ ಮರ್ತ್ಯಲೋಕಕ್ಕೆ ಬಂದು ಮಹಾಮನೆಯ ಕಟ್ಟಿ, ಭಕ್ತಿ ಜ್ಞಾನವೆಂಬ ಜ್ಯೋತಿಯನೆತ್ತಿ ತೋರಲು ಸುಜ್ಞಾನವೆಂಬ ಪ್ರಭೆ ಪಸರಿಸಿತ್ತಯ್ಯ ಜಗದೊಳಗೆ' ಎಂಬ ಸಾಲು ಸಾಲು ವಚನಗಳು, ಶಿವಯೋಗಿ ಸಿದ್ಧರಾಮೇಶ್ವರರ 'ನೋಟದ ಭಕ್ತಿ ಬಸವಣ್ಣನಿಂದಾಯಿತ್ತು', ಬಸವನ ಮೂರ್ತಿಯೇ ಧ್ಯಾನಕ್ಕೆ ಮೂಲ, ಬಸವೇಶನೆ ಬಸವರಾಜನೆ ಬಸವಣ್ಣನೆ ಬಸವ ತಂದೆ ಬಸವ ಕೃಪಾನಿಧಿ ಬಸವ ಪ್ರಮಥಾದಿದೇವ ಎಂಬ ಬಸವಭಕ್ತಿ ಪ್ರೇರಕ ಅಮೂಲ್ಯ ವಚನಗಳಾಗಲಿ, ಬಸವ ಪುರಾಣದ 'ಶ್ರೀಗುರುವೆ ದೀಕ್ಷಾಗುರುವೆ ರಕ್ಷಾಗುರುವೆ ಶಿಕ್ಷಾಗುರುವೆ.... ಭವರೋಗಹರ ಶರಣಾಗು ಬಸವ ಮಹಾಗುರುವೆ ನಮಗೆ' ಎಂಬ ಸ್ತುತಿಯಾಗಲಿ ಮತ್ತು ಹರಿಹರನ ರಗಳೆಯಲ್ಲಿಯ ಬಸವಣ್ಣನವರು ಪೂಜೆಗಾಗಿ ಹೂ ತರುವ ಸಂಭ್ರಮದ ಸಂಭಾಷಣೆಗಳಾಗಲೀ ಬಸವಣ್ಣನವರು ಐತಿಹಾಸಿಕ ಪುರುಷರು, ಜಗತ್ತು ಕಂಡು ಕೇಳರಿಯದ ಅಪರೂಪದ ದಿವ್ಯ ಭವ್ಯ ಮಾನವರು ಎಂಬುದನ್ನು ಸಾಬೀತುಪಡಿಸುತ್ತವಲ್ಲವೆ? ಆದರೂ ಸವದತ್ತಿಮಠರಿಗೆ ಮನದಟ್ಟಾಗಲಿಲ್ಲವೆ? ಅಷ್ಟೇ ಅಲ್ಲ ಸ್ವತಃ ಬಸವಣ್ಣನವರೆ 'ನಾನೊಂದು ಕಾರಣ ಮರ್ತ್ಯಕ್ಕೆ ಬಂದೆನು', 'ಕರ್ತ ನಟ್ಟಿದಡೆ ಮಹಾಮನೆಯ ಕಟ್ಟಿದೆ' ಎಂದು ಹೇಳಿಲ್ಲವೆ? ಮತ್ತೇನು

ಸಾಕ್ಷಿ ಬೇಕು? ಇಷ್ಟೆಲ್ಲ ಸಾಕ್ಷಿಗಳಿದ್ದಾಗಲೂ ಬಸವಣ್ಣನವರನ್ನು ಎತ್ತೆಂದು ಪೂಜಿಸಿದರೆ ತಪ್ಪೇನು? ಎನ್ನುವುದು ಕುಬುದ್ಧಿಯೇ ಸರಿ. ವಚನ ಸಾಹಿತ್ಯದಿಂದಲೇ ಹೆಸರು, ದಿನದ ಅನ್ನ ಪಡೆದ ತಾವು ಶರಣರಿಗೆ ಮಾಡುತ್ತಿರುವ ದ್ರೋಹವಲ್ಲದೆ ಮತ್ತೇನು? ದಯವಿಟ್ಟು ಅವಲೋಕನ ಮಾಡಿಕೊಳ್ಳಿ.

**'ಕೊರೋನಾ'** ಸಂದರ್ಭದಲ್ಲಿ ಈ ವಿಷಯದ ಅಗತ್ಯವಿತ್ತೆ ಎಂಬ ಸಾಮಾಜಿಕ ಕಳಕಳಿಯ ಮಾತು ಹಾಸ್ಯಸ್ಪದ. ಬಸವಜಯಂತಿಯ ಸಂದರ್ಭದಲ್ಲಿ ಚರ್ಚೆಯಾಗಿ ಸತ್ತು ಹೋದ ಮಾತನ್ನು ಮತ್ತೆ ಎತ್ತಿ ನುಡಿದು ಗದ್ದಲವೆಬ್ಬಿಸಿದವರು ಯಾರು?

ಒಡೆಯುವುದು ಧರ್ಮವಲ್ಲ. ಕೂಡಿಸುವುದು ಧರ್ಮ ಎಂಬ ಮಾತು ಸರ್ವಸಮ್ಮತ. ಅದನ್ನು ತಮ್ಮೆಡೆಗೆ ತಿರುಗಿಸಿಕೊಂಡು ಅವಲೋಕಿಸಿಕೊಳ್ಳುವುದು ಒಳಿತು. ಜಾತಿ ಎಂದರೆ, ಇವನಾರು ಇವನಾರು ಎಂದು ಭೇದ ಮಾಡುವುದು. ಧರ್ಮವೆಂದರೆ ಇವನಮ್ಮವ ಇವನಮ್ಮವನೆಂದು ಅಪ್ಪಿಕೊಳ್ಳುವುದು. ಲಿಂಗಾಯತವೆಂಬುದು ಬಸವಪ್ರಣೀತ ಸ್ವತಂತ್ರ ಧರ್ಮವೇ ಹೊರತು ಜಾತಿಯಲ್ಲ. ಸರ್ವರನ್ನು ಇಂಬಿಟ್ಟುಕೊಂಡ ಲಿಂಗಾಯತವು ವೇದಾಗಮಗಳ ಮೂಲದ್ದಲ್ಲ. ವಚನಾಧಾರಿತ ಅನುಭಾವ ಪ್ರಮಾಣ ಸ್ವತಂತ್ರಧರ್ಮ. ಇದನ್ನು ಅರಗಿಸಿಕೊಳ್ಳದೆ ಕಿರಿಕಿರಿಯುಂಟುಮಾಡುವ ಹೇಳಿಕೆಗಳನ್ನು ನಿಲ್ಲಿಸಿ. ಲಿಂಗಾಯತ ಧರ್ಮ ಸ್ಥಾಪಿಸಿದ ಧರ್ಮಗುರು ಬಸವಣ್ಣನೆಂಬುದು ಮರೆಯಿದಿರಿ. ಹಾಡಿದ್ದೆ ಹಾಡೋ ಕಿಸಬಾಯದಾಸ ಎಂಬಂಥ ಹಳೆಯ ರಾಗ ಬೇಕಿಲ್ಲ. ಇತಿಹಾಸ ಓದಿಕೊಂಡ ತಮಂಥವರು ಸತ್ಯವನ್ನೇ ಮರೆಮಾಚುವುದು ತಮಗೆ ಶೋಭಿಸುವುದಿಲ್ಲ.

**ಆನೆಯ ಜರಿದು ಕೋಣವನೇರಿದರೆ ಆರೇನು ಮಾಡುವರು?**
**ಪಾಯಸವ ಜರಿದು ಮದ್ಯವ ಕುಡಿದರೆ ಆರೇನು ಮಾಡುವರು?**
**ಸುಗಂಧವ ಜರಿದು ಕೆಸರು ಪೂಸಿಕೊಂಡರೆ ಆರೇನು ಮಾಡುವರು?**
**ಅರಿದರಿದು ಗುಹೇಶ್ವರನ ಶರಣರೊಡನೆ ವಾದಿಸಿದಡೆ ಆರೇನು ಮಾಡುವರು?**

ಈ ಸಂದರ್ಭದಲ್ಲಿ ಅಲ್ಲಮಪ್ರಭುವಿನ ಮೇಲಿನ ವಚನ ನೆನಪಾಗುತ್ತದೆ. ಬಸವಣ್ಣ, ಲಿಂಗಾಯತವೆಂಬ ಆನೆಯನೇರಿ ಗೌರವಾನ್ವಿತರಾಗಿ ಸ್ವತಂತ್ರರಾಗಿ ಬಾಳಿರೆಂದರೆ, ಮಿಥ್ಯವನ್ನೇ ಸತ್ಯವಾಗಿಸುವೆನೆಂಬ ಭ್ರಾಂತಮತಿಗಳೆಂಬ ಹುಂಬತನದ ಕೋಣವನೇರಿದರೆ ಆರೇನು ಮಾಡುವರು? ಬಸವಣ್ಣನವರೆ ಧರ್ಮಗುರು. ಲಿಂಗಾಯತಧರ್ಮ ಸ್ವತಂತ್ರಧರ್ಮ. ವಚನಗಳೇ ಧರ್ಮಗ್ರಂಥ ಎಂದು ಆಧಾರಸಹಿತವಾಗಿ ಒಪ್ಪಿ ಅಪ್ಪಿದ ನವಪೀಳಿಗೆ ಎದುರು ಹಳೇರಾಗವನ್ನೆ ಹಾಡುವುದು ನಗೆಪಾಟಲು. ಇನ್ನು ಮುಂದೆಯಾದರೂ ನ ಭೂತೋ ನ ಭವಿಷ್ಯತಿ ಎಂಬಂಥ ಬಸವಕ್ರಾಂತಿಯನ್ನು ಬೆಳಗಿಸುವ ಲೇಖನಗಳಿಗೆ ತಮ್ಮ ಲೇಖನಿ ಬಳಕೆಯಾಗಲೆಂದು ಬಯಸುತ್ತೇವೆ.

■■

---

**ಎನ್ನವರೊಲಿದು ಹೊನ್ನಶೂಲಕ್ಕಿದರೆನ್ನ ಹೊಗಳಿ ಹೊಗಳಿ**
**ಎನ್ನ ಹೊಗಳತೆ ಎನ್ನ ನಿಮ್ಮೈಗೊಂಡಿತ್ತಲ್ಲಾ**
**ಅಯ್ಯೋ ನೊಂದೆನು, ಸೈರಿಸಲಾರೆನು**
**ಅಯ್ಯಾ, ನಿಮ್ಮ ಮನ್ನಣೆಯೆ ಮಸೆದಲಗಾಗಿ ತಾಗಿತ್ತಲ್ಲಾ**
**ಅಯ್ಯೋ ನೊಂದೆನು, ಸೈರಿಸಲಾರೆನು**
**ಕೂಡಲಸಂಗಮದೇವಾ, ನೀನೆನಗೊಳ್ಳಿದನಾದರೆ**
**ಎನ್ನ ಹೊಗಳತೆಗಡ್ಡ ಬಾರಾ, ಧರ್ಮೀ.**

**–ಬಸವಣ್ಣ**

ಶರಣರು ನನ್ನನ್ನು ಹೊಗಳಿ ಹೊಗಳಿ ಹೊನ್ನ ಶೂಲದಲ್ಲಿಕ್ಕುತ್ತಿದ್ದಾರೆ. ಆ ಹೊಗಳಿಕೆ ನನ್ನನ್ನು ಮಸೆದ ಕತ್ತಿಯಂತೆ ಇರಿಯುತ್ತಿದೆ. ಇದರಿಂದಾಗಿ ನಾನು ಘಾಸಿಗೊಂಡಿದ್ದೇನೆ, ನೊಂದಿದ್ದೇನೆ, ಬೆಂದಿದ್ದೇನೆ. ಭಗವಂತನೇ! ನೀನು ಕರುಣಾಮಯಿ ಎನ್ನುವುದಾದರೆ, ನನಗೆ ನೀನು ಒಳ್ಳೆಯವನೇ ಆಗಿದ್ದರೆ ಶರಣರ ಈ ಹೊಗಳಿಕೆಯಿಂದ ನನ್ನನ್ನು ರಕ್ಷಿಸು ಎಂದು ಬಸವಣ್ಣನವರು ಭಗವಂತನಲ್ಲಿ ಆರ್ತಭಾವದಿಂದ ಪ್ರಾರ್ಥಿಸುವ ಮೂಲಕ ಹೊಗಳಿಕೆಯಿಂದ ಸಾಧಕನ ಸಾಧನೆ ಕುಂಟಿತಗೊಳ್ಳುತ್ತದೆ, ಸಾಧಕನು ವಿನೀತಭಾವಹೊಂದಿ ಹೊಗಳಿಕೆಯಿಂದ ದೂರವಾಗಬೇಕೆಂಬ ಆಶಯ ವ್ಯಕ್ತಪಡಿಸಿದ್ದಾರೆ.

# ಶಿವನಾಟದ ಸವಿಗಂಡ ಗುಂಡಯ್ಯ

● ಡಾ. ಸಿದ್ಧಯ್ಯ ಪುರಾಣಿಕ

*ಕುಂಬಾರ ಗುಂಡಯ್ಯ, ಅವರ ಜೀವನ ಸಾಧನೆಯ ನೋಟಗಳು ಡಾ. ಸಿದ್ಧಯ್ಯ ಪುರಾಣಿಕರ ಲೇಖನದಲ್ಲಿ ಹೃದಯ ಸ್ಪರ್ಶಿಯಾಗಿ ಮೂಡಿಬಂದಿದೆ. ಕುಂಬಾರ ಗುಂಡಯ್ಯ ಜಯಂತಿ ನಿಮಿತ್ತ 'ಲಿಂಗಾಯತ ದರ್ಶನ'ವು ವಿಶೇಷ ಲೇಖನವನ್ನು ಪ್ರಕಟಿಸುತ್ತಿದೆ.*

ಭಲ್ಲುಕೆ (ಇಂದಿನ ಭಾಲ್ಕಿ-ಬೀದರ ಜಿಲ್ಲೆ)ಯಲ್ಲಿ ಒಬ್ಬ ಶಶಿಮೌಳಿಯ ಶರಣನಿದ್ದ. ಘಟಕಾಯಕನಾಯಕನಾಗಿದ್ದ ಆ ಭಕ್ತನ ಹೆಸರು ಕುಂಬಾರ ಗುಂಡಯ್ಯ. ಹೆಂಡತಿಯ ಹೆಸರು ಕೇತಲದೇವಿ. ಅವನ ವೃತ್ತಿ ತತ್ವಮಯವಾಗಿದ್ದ ರೀತಿಯಿದು:

**"ಆಧಾರಮೆಯಾಧಾರಮದಾಗಿರೆ**
**ಮಿಗೆ ಷಟ್ಚಕ್ರಮೆ ಚಕ್ರಮದಾಗಿರೆ**
**ಸೊಗಯಿಪ ನಾಭಿಯೆ ನಾಭಿಯದಾಗಿರೆ**
**ಕನಸಿನ ಕಾಯಂ ಮೃತ್ತಿಕೆಯಾಗಿರೆ**
**ನೆನಹುಂ ಚಟಿದಾರಂಗಳವಾಗಿರೆ**
**ನಿಷ್ಠೆಯೆ ತಿರುಹುವ ದಂಡವದಾಗಿರೆ**
**ಮಾಡುವ ಭಕ್ತಿ ಕಟಾಹಮದಾಗಲು**
**ಕೂಡಿದ ಕರಣದೆ ಮರ್ದಿಸುತಾಗಲು**
**ಮಿಗೆ ಶೋಷಣದಾತಪದಿಂದಾರಿಸಿ**
**ಬಗೆ ಮಿಗಲುದರಾಗ್ನಿಗಳಿಂದಹಿಸಿ**
**ಇಂತೊಳಗಣ ಘಟಕಾಯಕಮೊಪ್ಪಲು**
**ಸಂತತ ಹೊರಗಣ ಮಾಟಮದೊಪ್ಪಲು**
**ಕುಂಬರ ನೆನೆಸಿರ್ಪಂ ಗುಂಡಯ್ಯಂ"**

ಇಂತು ಒಳಗಣ ಘಟಕಾಯಕ ಹೊರಗಣ ಘಟಕಾಯಕಗಳೆರಡನ್ನೂ ಮಾಣದೆ ಕೂಡಿ ನಡಸುತ್ತಿದ್ದ ಜಾಣನಾಗಿದ್ದ ಗುಂಡಯ್ಯ. ಹೊರಗೆ ಚಕ್ರಕ್ಕೆ ಆಧಾರವಾಗಿ ಹುಗಿದ ಮರದ ತುಂಡೇ ಅವನಿಗೆ ಆಧಾರ ಚಕ್ರ; ಅದರ ಮೇಲಿನ ತಿಗರಿಯೇ ಅವನ ಷಟ್ಚಕ್ರ; ತಿಗರಿಯಲ್ಲಿಯ ಮೊಳೆ ನೆಡುವ ರಂಧ್ರವೇ ಅವನ ನಾಭಿ(ಮಣಿಪೂರಕ ಚಕ್ರ); ಶರೀರವೇ ಮಡಕೆ ಮಾಡುವ ಮಣ್ಣು; ನಿಷ್ಠೆಯೇ ದಂಡ; ಅದರಿಂದ ತಿರುಗಿಸಿ ಮಾಡಿದ ಮಡಕೆಗಳನ್ನು ನೆನಹೆಂಬ ಚಟಿದಾರಗಳಿಂದ ಕೊಯ್ದು, ಕರಣಗಳಿಂದ ತಿದ್ದಿ ಬಡಿದು ಆರಿಸಿ, ಭಕ್ತಿಯೆಂಬ ಆವಿಗೆಯಲ್ಲಿ ಹಾಕಿ ಉದರಾಗ್ನಿಗಳಿಂದ ಸುಟ್ಟು ಗಟ್ಟಿಮಾಡಿಡುತ್ತಿದ್ದ. ಆ ಮಡಕೆಗಳನ್ನೇ ಬಾರಿಸುತ್ತ ಕುಣಿದಾಡುತ್ತಿದ್ದ.

**ಮಡಕೆಗಳ ಬಾರಿಸುತ ತೊಡಗಿದ್ದ ಕುಣಿತದೊಳು**
**ಹೆಡೆಯೆತ್ತಿ ನಾಗಮಣಿಯಂತೆ-ಗುಂಡಯ್ಯ**
**ತಡೆತಡೆದು ಹೆಜ್ಜೆ ಹಾಕುತಲಿ॥**

ಇದು ಅವನ ನಿತ್ಯದ ತತ್ವಮಯ ಕಾಯಕ. ಅವನ ಪಾಲಿಗೆ

**ಕಾಯಕವೆ ಶಿವಭಕ್ತಿ ಕಾಯಕವೆ ಶಿವಭಜನೆ**
**ಕಾಯಕವೆ ಲಿಂಗ ಶಿವಪೂಜೆ-ಶಿವಯೋಗ**
**ಕಾಯಕವೆ ಕಾಯ್ವ ಕೈಲಾಸ ॥**

**ಕಾಯಕದಲ್ಲಿ ನಿರತನಾಗಿ ಪ್ರಾಣಲಿಂಗ ಪೂಜೆಯಲ್ಲಿ** ಮಗ್ನನಾಗಿರುತ್ತಿದ್ದ ಗುಂಡಯ್ಯ.

**ಪ್ರಾಣಲಿಂಗಿಯು ಗುಂಡ ಏನೊಂದು ಹೊರಗರಿಯ**
**ಪ್ರಾಣಲಿಂಗದೊಳು ಶಿವಬೆಳಕು -ಬೀಳುತಲಿ**
**ತಾಣ ಕಳೆಯೇರಿ ಕಾಯಕವು॥**
**ಮೂರು ಲಿಂಗದ ಕಳೆಯ ಬೀರುತಲಿ ಗುಂಡಯ್ಯ**
**ತೋರಿ ಆ ಕಳೆಯು ತನ್ನೊಳಗೆ-ಒಡಮೂಡಿ**
**ಸೂರಿ ಕಾಯಕವೆ ಜನಕಾಯ್ತು॥**

ಅವನ ಜೀವನದ ಪ್ರತಿಕ್ಷಣವೂ ಪೂಜೆ, ಮಾಡುವುದೆಲ್ಲ ಆರಾಧನೆ. 'ಮನದೊಳ್ ಕಣ್ಣೊಳ್ ಪೂಜಾಭಾವ' ತುಂಬಿರುತ್ತಿದ್ದ ಕುಂಬಾರ ಗುಂಡಯ್ಯನಿಗೆ

**ಊಟಂ ನಿದ್ರೆಗೆ ಮನವಿಲ್ಲಿಲ್ಲಂ**
**ನೋಟಂ ನುಡಿಗೆಡೆ ಇಲ್ಲೆಡೆ ಇಲ್ಲಂ**
**ಶಿವಪೂಜೆಯ ಕರಡಿಗೆಯಂತಿರ್ಪಂ**
**ಶಿವಪೂಜೆಯ ಗವಸಣಿಕೆಯೊಲಿರ್ದಂ**

ಗುಂಡಯ್ಯನು ಶಿವನನ್ನು ಸ್ಮರಿಸಿದಂತೆಲ್ಲ ಮಡಕೆಗಳೆಲ್ಲ ತಮ್ಮಿಂದ ತಾವೇ ತಯಾರಾಗುತ್ತಿರುವುವೋ ಎಂಬಂತೆ ತೋರುತ್ತಿದ್ದಿತು. ಇದರಿಂದ ಗುಂಡಯ್ಯನ ಭಕ್ತಿ ಇನ್ನಷ್ಟು ಪುಟವೇರಿ ಆ ಮಡಿಕೆಗಳನ್ನೇ ಬಾರಿಸುತ್ತ ರಾತ್ರಿಯೆಲ್ಲ ಶಿವಧ್ಯಾನದಲ್ಲಿರುತ್ತಿದ್ದನು. 'ಬಾಜಿಪ ಕೈ ಮುಚ್ಚಿದ ಕಣ್ಣೊಪ್ಪಿರೆ' ಮಾನಸ ಪೂಜಾಮಗ್ನನಾಗಿರುತ್ತಿದ್ದ ಅವನು.

**ಬಂದುದನರಿಯದೆ ಹೋದುದನರಿಯದೆ**
**ನಿಂದರನರಿಯದೆ ನೆರೆದರನರಿಯದೆ**
**ಮಾಟವನರಿಯದೆ ನಿದ್ರೆಯನರಿಯದೆ**
**ನೋಟವನರಿಯದೆ ನೆನೆವುದನರಿಯದೆ**

ಶಿವನಲ್ಲಿ ಸಮರಸನಾಗಿ ಬಿಡುತ್ತಿದ್ದನು. ಅಲ್ಲಿ ಪೂಜ್ಯ ಪೂಜಕ ಭೇದ ಉಳಿದಿರಲಿಲ್ಲ. ಪೂಜಕನೇ ಪೂಜ್ಯನಾದ ಪರಮೋನ್ನತಿಯದು.

ಗುಂಡಯ್ಯನತ್ತ ಗಮನ ಹೊರಳಿದ್ದ ಶಿವನಿಗೆ ಕೈಲಾಸದಲ್ಲಿ ಮನಸ್ಸಿಲ್ಲದಾಯಿತು; ಸುರರ ಓಲಗ ಸಾಕಾಯಿತು; ಗೌರಿ ಗುಹ ಗಣಪರ ನೆನಪೂ ಹಾರಿಹೋಯಿತು.

**ಕಣಕಣಿಸಿ ಕರಡೆಗಳು ಝಣಝಣಿಸಿ ತಾಳಗಳು**
**ಧಣ ಧಣ್ಣ ಧಿತ್ತ ಮದ್ದಳೆಯು–ಕಿವಿಯೊಳಗೆ**
**ಘನಸೂರು ಹಿಡಿಯೆ ಗುಂಡನಿಗೆ ಅವನಿಲ್ಲಿ**
**ತೂಗಾಡುತ ಮಡಿಕೆಗಳಂ ಬಾರಿಸಿ**
**ಅಡ್ಡಂ ತ್ರಿಕಟಂ ಬಲಿವುತೆ ಬಾರಿಸಿ**
**ಕುಣಿವುತೆ ಕೂಗುತೆ ನಲವಿಂ ಬಾರಿಸಿ**
**ಮಣಿವುತೆ ತಣಿವುತೆ ಮುದದಿಂ ಬಾರಿಸಿ**

ಕುಣಿಯತೊಡಗಲು ಕೈಲಾಸದಲ್ಲಿ ಶಿವನ ಹೃದಯವೂ ಕುಣಿಯತೊಡಗುತ್ತಿತ್ತು. ಒಂದು ದಿನ ಶಿವನು ತಾನು ಕೈಲಾಸದಲ್ಲಿ ಕುಳಿತಿರುವೆನೆಂಬುದನ್ನೂ ಮರೆತು ಬಿಟ್ಟನು. ಎಷ್ಟೆಂದರೂ ಅಮರಸಿಂಹ ಹೇಳಿರುವಂತೆ 'ಮಹಾನಟ' ನಲ್ಲವೇ ಅವನು? 'ಸಂಗೀತ ವಿದ್ಯಾ ವಿನೋದ'ದಲ್ಲಿ ಹೇಳಿರುವಂತೆ 'ವಿಭುರಾದಿ ನಟಃ ಸುರಾಣಾಂ' ಅಲ್ಲವೇ ಅವನು? ಗುಂಡಯ್ಯನ ರಿಂಗಣ ಕೈಲಾಸದ ಅಂಗಣಕ್ಕೇರಿದಾಗ ಕುಣಿಯುದಿರಲು ಅವನಿಗೆ ಸಾಧ್ಯವೆ? ಗುಂಡಯ್ಯ ಹರವಶನಾಗಲು ಹರ ಪರವಶನಾಗಿ ಕುಣಿಯತೊಡಗಿದನು.

**ಶಿವಪದದಂದುಗೆ ಘಲಘಲಕೆಂದೆನೆ**
**ನವಕಟಕಧ್ವನಿ ಝಂಝಣರೆಂದೆನೆ**
**ಮರ್ತ್ಯದ ದನಿ ಕೈಲಾಸದ ನೃತ್ಯಂ**
**ಸತ್ಯದ ದನಿ ಶಿವಲೋಕದ ನೃತ್ಯಂ**

ಮರ್ತ್ಯದ ದನಿ ಸತ್ಯದ ದನಿಯಾದಾಗ ಶಿವನೃತ್ಯ ಚಿಮ್ಮುವುದೆಂಬುದನ್ನು ಗುಂಡಯ್ಯ ಸಿದ್ಧಪಡಿಸಿದ ತನ್ನ ಶುದ್ಧ ಮನದ ಸದ್ಭಕ್ತಿಯಿಂದ. ಇದ್ದಕ್ಕಿದ್ದಂತೆ ಎದ್ದು ಶಿವನು ಕುಣಿಯತೊಡಗಿದುದನ್ನು ಕಂಡು ಹರನ ಒಡ್ಡೋಲಗ ಬೆಕ್ಕಸ ಬೆರಗಾಯಿತು. ಪಾರ್ವತಿಯು ಎಚ್ಚರಿಸಿ 'ಇದಾವ ಉನ್ಮಾದ ದೇವಾ' ಎಂದು ಕೇಳಿದಾಗ ಶಿವನು ಉತ್ತರಿಸಿದ:

**"ಗುಂಡನ ಹೃದಯದೊಳಾಡುತ್ತಿರ್ದೆಂ**
**ತಂಡದ ಸುಖದೊಳ್ಮೂಡುತ್ತಿರ್ದೆಂ**
**ಇರುತಂ ಸ್ಥಾನದ ಭೇದವನರಿಯದೆ**
**ಸುರನರಲೋಕದ ವಿವರಣೆಯನರಿಯದೆ**
**ಅಲ್ಲಿಯುಮಿಲ್ಲಿಯು ಮೂಡುತ್ತಿರ್ದೆಂ**
**ಸಲ್ಲೀಲೆಯೊಳೆನ್ನಂ ಮರೆದಿರ್ದೆಂ!"**

ಕಾತ್ಯಾಯನಿಯ ಕೌತುಕಕ್ಕೆ ಕೊನೆಯಿಲ್ಲದಾಯಿತು. 'ನಿಮ್ಮವ ನಾಡಿಪ ಭಕ್ತನದಾವಂ?' ಎಂದು ಕೇಳಿದಳು. ತನ್ನ ಮನವನ್ನು ಸೂರೆಗೊಂಡಿದ್ದ ಆ ಮಹಾಭಕ್ತನನ್ನು ಶಿವೆಗೆ ತೋರಿಸಲು ಶಿವನು ಸಮ್ಮತಿಸಿದ. ಅಂಬರದಲ್ಲಿ ಅಂಬಿಕೆಯನ್ನು ನಿಲ್ಲಿಸಿ ತಾನೊಬ್ಬನೇ ಗುಂಡಯ್ಯನ ಗುಡಿಸಲ ಮುಂದೆ ಇಳಿದ. ಏಕನಿಷ್ಠೆಯಿಂದ ಘಟಕಾಯಕದಲ್ಲಿ ನಿರತನಾಗಿ ಹೊರಗೆ ಮರೆದ ಶರಣನನ್ನು ಕಂಡು ಪುಲಕಿತಗಾತ್ರನಾಗಿ ಅವನನ್ನು ಎಚ್ಚರಿಸಲೆಂದು ಅವನ ಮನದ ಲಿಂಗವನ್ನು ತನ್ನೆಡೆಗೆ ಆಕರ್ಷಿಸಿಕೊಂಡು ಅದರೊಳಗೆ ತಾನು ಬೆರೆತು ಗುಂಡಯ್ಯನ ಬಾಗಿಲದ ಎದುರಿನಲ್ಲಿಯೇ ಲಿಂಗವಾಗಿ ಮೂಡಿದ. ಈ ಹೊರಗಿನ ಲಿಂಗವನ್ನು ಕಂಡಮೇಲಂತೂ ಗುಂಡಯ್ಯನ ಆನಂದಕ್ಕೆ ಎಲ್ಲೆಯೇ ಇಲ್ಲದಂತಾಯಿತು; ಭಕ್ತಿಯ ಉತ್ಸಾಹ, ಆವೇಶ, ಉನ್ಮಾದಗಳು ಮೇರೆ ಮೀರಿದುವು.

**ಕೊರ್ಬಿದನುರ್ಬಿದನುಲಿದಾಳ್ದಿರ್ದಂ**
**ಸರ್ಬಸುಖಂಗಳ್ಸಲೆ ಬರುತಿರ್ದಂ**
**ಕುಣಿದಾಡುತೆ ಮಡಕೆಗಳಂ ಬಾರಿಸಿ**
**ಕುಣಿದಾಡುತೆ ಕುಡಿಕೆಗಳಂ ಬಾರಿಸಿ**
**ಕುಣಿವುತೆ ಕೊರಲೆತ್ತುತೆ ನೆರೆತೂಗುತೆ**
**ಕೊನೆವುತೆ ತೂಗಾಡುತೆ ಸುಖಿಯಾಗುತೆ**

**ಕೊಂಕುತೆ ಬಂಕುತೆ ಹಾರೈಸುತ್ತಂ**
**ಬಿಂಕಂಬೆತ್ತು ಬುಬೆಂದಾಡುತ್ತಂ**
**ಆಡುವ ಗುಂಡಯ್ಯನ ಹೊಸ ನೃತ್ಯಂ**
**ನೋಡುವ ಶಿವನಂ ಮುಟ್ಟಿತು ಸತ್ಯಂ!**

ಭಕ್ತ ಕಾಯ ಮಮಕಾಯನೆಂದು ಶಿವನು ಭಕ್ತಕಾಯ ಕುಣಿಯತೊಡಗಲು ಸುಮ್ಮನಿರುವುದು ಸಾಧ್ಯವೇ?

**ಸುಖದಾಟಂ ತನ್ನಂ ಬೆಂಬತ್ತಲು**
**ಸುಖಮುಖದಿಂ ಮನಮಂ ಸುತ್ತಲು**
**ಒಳಗಾಡಿದೆನಿನಿತುಂ ದಿನವೆನುತುಂ**
**ಇಳೆಯರಿಯಲ್ ಹೊರಗಾಡುವೆನೆನುತಂ**

ತಾನೂ ಕುಣಿಯತೊಡಗುತ್ತಾನೆ. ಶಿವನ ನೃತ್ಯವೇನು ಸಾಮಾನ್ಯವೆ? ಅದು ವಿಶ್ವವ್ಯಾಪಿ. ಅದರ ವಿಶ್ವರೂಪವನ್ನು ಹರಿಹರ ಸೆರೆಹಿಡಿದಿದ್ದಾನೆ. ತನ್ನ ಅಮರ ಕೃತಿ 'ಕುಂಬರ ಗುಂಡಯ್ಯನ ರಗಳೆಯಲ್ಲಿ':

**ದಶಭುಜಮಂ ದಿಕ್ತಟಕಂ ಪಸರಿಸಿ**
**ಎಸೆವ ಕರಂಗಳನೆತ್ತಲ್ ನೇಮಿಸಿ**
**ಒಂದು ಪದಂ ಪಾತಾಳವನೊತ್ತಲ್**
**ಒಂದು ಪದಂ ಬ್ರಹ್ಮಾಂಡವನೊತ್ತಲ್**
**ಜಡೆಗಳ್ ಬೆಂಬಳಿವಿಡಿದಾಡುತ್ತಿರೆ**
**ಮುಡಿಯೊಳ್ ಸುರನದಿ ತುಳ್ಕಾಡುತ್ತಿರೆ**
**ತಡಿಯೊಳ್ ಶಶಿ ಕಳೆಯಲ್ಲಾಡುತ್ತಿರೆ**
**ಕಡು ಚೆಲ್ವಳಕಂ ಕುಣಿದಾಡುತ್ತಿರೆ**
**ಮಿಸುಗುವ ಡಮರುಗ ಢಂ ಢಂ ಢಣಲೆನೆ**
**ತಿಸುಳದೆ ಹರಿಯುವ ತಾರಂ ತಿರ್ರನೆ**
**ತಿರುಗುತ್ತಿರೆ ಅಹಿಗಳ್ ಹೆಡೆಯೆತ್ತಲ್**
**ಕರಿಯ ತೊವಲ್ ನಭಮಂ ಜೋಹರಿಸಲು**
**ಸರಸಿಜಭವನ ಶಿರಂ ಬೊಬ್ಬಿಡುತ್ತಿರೆ**
**ಸುರರ ಶಿರೋಮಾಲೆಗಳುಲಿವುತ್ತಿರೆ**
**ಪೊಂಗೆಜ್ಜೆಗಳರವಂ ಘುಲುಘಲುಕೆನೆ**
**ತೊಂಗಲ ಗಂಟೆ ಢಣಂ ಢಂ ಢಣಲೆನೆ**
**ಆಡಿದ ನಾಡಿದನಾಹಾ ಶಂಕರ–**
**ನಾಡಿದನಾ ಗುಂಡನ ಮುಂದೀಶ್ವರ!**

ಸ್ವಾಮಿಯು ಸಾತ್ವಿಕೋದ್ರೇಕದಿಂದ ಕುಣಿಯುವುದನ್ನು ಕಂಡು ಸುರರು ಸುರಲೋಕದ ವಾದ್ಯಗಳನ್ನು ತರುತ್ತಾರೆ; ತುಂಬುರ ನಾರದರು ಉಗ್ಗಡಿಸುತ್ತ ಬರುತ್ತಾರೆ. ಶಂಕರನವುಗಳನ್ನೆಲ್ಲ ಬೇಡವೆನ್ನುತ್ತಾನೆ. ತನ್ನ ಭಕ್ತನ ಮಡಕೆಯ ವಾದ್ಯವೊಂದೇ ಸಾಕೆನ್ನುತ್ತಾನೆ. ಮತ್ತಷ್ಟು ಮೈಮರೆತು ಕುಣಿಯತೊಡಗುತ್ತಾನೆ. ಅತ್ತ ಗುಂಡ ಇತ್ತ ಶಿವ ಮತ್ತರಾಗಿ ಕುಣಿಯ ತೊಡಗಿದುದನ್ನು ಕಂಡು ನೋಡುತ್ತ ನಿಂತಿದ್ದ ಗಣತತಿಗೂ ಕುಣಿವಾಸೆ ಮೊಳೆಯುತ್ತದೆ. ಗಣತತಿ ಕುಣಿಯಲು ಸಚರಾಚರದ ಕಣಕಣವೂ ಕುಣಿಯತೊಡಗುತ್ತದೆ. ಕುಂಬಾರ ಗುಂಡಯ್ಯನ ಕುಣಿತ ವಿಶ್ವಲಾಸ್ಯ(Cosmic-Dance)ವಾಗಿ ಪರಿವರ್ತಿತವಾಗುತ್ತದೆ.

**ಶಿವನಂ ಕಂಡಾ ಭಕ್ತಂ ಕುಣಿಯಲು**
**ಶಿವಭಕ್ತನ ಕೂಡಭವಂ ಕುಣಿಯಲು**
**ಈರ್ವರನೀಕ್ಷಿಸಿ ಗಣತತಿ ಕುಣಿಯಲು**
**ಸರ್ವಸ್ಥಾವರ ಜಂಗಮವಾಡಲು......**

ವಿಶ್ವದ ಕೇಂದ್ರ ಬಿಂದುವೇ ಕಲಕುವಂತಾಗುತ್ತದೆ. ಇನ್ನ ಸುಮ್ಮನಿದ್ದರೆ ಅನಾಹುತವಾದೀತೆಂದು ಜಗನ್ಮಾತೆ ಪಾರ್ವತಿ ಶಿವನನ್ನು ಸಮತೆಗೆ ತರುತ್ತಾಳೆ. ಶಿವ ಗುಂಡಯ್ಯನನ್ನು ಬಿಗಿದಪ್ಪಿ,

**"ಈ ಮೂರು ಲೋಕದೊಳು ಹೂಮಾಲೆ ನಿನಗೀವೆ**
**ಭೂಮಿಯೊಳು ನಿನಗೆ ಮೆಚ್ಚಿದೆನು–ಎಲೆ ಗುಂಡ**
**ಸೀಮೆ ಮೀರಿಹುದು ಶಿವಭಕ್ತಿ"**
**ಶಿವಲೋಕದೊಳು ನಿನಗೆ ಶಿವಪದವ ಉಣಿಸುವೆನು**
**ಶಿವಗಣಕೆ ಸಾರಿ ಹೇಳುವೆನು–ಗುಂಡಯ್ಯ**
**ಶಿವ ಶರಣನೆಂದು ನಡೆ ಮೊದಲು!**

ಶಿವನ ಈ ಕರೆಗೆ ಗುಂಡಯ್ಯನಿತ್ತ ಉತ್ತರ ವಿಶ್ವದನಿತು ಬಿತ್ತರವನ್ನೊಳ ಗೊಂಡಿದೆಯೆಂದರೆ ತಪ್ಪಾಗದು;

**ಬೇಡೆನಗೆ ಕೈಲಾಸ ಬಾಡುವುದು ಕಾಯಕವು**
**ನೀಡೆನಗೆ ಶಿವನೆ ಕಾಯಕವ–ಕುಣಿದಾಡಿ**
**ನಾಡ ಹಂದರಕೆ ಹಬ್ಬಿಸುವೆ!**

ಮಹಾಕವಿ ಹರಿಹರನ ಗುಂಡಯ್ಯ ಶಿವನು ಕರೆದಾಕ್ಷಣ ಶಿವಲೋಕಕ್ಕೆ ಹೋಗಲು ಸಮ್ಮತಿಸುತ್ತಾನೆ. ಆದರೆ ಜನಪದ ಕವಿ ಸಾವಳಿಗೇಶನ ಕುಂಬಾರ ಗುಂಡಯ್ಯ ಕೈಲಾಸ ಬೇಕಿಲ್ಲ. ಕಾಯಕವೆ ಸಾಕೆನಗೆಂದು ಮಹಾಕವಿಯೂ ಗುರುತಿಸದ ಮಹೋನ್ನತಿಗೆ ಮುಟ್ಟಿದ್ದಾನೆ. 'ಕುಣಿದಾಡಿ ಕಾಯಕವನ್ನು ನಾಡ ಹಂದರಕ್ಕೆ ಹಬ್ಬಿಸುವೆ'ನೆಂದು ಶಿವನೆದುರು ಶಪಥಮಾಡಿದ ಕಾರಣ ಗುಂಡಯ್ಯ ನಿಜವಾಗಿಯೂ ನಾಡ ನಂದಾದೀಪವಾದನು. ನಾಡ ಜನವೂ ಇದನ್ನು ಒಪ್ಪಿ ಗುಂಡಯ್ಯನನ್ನು ಹಾಡಿ ಹೊಗಳಿತು.

**ತೊಂಡಲವು ಶಿವಗಣಕೆ ಗುಂಡಯ್ಯ ನೀನಾದಿ**
**ಇಂಡೆ ಕೊರಳೊಳಗೆ ನೀನಾದಿ–ಶಿವಭಕ್ತ**
**ಗುಂಡ ನೀನೆಂದು ಜನ ಭಜಿಸಿ.**

ಒಕ್ಕಲಿಗರು ತಮ್ಮ ಬೆಳೆಗಳ ರಕ್ಷಣೆಗಾಗಿ ಹೊಲಗಳಲ್ಲಿ 'ಬೆದರು' ಎಂದು ಒಂದು ಕೋಲಿಗೆ ಗಡಿಗೆಯೊಂದನ್ನು ನೇತುಹಾಕಿ ಅದಕ್ಕೆ ಸುಣ್ಣ ಬರೆಯುತ್ತಾರೆ. ಅದನ್ನು ಕಾವಲುಗಾರನೆಂದೇ ತಿಳಿದು ಪಶುಗಳು ಬೆಳೆಯೊಳಗೆ ನುಗ್ಗುವುದಿಲ್ಲ. ಆ ಗಡಿಗೆಯು ಗುಂಡನೆಂದೇ ಒಕ್ಕಲಿಗರು ನಂಬಿದ್ದಾರೆ.

**ಬೆಚ್ಚು ಗಡಿಗೆಯು ಗುಂಡ ನುಚ್ಚು ಜೋಕನು ಚೆರಗ**
**ಬೆಚ್ಚಾರೆ ಹೊಲಕೆ ಒಕ್ಕಲಿಗ–ಚೆರಗೊಗೆದು**
**ಬಚ್ಚಿಡಲು ಹುಲುಸು ಹೊಲದೊಳಗೆ॥**

**ಬೆಚ್ಚುಹಾಕಿದ ಗಡಿಗಿ ಮುಚ್ಚಿಟ್ಟ ಹೊಲ ಹುಲುಸು**
**ಬಚ್ಚಾದ ಬೆಳೆಯ ಕಣವುಕ್ಕಿ_ಗುಂಡಯ್ಯ**
**ಹೆಚ್ಚಾಯ್ತು ನಿನ್ನ ಶಿವಭಕ್ತಿ॥**

ಆ ಬೆಚ್ಚುಗಡಿಗೆಯುನ್ನು ಹೂಳಿದ ಹೊಲ ಹುಲುಸಾಗುವುದಂತೆ. ಇಷ್ಟೇ ಅಲ್ಲ, ಚಳಿಗಾಲದಲ್ಲಿ ಬೆಳವಲದಲ್ಲಿ ಹಿತಕರವಾದ ಗಾಳಿಯೊಂದು ಬೀಸುತ್ತದೆ. ಅದನ್ನು ಕುಂಬಾರ ಗಾಳಿಯೆಂದು ಕರೆದು ಹಳ್ಳಿಗರು ಕುಂಬಾರ ಗುಂಡಯ್ಯನ ನೆನಹನ್ನು ನಿತ್ಯ ಜೀವನದಲ್ಲಿ ನಿಲ್ಲಿಸಿಕೊಂಡಿದ್ದಾರೆ.

**ಗುಂಡ ತಿಗರಿಯ ತಿರುವಿ ರುಂಡಧಾರಿಯು ಕುಣಿದು**
**ಥಂಡಿ ಬೀಳುತಲಿ ಬೆಳವಲಕೆ –ಕುಂಬಾರ**
**ಗಿಂಡಿ ರಸಗಾಳಿ ಬೀಸುತಲಿ**

ಆ ರಸಗಾಳಿ ವರ್ಷದಲ್ಲೊಮ್ಮೆ ಬೀಸಿದರೆ ಗುಂಡಯ್ಯನ ಭಕ್ತಿಯ ರಸಗಾಳಿ ಹಗಲಿರುಳು ಬೀಸುತ್ತಿದೆ_ಬೀಸುತ್ತಿರಲಿ!

■■

## ಅಂಬಿಗರ ಚೌಡಯ್ಯ

ಬಸವಣ್ಣನವರ ಸಮಕಾಲೀನನಾಗಿದ್ದ ಚೌಡಯ್ಯನು ದೋಣಿ ನಡೆಸುವ ಕಾಯಕ ಮಾಡುತ್ತಿದ್ದುದರಿಂದ ಅಂಬಿಗರ ಚೌಡಯ್ಯ ಎಂದು ನಾಮಾಂಕಿತಗೊಂಡಿದ್ದನು. ಆ ಕಾಲದ ಶೋಷಿತ ವರ್ಗದ ಪ್ರತಿನಿಧಿಯಾಗಿ, ಶ್ರೇಷ್ಠ ಅನುಭಾವಿಯಾಗಿ ಮತ್ತು ನೇರ–ನಿಷ್ಠುರ ನುಡಿಯ ವಚನಕಾರನಾಗಿ ಹೆಸರುವಾಸಿಯಾಗಿದ್ದನು. ಇವನ ೨೭೮ ವಚನಗಳು ಪ್ರಸ್ತುತ ಲಭ್ಯವಿದ್ದು, ಅವುಗಳಲ್ಲಿ ಸಾಮಾಜಿಕ ವಿಡಂಬನೆ, ಧಾರ್ಮಿಕ ನಿಷ್ಠೆ ಮತ್ತು ಮಾನವೀಯ ಮೌಲ್ಯಗಳನ್ನು ಕಾಣಬಹುದಾಗಿದೆ. ಬಸವಣ್ಣನವರು ಸ್ಥಾಪಿಸಿದ ಅನುಭವಮಂಟಪ ಹಾಗು ಆ ಕಾಲದಲ್ಲಿ ಜರುಗಿದ ಸಮಾಜೋ–ಧಾರ್ಮಿಕ ಚಳುವಳಿಯಲ್ಲಿ ಪ್ರಮುಖ ಪಾತ್ರ ವಹಿಸಿದನೆಂಬುದನ್ನು ಬಿಟ್ಟರೆ ಅವನ ವೈಯಕ್ತಿಕ ಬದುಕಿನ ವಿಚಾರಗಳು ತತ್ಕಾಲೀನ ಕಾವ್ಯ ಪುರಾಣಗಳಲ್ಲಿ ಉಲ್ಲೇಖವಾಗಿಲ್ಲ. ಉಪಮೆ, ರೂಪಕ ಹಾಗು ಸುಭಾಷಿತಗಳಂತಹ ನುಡಿಮುತ್ತುಗಳನ್ನು ತನ್ನ ವಚನಗಳಲ್ಲಿ ಹೇರಳವಾಗಿ ಬಳಸಿದ್ದಾನೆ. ವೈಚಾರಿಕ ಪ್ರವೃತ್ತಿಯ ಸಾಮಾಜಿಕ ಚಿಂತಕನಾಗಿದ್ದ ಚೌಡಯ್ಯನು ವಚನಾಭಿವ್ಯಕ್ತಿಯಲ್ಲಿ ದೇಶೀ ಸೊಗಡನ್ನು ಸಮರ್ಥವಾಗಿ ಬಳಸಿದ್ದಾನೆ.

**ಡಾ. ಸಿದ್ಧರಾಮ ಸ್ವಾಮಿಗಳು**
ನಾಗನೂರು ಶ್ರೀ ರುದ್ರಾಕ್ಷಿಮಠ, ಬೆಳಗಾವಿ

# ಕಟ್ಟಿದ ಲಿಂಗವ ಬಿಟ್ಟು ಬೆಟ್ಟದ ಲಿಂಗವೇಕೆಂದಾತ...

● ವೆಂಕಟೇಶ ಕೆ. ಜನಾದ್ರಿ

*ಅಂಬಿಗರ ಚೌಡಯ್ಯ ಜಯಂತಿ ನಿಮಿತ್ತ 'ಲಿಂಗಾಯತ ದರ್ಶನ'ವು ವಿಶೇಷ ಲೇಖನವನ್ನು ಪ್ರಕಟಿಸುತ್ತಿದೆ.*

ಸಮಾಜದ ಅಂಕುಡೊಂಕುಗಳನ್ನು ಅಂಕುಡೊಂಕಿನ ಮೊನಚುಗಳಿಂದಲೇ ತಿವಿಯುತ್ತಾ ಹದಗೆಟ್ಟ ವ್ಯವಸ್ಥೆಯನ್ನು ನೇರ, ನಿರ್ಭಯದ ದಿಟ್ಟತನದಿಂದ ನಿರಂತರವಾಗಿ ಸರಿಪಡಿಸುವಲ್ಲಿ ಪ್ರಯತ್ನಿಸಿದ ಗಣಾಚಾರಿ ತತ್ವದ ಶರಣರಿವರು. ಪ್ರತಿಯೊಂದನ್ನು ಅನುಭವ ಮತ್ತು ವೈಚಾರಿಕತೆಯಿಂದ ಅನುಭಾವಿಸಿರುವ ವಿಶಿಷ್ಠ ಶಿವಶರಣರಿವರು. ದೋಣಿ ನಡೆಸುವ ಕಾಯಕದಲ್ಲಿ ಪ್ರೀತಿ, ಗೌರವ, ಅಭಿಮಾನವನ್ನು ಮೆರೆದವರು.

ಚೌಡಯ್ಯನವರು ಇಂದಿನ ಧಾರವಾಡ ಜಿಲ್ಲೆಯ ಶಿವಪೂರ– ಚೌಡದಾನಪುರದಲ್ಲಿ ಸುಮಾರು ಕ್ರಿ.ಶ. ೧೧೬೦ರಲ್ಲಿ ಜನಿಸಿದ್ದಾರೆಂದು ಅಂದಾಜಿಸಲಾಗಿದೆ. ಇಂದು ಇವರು ರಚಿಸಿರುವ ಸುಮಾರು ೨೭೯ ವಚನಗಳು ಮಾತ್ರ ದೊರೆತಿವೆ, ಇವರ ಅನೇಕ ವಚನಗಳು ಇನ್ನೂ ಬೆಳಕಿಗೆ ಬರಬೇಕಾಗಿದೆ. ಅಲ್ಲದೇ ಇವರ ಧೋರಣೆಯ ಬಗೆಗೂ ಶೋಧ ಕಾರ್ಯ ನಡೆಯಬೇಕಾಗಿದೆ. ಇವರ ವಚನಗಳಲ್ಲಿ ಅತ್ಯಂತ ನಿರ್ಭೀತ, ನಿಷ್ಠುರ, ನಿರ್ದಾಕ್ಷಿಣ್ಯ, ಕಟೋಕ್ತಿ ಜತೆಜತೆಗೆ ವೈಚಾರಿಕ ಮನೋಭಾವವನ್ನು ಕಾಣಬಹುದು. ಇವರೊಬ್ಬ ಶ್ರೇಷ್ಠ ಅನುಭಾವಿ. ತನ್ನ ವೃತ್ತಿಯನ್ನೇ ಸಾಂಕೇತಿಕವಾಗಿ ಅನುಭಾವದ ಮೂಲಕ ವ್ಯಂಜಿಸಿದವರಿವರು, ಜತೆಗೆ ಅನ್ಯಾಯ, ಜಾತೀಯತೆ, ಅಧಾರ್ಮಿಕ ಆಚರಣೆಗಳನ್ನು ನೇರ, ದಿಟ್ಟ ಮತ್ತು ನಿರಂತರವಾಗಿ ಕಟುವಾಗಿ ವಿರೋಧಿಸಿ ಟೀಕಿಸಿದವರಿವರು. ಉಳಿದೆಲ್ಲಾ ಶರಣರ ವಚನಾಂಕಿತಗಳು ವಿಭಿನ್ನಾರ್ಥದಲ್ಲಿದ್ದರೆ ಇವರು ತಮ್ಮ ಹೆಸರನ್ನೇ ವಚನಗಳ ಅಂಕಿತಕ್ಕೆ ಬಳಸಿಕೊಂಡಿರುತ್ತಾರೆ.

ಚೌಡಯ್ಯನವರ ಎಲ್ಲಾ ವಚನಗಳಲ್ಲಿ ಬದುಕಿಗೆ ಅವಶ್ಯವಿರುವ ಮೌಲ್ಯ ಮತ್ತು ನಿಜಾರ್ಥದ ಸಾರ್ಥಕ್ಯಗಳನ್ನು ಅರ್ಥಪೂರ್ಣವಾಗಿ ಕಟ್ಟಿಕೊಡುತ್ತವೆ. ಬದುಕಿನ ಎಲ್ಲಾ ಸ್ಥರದಲ್ಲಿ ಹೋರಾಟದ ಮಜಲುಗಳನ್ನು ರೂಪಿಸುವಲ್ಲಿ, ಜೀವಪರ ಅಂಶಗಳನ್ನು ಕಟ್ಟಿಕೊಡುವಲ್ಲಿ ಮಾರ್ಗದರ್ಶಿ ಸೂತ್ರಗಳನ್ನು ಒದಗಿಸುತ್ತವೆ. ಚೌಡಯ್ಯನವರ ವಚನಗಳು ಅರ್ಥಶಾಸ್ತ್ರ, ಸಮಾಜಶಾಸ್ತ್ರ, ವಿಜ್ಞಾನ, ಮಾನವಿಕ ಶಾಸ್ತ್ರ, ರಾಜ್ಯಶಾಸ್ತ್ರದ ತತ್ವಗಳನ್ನಳವಡಿಸಿಕೊಂಡು ಬೆಳಕನ್ನು ಚೆಲ್ಲುವರಿಸಿವೆ. ಸಮಾಜದ ಬಗ್ಗೆ ಚಿಂತಿಸದೇ ಮಾನವೀಯತೆಯ ಬಗೆಗೆ ಪರಾಮರ್ಶಿಸದೇ ಬದುಕಿನಿಡೀ ತಾನು, ತನ್ನದೇ ಅಭಿವೃದ್ಧಿ ಬಗೆಗೆ ಸದಾ ಸ್ವಾರ್ಥಿಯಾಗಿರುವವರ ಇವರು ವಚಿಸಿದ ವಚನ ಕಣ್ಣು ತೆರೆಸಿರುವುದನ್ನು ಇಲ್ಲಿ ಕಾಣುತ್ತೇವೆ. ಸ್ವಾರ್ಥತೆ, ಅಸಮಾನತೆ, ಅಮಾನವೀಯತೆಯ ಸಾಮಾಜಿಕ ಅವ್ಯವಸ್ಥೆಯಲ್ಲಿ ವಿವಿಧ ಸ್ಥರದ ಹಸಿವಿನ ಒಡಲುಳ್ಳವರ ಒಡಲಿಗೆ ಮಾನವೀಯತೆಯ ತುತ್ತನ್ನಿಡುವತ್ತ ಇವರ ಚಿಂತನೆಗಳು ಒಡಲುಗೊಂಡವರಳಲಿಗೆ ಸಾಂತ್ವನ ನೀಡುತ್ತವೆ.

**"ಬಡತನಕ್ಕೆ ಉಂಬುವ ಚಿಂತೆ, ಉಂಬಲಾದರೆ ಉಡುವ ಚಿಂತೆ, ಉಡಲಾದರೆ ಇಡುವ ಚಿಂತೆ, ಇಡಲಾದರೆ ಹೆಂಡಿರ ಚಿಂತೆ, ಹೆಂಡಿರಾದರೆ ಮಕ್ಕಳ ಚಿಂತೆ, ಮಕ್ಕಳಾದರೆ ಬದುಕಿನ ಚಿಂತೆ, ಬದುಕಾದರೆ ಕೇಡಿನ ಚಿಂತೆ, ಕೇಡಾದರೆ ಮರಣದ ಚಿಂತೆ, ಇಂತೀ ಹಲವು ಚಿಂತೆಯುಳ್ಳಿಪ್ಪರ ಕಂಡೆನು. ಶಿವಚಿಂತೆಯಲ್ಲಿದ್ದವರೊಬ್ಬರನೂ ಕಾಣೆನೆಂದಾತ ನಮ್ಮ ಅಂಬಿಗರ ಚೌಡಯ್ಯ"**

ಇಂದಿನ ಅಮಾನವೀಯ ಸ್ವಾರ್ಥ ಪರಿಸರದ ತಾರತಮ್ಯದ ವ್ಯವಸ್ಥೆಯಲ್ಲಿ ಬಹಳಷ್ಟು ಜನ ತಾನು, ತನ್ನ ಬದುಕು, ತನ್ನವರು, ತನ್ನ ಭವಿಷ್ಯತ್ತಿಗಾಗಿ ಮಾತ್ರವೇ ಸದಾ ಚಿಂತಿತರಾಗಿರುತ್ತಾರೆ. ಮೇಲಿನ ವಚನದಲ್ಲಿ ತಿಳಿಸಿದಂತೆ ಆರಂಭದಲ್ಲಿ ಬಡವನಿಗೆ ಹಸಿವನ್ನು ಎದುರಿಸುವಾಗ ಊಟದ

ಲೆಕ್ಕಪತ್ರ ಅಧೀಕ್ಷಕ, ಈಕರಸಾ ಸಂಸ್ಥೆ , ಕೇಂದ್ರ ಕಛೇರಿ, ಕಲಬುರ್ಗಿ–೫೮೫೧೦೨ ಮೊ: ೯೯೪೫೩೩೪೮೪೨

ಚಿಂತೆಯಾದರೆ, ಹೊಟ್ಟೆ ತುಂಬಿದ ನಂತರ ಬಟ್ಟೆ ಉಡುವ ಚಿಂತೆ ಅದಾದ ನಂತರ ನಾಳೆಗಾಗಿ ಕಾಪಿಡುವ ಚಿಂತೆ, ಸಂಗ್ರಹ ಮಾಡಿಕೊಳ್ಳುವ ತವಕ, ತನ್ನದಾದ ನಂತರ ಹೆಂಡತಿಗಾಗಿ, ಹೆಂಡತಿಗಾದ ನಂತರ ಮಕ್ಕಳ ಚಿಂತೆ ಮಕ್ಕಳಾದರೆ ಮುಂದಿನ ಬದುಕಿನ ಚಿಂತೆ, ಬದುಕು ಸಹ ಒಂದು ಹಂತದಲ್ಲಿ ಸುಂದರವಾಗಿ ಅರಳಿ ನಿಂತ ಮೇಲೆ ಇದೇ ರೀತಿಯ ಸುಂದರವಾದ ಕ್ಷಣಗಳು ಮುಂದೆ ಇರುವವೋ ಇಲ್ಲವೋ ಏನಾದರೂ ಕೇಡು ಸಂಭವಿಸಿದರೆ ಗತಿ ಏನು? ಎಂಬ ಪ್ರಶ್ನೆ ಯಾರದ್ಯಾರದೋ ಸಹಾಯ ಸಹಕಾರದೊಂದಿಗೆ ಬರುವ ಎಲ್ಲಾ ಬಗೆಯ ಕೇಡುಗಳನ್ನು ಸಮರ್ಥವಾಗಿ ಎದುರಿಸಿದ ನಂತರ, ಒಂದಲ್ಲ ಒಂದು ದಿವಸ ಬರುವ, ಬರಲೇಬೇಕಾದ ಸಾವಿನ ಚಿಂತೆ ಹೀಗೆ ಮನುಷ್ಯ ತನ್ನ ತೊಟ್ಟಿಲಿನಿಂದ ಆರಂಭವಾಗಿ ತನ್ನ ಚಟ್ಟದ ವರೆಗೂ ತಾನು ಮತ್ತು ತನ್ನ ಸಂಸಾರದ ಬಗೆಗೆ ಚಿಂತಿಸುತ್ತಿದ್ದರೆ ಆತ ಸಮಾಜ ಮುಖಿಯಾಗಿ ಸ್ವಲ್ಪವಾದರೂ ಚಿಂತಿಸುವುದು ಯಾವಾಗ? ಚೌಡಯ್ಯನವರ ದೃಷ್ಟಿಯಲ್ಲಿ ಇಲ್ಲಿ ಶಿವ ಎಂದರೆ ಇತರರಲ್ಲಿ ಕಾಣುವ ದೇವಾಂಶ ಅಂದರೆ ಸಮಾಜ ಮತ್ತು ವ್ಯವಸ್ಥೆಯ ಪ್ರತಿರೂಪವಾಗಿದೆ.

ಈ ವಚನದಲ್ಲಿ ಚೌಡಯ್ಯನವರು ಪ್ರತಿಯೊಬ್ಬ ಮನುಷ್ಯನ ಸ್ವಾರ್ಥತೆಯ ಬಗೆಗೆ ಬಹಳ ಅರ್ಥಪೂರ್ಣವಾಗಿ ಧ್ವನಿಸುವ ಮೂಲಕ ಆತ ಸಮಾಜ ಮುಖಿಯಾಗಿರುವ ಅವಶ್ಯಕತೆಯ ಬಗೆಗೆ ಎಚ್ಚರಿಕೆಯ ಬಾಣವನ್ನು ನಯವಾಗಿ ಉಪಯೋಗಿಸಿ ಮಾನವನನ್ನು ಎಚ್ಚರಿಸಿ ಆತನನ್ನು ದೇವ ಮಾನವನನ್ನಾಗಿಸುವ ಚಿಂತನೆಗಳನ್ನು ಬಹಳ ನಿಷ್ಠುರವಾಗಿಯೇ ಹೇಳಿರುತ್ತಾರೆ. ಮನುಷ್ಯನಿಗೆ ಹಣ, ಅಂತಸ್ತು, ಆಸ್ತಿ ಯಾವುದೂ ಶಾಶ್ವತವಲ್ಲವಾದರೂ ನಾವುಗಳೆಲ್ಲಾ ಅವುಗಳಿಗಾಗಿ ಅವುಗಳ ಬೆನ್ನ ಹಿಂದೆ ಓಡುತ್ತಿರುವುದರ ಬಗೆಗೆ ತೀವ್ರವಾಗಿ ಎಚ್ಚರಿಸಿದ್ದಾನೆ. ಮನುಷ್ಯ ಸದಾ ಚಿಂತಿಸುತ್ತಿರುವ ಹಪಾಹಪಿತನವನ್ನು, ಚಿಂತೆಯನ್ನು ಬಿಟ್ಟು ಚಿಂತನ ಮಾಡುತ್ತಾ ಬದುಕಿನ ನಿಜದ ನಿಲುವನ್ನು ಕಂಡುಕೊಳ್ಳುವುದು ಮುಖ್ಯವೆಂದು ಚೌಡಯ್ಯನವರು ಈ ವಚನದ ಮೂಲಕ ನಮಗೆ ಪಚನ ಮಾಡಿಸಿದ್ದಾರೆ.

"ಅಂಬಿಗ ಅಂಬಿಗ ಎಂದು ಕುಂದ ನುಡಿಯದಿರು ನಂಬಿದರೆ ಒಂದೆ ಹುಟ್ಟಲಿ ಕಡೆಯ ಹಾಯಿಸುವನಂಬಿಗರ ಚೌಡಯ್ಯ" ಎಂದು ವಚಿಸುವಲ್ಲಿ ಇಂದಿನ ವ್ಯವಸ್ಥೆಯಲ್ಲಿ ಏಕತೆಯಲ್ಲಿ ಭಿನ್ನತೆಯನ್ನು ನಾವು ಕಾಣುತ್ತೇವೆ. ಆದರೆ ಚೌಡಯ್ಯ ಬಹಳ ಅಭಿಮಾನ, ಪ್ರೀತಿ, ಗೌರವದಿಂದ ತನ್ನ ಪವಿತ್ರವಾದ ಇಲ್ಲಿ ತನ್ನ ದೋಣಿ ನಡೆಸುವ ಕಾಯಕದ ಬಗೆಗೆ ಹೇಳುತ್ತಾನೆ. ನಂಬಿ ಬರುವ ಯಾರನ್ನೇ ಆದರೂ ಒಂದೇ ಜನ್ಮದಲ್ಲಿ ಪರಮಾತ್ಮನ ಸಾಕ್ಷಾತ್ಕಾರ ಮಾಡಿಸುವೆ ಎನ್ನುವಲ್ಲಿ ನಾವು ಈ ವಚನದ ಹಿಂದಿರುವ ಉದ್ದೇಶದ ಅರ್ಥಪೂರ್ಣತೆಯನ್ನು ಗುರುತಿಸಬಹುದಾಗಿದೆ.

ಒಂದೇ ದೋಣಿಯಲ್ಲಿ ಒಬ್ಬ ಹಿಂದೂ, ಆತನ ಪಕ್ಕ ಒಬ್ಬ ಮುಸ್ಲಿಮ್, ಆತನ ಎದುರಿಗೊಬ್ಬ ಕ್ರಿಶ್ಚಿಯನ್, ಮುಂದೊಬ್ಬ ದಲಿತ, ಒಬ್ಬ ಮಹಿಳೆ ಕುಳಿತುಕೊಂಡಿದ್ದರೂ ಅವರುಗಳನ್ನೆಲ್ಲಾ ಒಂದೇ ಸಲಕ್ಕೆ, ಒಂದೇ ಸಮಯಕ್ಕೆ, ಒಂದೇ ವೇಗದಲ್ಲಿ, ನದಿಯ ಆಚೆಗಿರುವ ದಡವನ್ನು ಸೇರಿಸುವ ಪವಿತ್ರವಾದ "ಅಂಬಿಗ" ಕಾಯಕ ಚೌಡಯ್ಯನವರದು. ಈ ತರಹ ಎಲ್ಲರನ್ನೂ ಒಗ್ಗೂಡಿಸಿಕೊಂಡು ಮುನ್ನಡೆಯಲು ಯಾವ ಧಾರ್ಮಿಕ ಕೇಂದ್ರದಲ್ಲಿಯೇ ಆಗಲಿ, ದೇವಸ್ಥಾನದಲ್ಲಾಗಲೀ, ಚರ್ಚಿನಲ್ಲಾಗಲೀ, ಮಸೀದಿಯಲ್ಲಾಗಲೀ, ಮಹಿಳಾ ಸಮಾಜದಲ್ಲಾಗಲೀ ಸಾಧ್ಯವೇ? ಇಲ್ಲೆಲ್ಲಾ ಅವರವರ ಗುಂಪಿನವರನ್ನು ಮಾತ್ರ ಮುನ್ನಡೆಸಬಹುದು, ಅದಕ್ಕೇ ವಾಸ್ತವವಾಗಿ ನನ್ನ ದೃಷ್ಟಿಯಲ್ಲಿ ಚೌಡಯ್ಯನವರ ದೋಣಿಯೆಂದರೆ ಅದೊಂದು ತೇಲಾಡುತ್ತ ನಡೆದಾಡುವ ಅನುಭವ ಮಂಟಪವಾಗಿದೆ. ಇಲ್ಲಿ ಚೌಡಯ್ಯನವರು ಜಾತಿ, ಧರ್ಮ, ಮೇಲು ಕೀಳು, ಪುರುಷ, ಮಹಿಳೆ ಎಂಬ ಯಾವುದೇ ರೀತಿಯ ಭೇದ ಭಾವವನ್ನು ಮೀರಿ ನಿಂತಿರುವ ಧೋರಣೆಯಿದೆ. ಇವರೆಲ್ಲರಲ್ಲಿ ಸಂಚಲನೆಯನ್ನುಂಟು ಮಾಡಿ ತನ್ನ ದೋಣಿಯನ್ನು ಅನುಭವ ಮಂಟಪವನ್ನಾಗಿಸಿ ಮುನ್ನಡೆಸುವ ಸಾರಥಿಯಾಗಿದ್ದಾನೆ. "ಬದುಕೊಂದು ದೋಣಿ ವಿಧಿಯದರ ಅಂಬಿಗ, ಆ ಅಂಬಿಗನ ಕೈಯಲ್ಲಿದೆ ಆ ದೋಣಿಯಲ್ಲಿರುವವರೆಲ್ಲರ ಆ ಬದುಕು" ಎಂಬಂತೆ ಆ ದೋಣಿಯಲ್ಲಿ ಪ್ರಯಾಣಿಸುವ ಆ ಎಲ್ಲಾ ಪ್ರಯಾಣಿಕರ ಬದುಕು ಅಂಬಿಗನ ಕೈಯಲ್ಲಿದೆ ಇಂತಹ ಹೆಮ್ಮೆಯ ಕಾಯಕ ಚೌಡಯ್ಯನವರದಾಗಿದೆ. ಸ್ವಲ್ಪ ಸೂಕ್ಷ್ಮವಾಗಿ ಅವಲೋಕಿಸಿದರೆ ಯಾವುದೇ ಒಂದು ದೇವಸ್ಥಾನ, ಚರ್ಚ, ಮಸೀದಿ, ಧಾರ್ಮಿಕ ಕೇಂದ್ರಗಳು ಮಾಡದಂಥಹ ಸರ್ವಧರ್ಮ ಸಮನ್ವಯದ ಕಾಯಕವನ್ನು ತನ್ನ ಬದುಕಿನ ಕಾಯಕವನ್ನಾಗಿ ಮಾಡಿಕೊಂಡಿದ್ದ ಅಂಬಿಗರ ಚೌಡಯ್ಯನವರು ದೈನಂದಿನ ಕಾಯಕದಲ್ಲಿ ಅಪಾರವಾದ ಜೀವನ ಮೌಲ್ಯವನ್ನು ತಾವು ಕಂಡುಕೊಂಡು ಅದನ್ನು ಜಗಕ್ಕೆ ಜಂಗಮುಗೊಳಿಸಿ

ಸಮಾನತೆಯ ಹರಿಕಾರರಾಗಿ ಅರ್ಥಪೂರ್ಣ ಕಾಯಕವನ್ನು ಕೈಕೊಂಡವರಾಗಿದ್ದರು.

ಮತ್ತೊಂದೆಡೆ ಚೌಡಯ್ಯನವರು **"ಛಂದಗೆಟ್ಟವರೆಲ್ಲಾ ಬಂದೇರಿ ದೋಣಿಯುನು ಶಿವನೊಂದೆ ತಾವಿಗೊಯ್ದಿಳುಹುವೆನೆಂದನಂಬಿಗ ಚೌಡಯ್ಯ"** ಎಂದವರು ಬದುಕಿನಲ್ಲಿ ನೊಂದು ಬೆಂದವರನ್ನು, ಹಪಾಹಪಿತನವನ್ನನುಭವಿಸಿ ಬದುಕಿನಲ್ಲಿ ಸ್ಪೂರ್ತಿಯನ್ನೇ ಕಳೆದುಕೊಂಡವರನ್ನುದ್ದೇಶಿಸಿ ನೀವುಗಳೆಲ್ಲಾ ನನ್ನ ದೋಣಿಯಲ್ಲಿ ಬನ್ನಿ ನಿಮ್ಮನ್ನು ಶಿವನ ಬಳಿಗೆ ಕರೆದೊಯ್ದು ನಿಮಗೆಲ್ಲಾ ಶಾಶ್ವತವಾದ ಸುಖವನ್ನು ನೀಡುವೆ ಎನ್ನುತ್ತಾ ನೊಂದವರ ಬದುಕಿನ ಜೀವಪರವಾದ ಸಕಾರಾತ್ಮಕ ಧೋರಣೆಯಿಂದ ಅವರಲ್ಲಿ ಹೊಸ ಚೈತನ್ಯವನ್ನು ತುಂಬಿ ಅವರೆಲ್ಲರಿಗೊಂದು ಹೊಸ ಬದುಕನ್ನು ಕಟ್ಟಿಕೊಟ್ಟಿರುತ್ತಾನೆ. ತಮ್ಮ ವಿಳಾಸವನ್ನು ತಿಳಿಯದವರುಗಳಿಗೆ ಅವರ ಭವ್ಯವಾದ ಇತಿಹಾಸವನ್ನು ತಿಳಿಸಿಕೊಡುವ ಮೂಲಕ ಇಂದಿನ ಸುಂದರ ದಿನಗಳನ್ನು ಕಾಣುವ ಬಗೆ ಮತ್ತು ನೆಮ್ಮದಿಯ ನಾಳೆಗಳನ್ನು ಕಟ್ಟಿಕೊಳ್ಳುವ ಬಗೆಗೆ ಹೊಸ ಜೀವ ಚೈತನ್ಯವನ್ನು ಅರಳಿಸುತ್ತಾನೆ. ಅಲ್ಲದೇ ಉದಯದಲ್ಲೆದ್ದು ಪತ್ರೆ ಪುಷ್ಪಗಳಿಗೆ ಹೋಗುವ ಅಣ್ಣಗಳಿಗೆ ನೀವು ಗುಡಿ ಗುಂಡಾರಗಳಿಗೆ ಹೋಗಿ ಪೂಜೆಯ ಹೆಸರಿನಲ್ಲಿ ಭಕ್ತಿಯ ಪ್ರದರ್ಶನಕ್ಕಾಗಿ ಆಡಂಬರದ ಪೂಜೆಯನ್ನು ಮಾಡಿಸಿ ಅನಾವಶ್ಯಕವಾಗಿ ಖರ್ಚು ಮಾಡುವ ಬದಲಿಗೆ ಹಸಿದವನ ಹೊಟ್ಟೆಯನ್ನು ತುಂಬಿಸಲು, ಸಮುದಾಯದ ಹಿತಕ್ಕಾಗಿ ವೆಚ್ಚ ಮಾಡಿದರೆ, ಅವರುಗಳ ಶುಭ ಹಾರೈಕೆಯಿಂದ ಭಗವಂತ ತೃಪ್ತನಾಗುತ್ತಾನೆ. ಅದರಿಂದ ಸಕಲ ಜೀವಿಗಳೂ ತೃಪ್ತರಾಗಿ ನಿಮ್ಮ ಬದುಕಿಗೊಂದು ಅರ್ಥ ಬರುತ್ತದೆ ಎಂದು ಎಚ್ಚರಿಸುತ್ತಾನೆ. ಇಲ್ಲಿ ಚೌಡಯ್ಯನವರಿಗೆ ಒಡಲುಗೊಂಡವರಳಲಿನ ಸಂಕಟ ಅರ್ಥವಾಗಿ ಅವರ ಮನಮಿಡಿಯುವುದನ್ನು ಕಾಣುತ್ತೇವೆ. ಇನ್ನೊಬ್ಬರೊಡಲಳಲೇ ತನ್ನೊಡಲಳಲೆಂದು ಪರಿಭಾವಿಸಿ ಸಂಕಟಪಡುವವರು ಚೌಡಯ್ಯನವರು.

**"ವೇದಂಗಳೆಲ್ಲ ಬ್ರಹ್ಮನೆಂಜಲು, ಶಾಸ್ತ್ರಂಗಳೆಲ್ಲ ಸರಸ್ವತಿಯೆಂಜಲು, ಆಗಮಂಗಳೆಲ್ಲ ರುದ್ರನೆಂಜಲು, ಪುರಾಣಂಗಳೆಲ್ಲ ವಿಷ್ಣುವಿನೆಂಜಲು, ನಾದಬಿಂದುಕಳೆಗಳೆಂಬವು ಅಕ್ಷರತ್ರಯದೆಂಜಲು, ಅಕ್ಷರತ್ರಯಂಗಳು ಪ್ರಕೃತಿಯ ಎಂಜಲು. ಇಂತಿವೆಲ್ಲವ ಹೇಳುವರು ಕೇಳುವರು ಪುಣ್ಯಪಾಪಂಗಳೆಂಜಲೆಂದಾತನಂಬಿಗರ ಚೌಡಯ್ಯ"**

ಈ ವಚನದಲ್ಲಿ ಚೌಡಯ್ಯನವರು ವೇದ, ಶಾಸ್ತ್ರ, ಆಗಮ, ಪುರಾಣ, ನಾದಬಿಂದುಗಳ ಬಗ್ಗೆ ಇವುಗಳನ್ನು ಕೇಳುವವರು ಮತ್ತು ಹೇಳುವವರುಗಳಿಗೆಲ್ಲಾ ಪುಣ್ಯ ಮತ್ತು ಪಾಪಗಳ ಎಂಜಲುಗಳೆಂದು ಛೇಡಿಸುತ್ತಾರೆ. ಅಷ್ಟೇ ಅಲ್ಲ ಹೀಗೆನ್ನುವ ಮೂಲಕ ಕಲ್ಲು, ಕಟ್ಟಿಗೆ, ಗಾರೆ, ಇಟ್ಟಿಗೆಗಳಿಂದಾದ ದೇವಾಲಯಕ್ಕೆ ಪರ್ಯಾಯವಾಗಿ ದೇಹವೇ ದೇವಾಲಯ ಎಂದು ಅಂತರಾತ್ಮದ ಪ್ರತಿರೂಪವೇ (ಕುರುಹು) ಇಷ್ಟಲಿಂಗವೆಂದು ಆ ಇಷ್ಟಲಿಂಗದ ಪೂಜೆಯ ಮಹತ್ವವನ್ನು ಬಿಂಬಿಸಿರುತ್ತಾರೆ. ಹಾಗೆ ನೋಡಿದರೆ ಅಸ್ಪೃಶ್ಯರಿಗೆ ದೇವಾಲಯದಲ್ಲಿ ಪ್ರವೇಶವಿಲ್ಲದಿದ್ದಾಗ ಅವರ ದೇಹವೇ ದೇವಾಲಯವಾಗಿ ಅವರ ಆಂತರ್ಯದಲ್ಲಿಯೇ ದೇವಸ್ವರೂಪವನ್ನು ಕಂಡುಕೊಳ್ಳುವ ಮತ್ತು ಅದರ ಕುರುಹು ಆಗಿ ಇಷ್ಟಲಿಂಗದ ಮೂಲಕ ತಮ್ಮ ಕೈಯಲ್ಲಿಯೇ ಆ ದೇವರನ್ನು ಕಂಡು, ತಾವು ದೇವರತ್ತ ಹೋಗದೇ ದೇವರನ್ನೇ ತಮ್ಮತ್ತ ಕರೆಸಿಕೊಂಡಿರುವವರ ಪರವಾಗಿ ಹೆಮ್ಮೆಯಿಂದ ಅಭಿವ್ಯಕ್ತಿಸಿ, ಹೊರಗಿನವರ ಪರವಾಗಿ ಹೊರಗಿನವರಾಗಿ ಚೌಡಯ್ಯನವರು ನಿಂತಿರುವುದನ್ನು ನಾವಿಲ್ಲಿ ಕಾಣಬಹುದಾಗಿದೆ.

**"ಕಟ್ಟಿದ ಲಿಂಗವ ಬಿಟ್ಟು ಬೆಟ್ಟದ ಲಿಂಗಕ್ಕೆ ಹೋಗಿ, ಹೊಟ್ಟೆಡಿಯಾಗಿ ಬೀಳುವ ಲೊಟ್ಟೆ ಮೂಳನ ಕಂಡರೆ, ಮೆಟ್ಟಿದ ಎಡದ ಪಾದರಕ್ಷೆಯ ತಕ್ಕೊಂಡು ಲಟಲಟನೇ ಹೊಡೆ ಎಂದಾತ ನಮ್ಮ ಅಂಬಿಗರ ಚೌಡಯ್ಯ"**

ಎಂಬಲ್ಲಿ ಅಂಬಿಗರ ಚೌಡಯ್ಯನವರು ಭೂಮಿಯ ಮೇಲೆ ಲಿಂಗ ಸ್ಥಾಪಿಸುವುದು ಶರಣ ಸಂಸ್ಕೃತಿಯಲ್ಲವೇ ಅಲ್ಲ, ಶರಣ ಸಂಸ್ಕೃತಿಯಲ್ಲಿ ಇಷ್ಟಲಿಂಗವೇ ಸರ್ವಸ್ವವಾಗಿದ್ದು, ಆ ಇಷ್ಟಲಿಂಗವನ್ನು ಬಿಟ್ಟು ಬೆಟ್ಟದ ಲಿಂಗಕ್ಕೆ ಪೂಜಿಸಲು ಹೋಗುವವರಿಗೆ ಎಡಕಾಲಿನ ಚಪ್ಪಲಿಯನ್ನು ತೆಗೆದುಕೊಂಡು ಲಟಲಟನೇ ಹೊಡೆ ಎಂದು ಬಹಳ ನಿಷ್ಠುರವಾಗಿ ಮತ್ತು ಆಂತರ್ಯದ ಕಳಕಳಿಯಿಂದ ಎಚ್ಚರಿಸಿದ್ದಾರೆ. ಆದರೆ ಇಂದಿನ ಅನೇಕ ಮಠಾಧಿಪತಿಗಳು ವೇದಿಕೆ ಮೇಲೆ ಗಂಟಗಟ್ಟಲೇ ಬಸವತತ್ವ ಹೇಳಿ ಅನ್ಯ ಸಮಾಜದವರು ಕರೆದಲ್ಲಿಗೆ ಹೋಗಿ ಮೂರ್ತಿ(ಲಿಂಗ) ಸ್ಥಾಪನೆ ಮಾಡಿ ಬರುತ್ತಾರಲ್ಲಾ ಇದು ಸರಿಯೇ?

ಬಸವಾದಿ ಪ್ರಮಥರು ಬಹಳಷ್ಟು ಶ್ರಮಿಸಿ, ಚಿಂತಿಸಿ, ಯೋಚಿಸಿ, ಯೋಜಿಸಿ ದೇವಾಲಯದ ಒಳಗೆ ಹೋಗಲು ಅವಕಾಶವಿಲ್ಲದೇ ಹೊರಗಿರುವವರ ಕೈಯಲ್ಲಿಯೇ ಸಮಗ್ರ ದೇವರ ಕುರುಹಾಗಿ ಕೊಟ್ಟಿರುವ ಇಷ್ಟಲಿಂಗವನ್ನು ಬಿಟ್ಟು

ಮತ್ತದೇ ಸ್ಥಾವರ ಲಿಂಗಕ್ಕೆ ಶರಣು ಹೋಗುವವರಿಗೆ ಏನೆನ್ನಬೇಕು? ಇಷ್ಟಲಿಂಗವನ್ನು ಒಪ್ಪಿಕೊಂಡಿರುವವರೇ ಈ ರೀತಿ ಮಾಡುತ್ತಿರುವುದು ಮತ್ತಷ್ಟು ಖೇದಕರವಾದ ವಿಷಯ. ಅದಕ್ಕಾಗಿ ಬಸವಣ್ಣನವರನ್ನು ಲಿಂಗಾಯತರ ಕಪಿಮುಷ್ಟಿಯಿಂದ ಮತ್ತು ಅಂಬೇಡ್ಕರ್‌ವರನ್ನು ದಲಿತರ ಕಪಿಮುಷ್ಠಿಯಿಂದ ಮೊದಲು ಪಾರು ಮಾಡಬೇಕಾಗಿದೆ ಎಂದು ಚಿಂತಕರು ಚಿಂತಿಸಿದ್ದಾರೆ. ಈ ಮಾತನ್ನು ನಾನು ಯಾರ ಮನಸ್ಸಿಗೂ ನೋವುಂಟಾಗಲೆಂದು ಹೇಳುತ್ತಿಲ್ಲ ನನ್ನ ಮನದಾಳದ ಕಳಕಳಿಯಿಂದ ಬಸವ ತತ್ವದ ಉಳಿವು ಮತ್ತು ಬೆಳಸುವಿಕೆಯ ದೂರದೃಷ್ಟಿಯಿಂದ ಹೇಳಿರುವೆ. ಅದಕ್ಕಾಗಿ ಇಂದು ಅಂಬಿಗರ ಚೌಡಯ್ಯನವರ ಈ ವಚನವನ್ನು ನಾವು ಮತ್ತೊಮ್ಮೆ ಪಚಿಸಿಕೊಳ್ಳಬೇಕಾಗಿದೆ.

ಹೊಲೆಯರೆಂದರೆ ಊರಿನ ಹೊರಕೇರಿಯಲ್ಲಿರುವವರಲ್ಲಾ. ಏಕೆಂದರೆ ಇವರುಗಳು ತಯಾರಿಸಿದ ಹರಿಗೋಲು, ಮಿಣಿ, ಬಾರುಕೋಲು, ಮೃದಂಗ, ಡೋಲು, ನಗಾರಿ, ಸಿದ್ದಲಿಕೆ, ಬುದ್ದಲಿಕೆಗಳನ್ನು, ಚಪ್ಪಲಿಗಳನ್ನು ಮೇಲ್ವರ್ಗದವರೆಲ್ಲರೂ ಬಳಸುತ್ತಾರೆಂದ ಮೇಲೆ ಈ ವಸ್ತುಗಳಿಗೆ ಇಲ್ಲದ ಅಸ್ಪೃಷ್ಯತೆ, ಹೊಲೆತನ, ನಿಷೇಧಗಳು ಇವುಗಳನ್ನು ತಯಾರಿಸಿದವರಿಗೆ ಹೇಗೆ ಮತ್ತು ಏಕೆ ಅನ್ವಯವಾಗುತ್ತವೆ? ಎಂದು ಚೌಡಯ್ಯನವರು ಪ್ರಶ್ನೆಯ ಮೊನಚನ್ನು ಹರಿಸುತ್ತಾರೆ.

ಚೌಡಯ್ಯನವರ ದೃಷ್ಠಿಯಲ್ಲಿ ಊರ ಹೊರಗಿನವರು ಮಾತ್ರ ಹೊಲೆಯರಲ್ಲ, ಊರ ಒಳಗಿರುವವರಲ್ಲಿಯೂ ಅನೇಕರು ಹೊಲೆಯರಾಗಿದ್ದಾರೆ, ಅವರುಗಳೆಂದರೆ ತಾಯಿಗೆ ಬೈದವನು, ತಂದೆಗೆ ಎದುರುತ್ತರ ಕೊಟ್ಟು ಬೈದವನು, ಕೊಡುವ ದಾನಕ್ಕೆ ಅಡ್ಡಬಂದವನು, ನಡೆವ ದಾರಿಗೆ ಮುಳ್ಳು ಹಚ್ಚಿದವನು, ಹತ್ತು ಮಾತನಾಡಿದಲ್ಲಿ ಅದರಲ್ಲಿ ಒಂದೂ ನಿಜವಿಲ್ಲದ ಮಾತನಾಡಿದವನು, ಮನದಲಿ ಪರಸತಿಯ ಬಯಸಿದವನು, ಲಿಂಗ ತತ್ವವ ಬಿಟ್ಟು ತಿರುಗಾಡುವವನು, ಧರ್ಮ ಮಾಡದವನು, ಲಿಂಗಪೂಜೆ ಮಾಡಿಕೊಳ್ಳದವರು ಇಂತಹವರು ಊರೊಳಗಿದ್ದರೂ ನಿಜವಾದ ಹೊಲೆಯರು, ಆದರೆ ಊರ ಹೊರಗಿರುವವರು ಕಾಯಕ ನಿರತರು, ತತ್ವನಿರತರು, ಸತ್ಯನಿಷ್ಠರಾಗಿದ್ದು, ಊರೊಳಗಿರುವವರಿಗಾಗಿ ತಮ್ಮ ಬೆವರು ಮತ್ತು ರಕ್ತವನ್ನೇ ಬಸಿದು ವಸ್ತುಗಳನ್ನು ತಯಾರಿಸಿ ಶ್ರಮಿಸುವ ಶ್ರಮಿಕರು ಹೇಗೆ ತಾನೆ ಹೊಲೆಯರಾಗುತ್ತಾರೆ? ಎಂಬುದು ಬಹಳ ಮಾರ್ಮಿಕವಾದ ಪ್ರಶ್ನೆಯಾಗಿದೆ. ಚೌಡಯ್ಯನವರ ದೃಷ್ಟಿಯಲ್ಲಿ ಇವರುಗಳೆಲ್ಲಾ ದೇವ ಮಾನವರು.

ಹೀಗೆ ದೇವರ ಸಾಕ್ಷಾತ್ಕಾರಕ್ಕಿಂತ, ಮೋಕ್ಷದ ಹಂಬಲಕ್ಕಿಂತ ಕಾಯಕದಲ್ಲಿಯೇ ಕೈಲಾಸವನ್ನು ಕಂಡುಕೊಂಡವರು, ತಮ್ಮನ್ನು ತಾವು ಅರಿಯುವಂತೆ ಶರಣರನ್ನು ಉತ್ತೇಜಿಸಿದ ನ್ಯಾಯ ನಿಷ್ಠುರಿ ದಾಕ್ಷಿಣ್ಯಪರನಲ್ಲದ ನಿಜ ಕಾಯಕಯೋಗಿ ಅಂಬಿಗರ ಚೌಡಯ್ಯ ಹನ್ನೆರಡನೇ ಶತಮಾನದಲ್ಲಿಯೇ ಒಬ್ಬ ಪ್ರಾಯೋಗಿಕ ಬಂಡಾಯಗಾರ ವ್ಯವಸ್ಥೆಯ ವಿರುದ್ದ ಸಿಡಿದೆದ್ದು ನಿಜವಾದ ಹೊಲೆಯ ಯಾರು? ಎಂದು ಊರೊಳಗಿರುವವರ ನೈತಿಕತೆಯನ್ನು ಊರೊರಗೆ ತಂದು ಅನಾವರಣಗೊಳಿಸಿದ ಬಂಡಾಯಗಾರ; ಊರೊರಗಿರುವವರ ಕಾಯಕ ನಿಷ್ಠೆಯನ್ನು ತತ್ವದ ಮೂಲಕ ದೇವಮಾನವರಾದವರನ್ನು ಊರೊಳಗಿರಿಸಿ ಪೂಜಿಸಿದ ಮಾನವತಾವಾದಿ. ವಾಸ್ತವವಾದಿಯಾಗಿ ಚೌಡಯ್ಯನವರು ನಮ್ಮೆದುರಿಗೆ ಇಡೀ ವ್ಯವಸ್ಥೆಯನ್ನು ಯಥಾವತ್ತಾಗಿ ಅನಾವರಣಗೊಳಿಸಿದ್ದಾರೆ. ಅಂಬಿಗರ ಚೌಡಯ್ಯನವರು ನಿಜಕ್ಕೂ "ಉಪಮಿಸಬಾರದ ಉಪಮಾತೀತರು". ಶರಣ ಸಂಕುಲದ ಇವರ ಅನುಕರಣೀಯ ಮತ್ತು ಶರಣ ಸಂಕುಲದಲ್ಲಿ ತಲೆ ತುಂಬ ಕಲಿತು, ತಲೆ ಎತ್ತಿ ನುಡಿದು, ತಲೆ ಬಾಗಿ ನಡೆಯುವುದನ್ನು ಚೆನ್ನಾಗಿ ಕಲಿಸಿದ ನಿಜ ಗುರು ಅಂಬಿಗರ ಚೌಡಯ್ಯನವರು ನಮಗಿಂದು ಅಷ್ಟೇ ಅಲ್ಲ ನಮಗೆಂದೆಂದೂ ಆದರ್ಶವಾಗಿರಲೆಂದು ಬಯಸುವೆ.

■■

# ದಾಸೋಹ–ಪರಿಕಲ್ಪನೆ

● ಸಂಗಮೇಶ ಎನ್. ಜವಾದಿ

ಜಗತ್ತಿನಲ್ಲಿಯೇ ನಡೆದ ಸಾಮಾಜಿಕ ಚಳುವಳಿಗಳಲ್ಲಿ ಹನ್ನೆರಡನೆ ಶತಮಾನದ ವಚನ ಚಳುವಳಿ ಅಪರೂಪವಾದುದು, ಅಷ್ಟೇ ಪ್ರಮುಖವಾದುದು. ಐತಿಹಾಸಿಕ ಮಹತ್ವವುಳ್ಳ ಈ ಚಳುವಳಿ ಭಾರತದಲ್ಲಿ ನಡೆದ ಮೊದಲ ಸಂಘಟಿತ ಚಳುವಳಿಯಾಗಿದೆ. ಇದರಲ್ಲಿ ಸಮಾಜದ ಯಾವುದೋ ಒಂದು ಮುಖದ ದೋಷಗಳನ್ನು ಪ್ರಸ್ತಾಪಿಸಿ ಅವುಗಳ ನಿವಾರಣೆಗೆ ಪ್ರಯತ್ನಿಸುವುದೇ ಅಲ್ಲದೆ ಸಮಾಜ ಎದುರಿಸುತ್ತಿದ್ದ ಎಲ್ಲಾ ರೀತಿಯ ಸಮಸ್ಯೆಗಳನ್ನು ಗುರುತಿಸಿ ಅವುಗಳನ್ನು ನಿವಾರಿಸಿ ಸಮಾಜದ ಸಮಗ್ರ ಅಭಿವೃದ್ಧಿಯ ಬಗ್ಗೆ ಚಿಂತಿಸಲಾಯಿತು. ಅದಕ್ಕಾಗಿ ಅನೇಕ ಮಹತ್ವದ ಪರಿಕಲ್ಪನೆಗಳನ್ನು ಸೃಷ್ಟಿಸಿಕೊಂಡಿತು. ಅಂಥ ಪರಿಕಲ್ಪನೆಗಳಲ್ಲಿ ಮುಖ್ಯವಾದವುಗಳೆಂದರೆ ಷಟ್‌ಸ್ಥಲ, ಗುರು–ಲಿಂಗ–ಜಂಗಮ ಮತ್ತು ಕಾಯಕ–ಪ್ರಸಾದ–ದಾಸೋಹ..

ಇವುಗಳಲ್ಲಿ ಬಹಳ ಮುಖ್ಯವಾದ ದಾಸೋಹದ ಬಗ್ಗೆ ವಚನಕಾರರ ರಚನೆಗಳನ್ನು ಆಧರಿಸಿ ಕೆಲವು ವಿಚಾರಗಳನ್ನು ತಿಳಿಯಬಹುದು. ವಚನಕಾರರ ವಿಚಾರಗಳು ಸಮಕಾಲೀನ ಸಮಾಜದ ಸಂದರ್ಭದಲ್ಲಿ ಹೇಗೆ ಪ್ರಸ್ತುತವಾಗಿವೆ ಎಂಬುದನ್ನು ತಿಳಿಯುವುದು ಇಂದಿನ ದಿನಗಳಲ್ಲಿ ಅಗತ್ಯವಾಗಿದ್ದು ಅಂಥ ಪ್ರಯತ್ನ ಇಲ್ಲಿ ಮಾಡಲಾಗಿದೆ. ದಾಸೋಹದ ತತ್ತ್ವವನ್ನು ಕುರಿತು ಬಹುತೇಕ ಎಲ್ಲ ಶಿವಶರಣರು ಮಾತನಾಡಿರುವುದು ಅವರ ವಚನಗಳಿಂದ ನಮಗೆ ತಿಳಿದು ಬರುತ್ತದೆ.

**ಕಾಯಕವಳಿದ ಶಾವಿನಲ್ಲಿ ಜೀವದ ಎಡೆಯಾಟ ಉಂಟೆ?**
**ಭಾವವಿಲ್ಲದ ಭಕ್ತಿ ಹೋಯಿತ್ತು,**
**ಮಾರಯ್ಯಪ್ರಿಯ ಅಮಲೇಶ್ವರಲಿಂಗವ ಮುಟ್ಟದೆ.**

ಎನ್ನುವ ಶಿವಶರಣೆ ಆಯ್ದಕ್ಕಿ ಲಕ್ಕಮ್ಮರವರ ವಚನ ಇದಾಗಿದೆ. ದಾಸೋಹದ ಪರಿಕಲ್ಪನೆಯನ್ನು ಎಳೆ ಎಳೆಯಾಗಿ, ಜನಸಾಮಾನ್ಯರಿಗೆ ತಿಳಿಯುವಂತೆ ವಚನ ರಚನೆ ಮಾಡಿದ್ದಾರೆ. ಕಾಯಕವು ಎಲ್ಲಿ ಇಲ್ಲವೋ ಅಲ್ಲಿ ಜೀವನಕ್ಕೆ ಅರ್ಥವಿಲ್ಲ; ದಾಸೋಹ ಇಲ್ಲದಿದ್ದಲ್ಲಿ ಸೃಷ್ಟಿಕರ್ತನ ಕೃಪೆ ಸಿಗುವುದಿಲ್ಲ. ಕಾಯಕ–ದಾಸೋಹಗಳು ಎಲ್ಲಿ ಇರುತ್ತವೋ ಅಲ್ಲಿ ಸೃಷ್ಟಿಕರ್ತನ ಕೃಪೆ ಸದಾ ಇರುತ್ತದೆ. ನೆಮ್ಮದಿ–ಸಂತೋಷ ಹಾಗು ಸ್ನೇಹಮಯ ಸಾಮರಸ್ಯ ಜೀವನ ಸಹ ನಮ್ಮದಾಗುತ್ತದೆ ಎಂದು ವಿವರಿಸಿದ್ದಾರೆ. ಹಾಗಾಗಿ ನಾವೆಲ್ಲರೂ ಕಾಯಕ ಮಾಡಬೇಕು. ಕಾಯಕವೆಂದರೆ ಸತ್ಯದ ನೆಲೆಗಟ್ಟಿನ ಮೇಲೆ ಶುದ್ಧವಾಗಿ, ಲೋಕಹಿತಕ್ಕಾಗಿ ಉತ್ಪಾದನೆಯಲ್ಲಿ ತೊಡಗುವ ಕ್ರಿಯೆ. ಮಾನವ ಕುಲಕ್ಕೆ ಹಾನಿಯುಂಟುಮಾಡುವ ಯಾವುದೇ ಕೆಲಸ ಕಾಯಕವಲ್ಲ. ನಿಜವಾದ ಕಾಯಕದಿಂದ ಬಂದಿದ್ದನ್ನು ದೇವರ ಪ್ರಸಾದವೆಂದು ತಿಳಿಯಬೇಕು. ಗಳಿಸಿದ್ದನ್ನೆಲ್ಲ ನಮಗಾಗಿ ಬಳಸದೇ ಅಥವಾ ಸಂಗ್ರಹಿಸದೇ ಸಾಮಾಜಿಕ ಜವಾಬ್ದಾರಿಯನ್ನು ಪ್ರದರ್ಶಿಸಬೇಕು. ಎಷ್ಟು ಬೇಕೋ ಅಷ್ಟು ಐಹಿಕ ವಸ್ತುಗಳನ್ನು ಪ್ರಸಾದದ ಹಾಗೆ ಸ್ವೀಕರಿಸಬೇಕು. ಅದಕ್ಕಿಂತ ಹೆಚ್ಚಿನದು ವಿಷ ವಸ್ತುವಾಗಿ ಪರಿಣಮಿಸುತ್ತದೆ. ಅವುಗಳ ಬಳಕೆಯಿಂದ ಭವರೋಗ ಬರುವುದು. ಆದ್ದರಿಂದ ಅವಶ್ಯಕತೆಗಿಂತ ಹೆಚ್ಚಿನ ವಸ್ತುಗಳನ್ನು ವಿಷ ವಸ್ತುವಾಗಿಸದೇ ದಾಸೋಹ ರೂಪದಲ್ಲಿ ಸಮಾಜಕ್ಕೆ ಅರ್ಪಿಸುವುದೇ ಭವ ರೋಗದಿಂದ ಮುಕ್ತವಾಗುವ ಕ್ರಮ. ಆ ದಿಸೆಯಲ್ಲಿ ಪ್ರತಿಯೊಬ್ಬರೂ ಚಾಚೂ ತಪ್ಪದೆ ಪಾಲಿಸಿಕೊಂಡು ಬರುವುದು ಶ್ರೇಷ್ಠ ಸನ್ಮಾರ್ಗ ಎಂಬುದು ನಾವೆಲ್ಲರೂ ನೆನಪಿಡಬೇಕಾದದ್ದು ಅತಿ ಮುಖ್ಯ.

ಸೋಹಂ ಎಂದೆನಿಸದೇ ದಾಸೋಹಂ ಎಂದೆನಿಸಯ್ಯಾ ಎಂಬ ಬಸವ ವಾಣಿಯಂತೆ ನಾವೆಲ್ಲರೂ ಹೆಜ್ಜೆ ಹಾಕುವುದು ಸೂಕ್ತ. ಕೇವಲ ತೋರಿಕೆಗಾಗಿ ದಾಸೋಹ ಸೇವೆ ಮಾಡದೇ ಅಂತರಂಗದ ಆತ್ಮಶಾಂತಿಗಾಗಿ ದಾಸೋಹ ಮಾಡುವ ಮೂಲಕ ಹಸಿದವರ ಹಸಿವನ್ನು ನೀಗಿಸುವ ಕೆಲಸವನ್ನು ನಿರಂತರವಾಗಿ ನಮ್ಮ ಜೀವಿತಾವಧಿಯಲ್ಲಿ ಮಾಡೋಣ. ಶರಣರು ಹಾಕಿಕೊಟ್ಟ ಮಾರ್ಗದಲ್ಲಿ ನಡೆಯುವ ಮೂಲಕ ಸರ್ವರ ಹಿತವನ್ನು ಬಯಸುವ ದಿಸೆಯಲ್ಲಿ ಕಾಯಕ ಮಾಡುತ್ತಾ ಕಾಯಕದಲ್ಲಿ ಬರುವ ಸ್ವಲ್ಪ ಹಣದಲ್ಲಿ ದಾಸೋಹ ಮಾಡೋಣ.

ಜಿಲ್ಲಾಧ್ಯಕ್ಷರು, ಕರ್ನಾಟಕ ಚುಟುಕು ಸಾಹಿತ್ಯ ಪರಿಷತ್ತು, ಕೂಡಂಬಲ, ಬೀದರ ಜಿಲ್ಲೆ

## ಶರಣರ ದಾಸೋಹ ಕಲ್ಪನೆ

ವ್ಯಕ್ತಿ ಮತ್ತು ಸಮಾಜಕ್ಕೆ ಕಾಯಕದ ಮೂಲಕ ದಾಸೋಹಕ್ಕೆ ಬೆಸುಗೆ ಹಾಕಿದವರು ಶರಣರು. ಇಂದು ಉದ್ಯೋಗ ಅಥವಾ ವರ್ಕ್ ಎನ್ನುವುದಕ್ಕೆ ಪರ್ಯಾಯವಾಗಿ ಬಳಸಲಾಗುವ ಕಾಯಕ ಎಂಬ ಶಬ್ದಕ್ಕೆ ವಿಭಿನ್ನ ಆಯಾಮಗಳಿವೆ; ವಿಭಿನ್ನ ಅರ್ಥ ಪರಂಪರೆಗಳಿವೆ. ಉದ್ಯೋಗಕ್ಕೂ ಮತ್ತು ಶರಣರು ಬಳಸಿದ ಕಾಯಕಕ್ಕೂ ಅಗಾಧವಾದ ಅಂತರವಿದೆ. ಉದರ ಪೋಷಣೆಗಾಗಿ, ತನ್ನ ಸಂಸಾರಕ್ಕಾಗಿ ದುಡಿಯುವುದು ಉದ್ಯೋಗವಾದರೆ, ತನ್ನ ಹಿತಾಸಕ್ತಿಯ ಜೊತೆಗೆ ಸಮಷ್ಟಿಯ ಹಿತವನ್ನು ಬಯಸುವ ದಾಸೋಹ ಮನೋಭಾವದಿಂದ ದುಡಿಯುವುದು, ಆತ್ಮೋದ್ಧಾರದ ಜೊತೆಗೆ ಸಮಾಜೋದ್ಧಾರವನ್ನು ಸಾಧಿಸುವ ಉದ್ಯೋಗವೇ ಕಾಯಕ. ಸಾಮಾಜಿಕ, ಧಾರ್ಮಿಕ ಹಾಗು ಆರ್ಥಿಕ ವಲಯಗಳನ್ನು ಒಂದು ಕಟ್ಟಿನಲ್ಲಿ ಸುಭದ್ರವಾಗಿ ಕಟ್ಟಬಲ್ಲ ತತ್ತ್ವ ಇದು. ಸತ್ಯ ಶುದ್ಧ ಹಾದಿಯಲ್ಲಿ ದುಡಿಯುವುದರಿಂದ ಆರಂಭವಾಗಿ ದಾಸೋಹವ ಮಾಡುವಲ್ಲಿ ಕಾಯಕದ ಅರ್ಥ ಪೂರ್ಣವಾಗುವುದು. ದಾಸೋಹದಲ್ಲಿ ಕೊಡುವವನ ಕೈ ಮೇಲಾಗಿರುವುದಿಲ್ಲ; ಪಡೆಯುವವನ ಕೈ ಕೀಳಾಗಿರುವುದಿಲ್ಲ. ಅದೊಂದು ಸಾಮಾಜಿಕ ಜವಾಬ್ದಾರಿಯ ಕಾರ್ಯ. ಹೀಗೆ 'ಕಾಯಕ' ಪದಕ್ಕೆ ಪರ್ಯಾಯವೇ ಇಲ್ಲವೆನ್ನಿಸುವಷ್ಟು ಅದರ ಅರ್ಥ ವಿಶಾಲವಾಗಿದೆ. ಅಂದಂದಿನ ಕಾಯಕ ಅಂದಂದು ಮಾಡಿ ಶುದ್ಧವಾಗಿರಬೇಕು ಎಂದ ಶರಣರು ಅಂತೆಯೇ ನಿಶ್ಚಿಂತವಾಗಿ ಬದುಕಿ ತೋರಿದರು. ಮಾಡುವ ಕೆಲಸಕ್ಕೆ ಕರ್ಮವಾದವನ್ನು ಹಚ್ಚಿ ಶೋಷಣೆ ಮಾಡುತ್ತಿದ್ದವರಿಗೆ ಈ ನಡೆ ಅನಿರೀಕ್ಷಿತ ಆಘಾತ ತಂದಿತ್ತು. ಕಾಯಕದೊಂದಿಗೆ ಅಸಂಗ್ರಹ ಗುಣವನ್ನೂ, ದಾಸೋಹ ಭಾವವನ್ನೂ ಜೊತೆ ಮಾಡಿದ ಬಗೆ ಅಸಾಧಾರಣ ಬದಲಾವಣೆಗೆ ನಾಂದಿ ಹಾಡಿತು. ಕಾಯಕದಲ್ಲಿ ಸತ್ಯ ಶುದ್ಧ ಮನಸ್ಸಿನ ಜೊತೆಯಿದೆ, ಪ್ರಾಮಾಣಿಕತೆ ಮೇಳೈಸಿದೆ, ಸಂಗ್ರಹ ಮನೋಭಾವದ ವಾಸನೆಯಿಲ್ಲ. ಚಿತ್ತ ಚಾಂಚಲ್ಯಕ್ಕೆ ಜಾಗವಿಲ್ಲ. ಇಹ-ಪರಗಳ ಉನ್ನತಿಯನ್ನು ಸಾಧಿಸಬಲ್ಲ ಸಾಮರ್ಥ್ಯವಿದೆ ಮತ್ತು ಶರಣರ ಪ್ರಮುಖ ದಂಡನಾಯಕ ಬಸವಣ್ಣನವರು ಖ್ಯಾತ ಅರ್ಥಶಾಸ್ತ್ರಜ್ಞರಾಗಿ ಸಮಾಜವಾದಿ ಚಿಂತಕರಾಗಿ ಮಾಡಿರುವ ದಾಸೋಹ ಸೇವೆ ಅಪಾರ. ಹಾಗಾಗಿ ಅವರ ದಾಸೋಹ ವಿಚಾರದಲ್ಲಿ ಸಮಗ್ರ ಸಮಾಜದ ದೃಷ್ಟಿಕೋನವಿರುತ್ತಿತ್ತು. ಕಲ್ಯಾಣವು ಸಮೃದ್ಧಿಯ ಬೀಡಾಗಲು ಕಾರಣವಾದದ್ದು ದಾಸೋಹ ಮಾಡುವ ಕಾಯಕ ಜೀವಿಗಳೇ. ಕಾಯಕದ ತುಡಿತ ಸ್ವಾವಲಂಬಿ ಸಮಾಜ ನಿರ್ಮಾಣ. ಹೊಟ್ಟೆಪಾಡಿಗಾಗಿ ಅಥವಾ ಕುಟುಂಬದ ಪೋಷಣೆಗಾಗಿ ಕೈಗೊಳ್ಳುವ ದುಡಿಮೆ ಕಾಯಕವಾಗಲಾರದು. ಅದೇ ರೀತಿ ಕೀರ್ತಿ-ಪ್ರತಿಷ್ಠೆಗಳಿಗಾಗಿ ಮಾಡುವ ಜನಕಲ್ಯಾಣದ ದಾಸೋಹ ಕಾರ್ಯವೂ ಕಾಯಕ-ದಾಸೋಹವಾಗಲಾರದು. 'ಎನ್ನೊಡಲ ಅವಸರಕ್ಕೆ ಕುದಿದೆನಾದಡೆ ತಲೆದಂಡ' ಎನ್ನುತ್ತಾರೆ ಬಸವಣ್ಣನವರು. ಹೀಗೆ ನಮ್ಮ ಹಿತದೊಂದಿಗೆ ಸಮಷ್ಟಿಯ ಹಿತವನ್ನೂ ಕಾಯುವ ಶಕ್ತಿ ಕಾಯಕ-ದಾಸೋಹದ್ದು. ಸತ್ಯ ಶುದ್ಧದಿಂದ ಗಳಿಸಿದ ಆದಾಯದಲ್ಲಿ ಒಂದು ಪಾಲು ದಾಸೋಹ ರೂಪದಲ್ಲಿ ಸಮಾಜಕ್ಕೂ ಇನ್ನೊಂದು ಪಾಲು ತೆರಿಗೆಯ ರೂಪದಲ್ಲಿ ರಾಜ್ಯಕ್ಕೂ ಸಂದಾಯವಾಗಬೇಕೆಂಬ ನಿಯಮ ಶರಣರದು. ಇದು ಸಮಷ್ಟಿಯ ಏಳ್ಗೆಯಲ್ಲಿ ತನ್ನ ಅಭಿವೃದ್ಧಿಯನ್ನೂ, ಸಮಷ್ಟಿಯ ಹಿತದಲ್ಲಿ ತನ್ನ ಹಿತವನ್ನೂ ಕಾಣುವ ಶರಣರ ಕಾಯಕ ದಾಸೋಹದ ನಡೆ ಎನ್ನಬಹುದು. ಆದ್ದರಿಂದ ತನು ಮನ ಬಳಲಿಸಿ ತಂದು ದಾಸೋಹವ ಮಾಡುವ ಸದ್ಭಕ್ತನ ತೋರಯ್ಯ ಎನ್ನುತ್ತಾರೆ ಬಸವಣ್ಣನವರು. ಹೀಗೆ ದಾಸೋಹ ತತ್ತ್ವವು ಶರಣರು ಜಗತ್ತಿಗೆ ನೀಡಿದ ಶ್ರೇಷ್ಠ ಬಹುದೊಡ್ಡ ಕೊಡುಗೆ.

೧೨ನೆಯ ಶತಮಾನದಲ್ಲಿ ತಾಂಡವವಾಡುತ್ತಿದ್ದ ಸಾಮಾಜಿಕ ಅಸಮಾನತೆ, ಮೌಢ್ಯ, ಕಂದಾಚಾರಗಳನ್ನು ಕಿತ್ತೊಗೆಯುವ ನಿಟ್ಟಿನಲ್ಲಿ ಬಸವಣ್ಣನವರು ಸೇರಿದಂತೆ ಸಕಲ ಶರಣರು ಮಾಡಿದ ಕ್ರಾಂತಿ ಅದ್ಭುತ. ಪ್ರತಿಯೊಬ್ಬರು ತಾವು ದುಡಿದು ಇತರರಿಗೂ ನೀಡಬೇಕು ಎಂಬುದು ಎಲ್ಲಾ ಶಿವಶರಣರ ಕನಸಾಗಿತ್ತು. ಅದರಂತೆ ೧೨ನೆಯ ಶತಮಾನದಲ್ಲೇ ದಾಸೋಹದ ಪರಿಕಲ್ಪನೆಯ ಕುರಿತು ಜಾಗೃತಿ ಮೂಡಿಸಿ ನುಡಿದಂತೆ ನಡೆದರು. ಜೊತೆಗೆ ಸಾಮಾಜಿಕ ಅಸಮಾನತೆ, ಜಾತೀಯತೆ ಹೋಗಲಾಡಿಸಲು ಮುಂದಾದರು. ಬಸವಣ್ಣನವರು ಸ್ಥಾಪನೆ ಮಾಡಿದ ಅನುಭವಮಂಟಪದಲ್ಲಿ ಶೇ. ೯೦ ಮಂದಿ ಕೆಳವರ್ಗದ ಶರಣರೇ ಇದ್ದರು. ಲಿಂಗಭೇದ, ಅಸಮಾನತೆ, ಆಸ್ತಿಯ ಅಸಮಾನ ಹಂಚಿಕೆಯ ವಿರುದ್ಧವೇ ಅಂದು ಬಸವಣ್ಣನವರು ಧ್ವನಿ ಎತ್ತಿ ಹೋರಾಟ ಮಾಡಿದ ಕಾರಣದಿಂದಲೇ ಇಂದು ಕೆಲವರಿಗೆ ನ್ಯಾಯ ಸಿಗುತ್ತಿದೆ ಎನ್ನುವಂತದ್ದು ಸುಳ್ಳಲ್ಲ. ಸಕಲ ಜೀವಾತ್ಮರಿಗೂ ಲೇಸನೇ ಬಯಸಿದ್ದರು. ಅದರಂತೆ ನಡೆದು ತೋರಿಸಿದ್ದಾರೆ. ಮಾನವರೆಲ್ಲರೂ ಸಮಾನರು ಎಂದು ಜಾಗತಿಕ ಮಟ್ಟದಲ್ಲಿ ಸಾರಿದ್ದಾರೆ. ಹೀಗಾಗಿ ಅವರ ಆದರ್ಶ ನಿಲುವು ದಾಸೋಹ ತತ್ತ್ವಗಳು ಪಾಲನೆ ಮಾಡುವುದು ಇಂದಿನ ಸಮಾಜಕ್ಕೆ ಅಗತ್ಯವಾಗಿದೆ.

■■

# ನಾನು ಯಾರು? ಎಂಬ ಆಳ-ನಿರಾಳ

● ಡಾ. ಕೆ. ಆರ್. ಮಂಜುಳ

**ತನ್ನ ತಾನರಿಯದೆ ತನ್ನ ತಾ ನೋಡದೆ, ತನ್ನ ತಾ ನುಡಿಯದೆ ಅನ್ಯರ ಸುದ್ದಿಯ ನುಡಿದಾಡುವ ಕುನ್ನಿಗಳಿಗೆ ಗುರುವಿಲ್ಲ, ಲಿಂಗವಿಲ್ಲ, ಜಂಗಮವಿಲ್ಲ, ಪಾದೋದಕವಿಲ್ಲ, ಪ್ರಸಾದವಿಲ್ಲ ಅವನು ಸರ್ವಾಪರಾಧಿ, ಅವನ ಮುಖವ ನೋಡಲಾಗದು, ಬಸವಪ್ರಿಯ ಕೂಡಲಚೆನ್ನಬಸವಣ್ಣಾ.**

(ಹಡಪದ ಅಪ್ಪಣ್ಣ)

ಚಿಕ್ಕಂದಿನ ಒಂದು ನೆನಪು. ಬಾಗಲಕೋಟೆಯಲ್ಲಿ ಅಜ್ಜಿಯ ಮನೆಯ ಹತ್ತಿರವೇ ಭಜನಾ ಮಂದಿರ. ವಾರಕ್ಕೆರಡು ದಿವಸ ಸುತ್ತಣ ಹಳ್ಳಿಯವರೆಲ್ಲಾ ಸೇರಿ ರಾಗವಾಗಿ ಭಜನೆಗಳನ್ನು ಹಾಡುತ್ತಿದ್ದರು. 'ನೀನಾರು ನೀನಾರು ನಿನ್ನಲ್ಲಿ ಹುಡುಕು' ಅನ್ನೋ ತತ್ತ್ವಪದ ಹೊರಗೆ ಆಡುತ್ತಿದ್ದ ನಮ್ಮ ಕಿವಿಗೆ ಆಗಾಗ ಬೀಳುತ್ತಿತ್ತು. ಜನಪದ ಶೈಲಿಯಲ್ಲಿದ್ದ ಆ ಹಾಡು ನಮ್ಮ ನಾಲಿಗೆಯನ್ನು ಸೇರಿ ಕಣ್ಣಮುಚ್ಚಾಲೆ ಆಟದಲ್ಲಿ 'ನಾನೆಲ್ಲಿ ನಾನೆಲ್ಲಿ ನನ್ನನ್ನು ಹುಡುಕು...' ಎಂದು ಬದಲಾಗುತ್ತಿತ್ತು. ಅದರ ಆಳ ತಿಳಿಯದಾ ವಯಸ್ಸು. ಮುಂದೆ ಕಾಲೇಜಿನ ದಿನಗಳಲ್ಲಿ ಅಪ್ಪಾಜಿಯ ಪ್ರವಚನದಲ್ಲಿ 'ನಾನು ಯಾರು?' ಅನ್ನೋ ವಿಷಯ ಬಂದಾಗ ಮೈಯೆಲ್ಲಾ ಕಿವಿಯಾಗಿ ಕೇಳಿದ್ದೆ. ಆಸಕ್ತಿ ಹುಟ್ಟಿಸುವಂತಿದ್ದ ಆ ಪ್ರಶ್ನೆಯನ್ನು ಎಳೆಎಳೆಯಾಗಿ ಬಿಚ್ಚುತ್ತಾ ನಾನೆಂದರೆ 'ಆತ್ಮ' ಎಂದು ಮುಕ್ತಾಯ ಮಾಡಿದಾಗ ಏನೂ ತಿಳಿಯದೇ ಸುಮ್ಮನಾಗಿದ್ದೆ. ಕುತೂಹಲ ಹುಟ್ಟಿಸಿದ್ದ ಪ್ರಶ್ನೆ ಗೊತ್ತಿಲ್ಲದ 'ಆತ್ಮ' ಎನ್ನುವ ಕಾಲ್ಪನಿಕತೆಗೆ ಸಿಕ್ಕಿಕೊಂಡಾಗ ನಿರಾಶೆಯಾಗಿತ್ತು. ನಂತರ ಬೆಂಗಳೂರಿಗೆ ಬಂದಾಗ, ರಮಣ ಮಹರ್ಷಿಗಳ ಧ್ಯಾನಮಂದಿರ ಮುಂದೆ ಹಾದು ಹೋಗುವಾಗಲೆಲ್ಲಾ ಹೊರಗೆ ನೇತು ಹಾಕಿದ್ದ 'ನಾನು ಯಾರು?' ಎನ್ನುವ ಫಲಕ ಕಣ್ಣಿಗೆ ಬೀಳುತ್ತಿತ್ತು. ವಾಹನದಲ್ಲಿ ಹೋಗುವಾಗ ಹಾಗೆ ಕಂಡು ಹೀಗೆ ಸರಿದು ಹೋಗುತ್ತಿದ್ದ ಈ ಪ್ರಶ್ನೆ ಮನಸ್ಸಿನಲ್ಲಿ ಜಾಗ ಪಡೆಯದೆ ಜಾರಿ ಹೋಗುತ್ತಿತ್ತು. ಹೀಗೆ ಜೀವನದ ವಿವಿಧ ಸಂದರ್ಭಗಳಲ್ಲಿ ಕಾಣಿಸಿಕೊಂಡ ಈ ಪ್ರಶ್ನೆ ನನ್ನ ಬದುಕಿನ ಸ್ವವಿಮರ್ಶೆಯಾಗಿ ನನಗೆ ಕೂಡಿ ಬಂದದ್ದು ತೀರಾ ಇತ್ತೀಚೆಗೆ.

ಅನಾದಿ ಕಾಲದಿಂದ ಮನುಷ್ಯನನ್ನು ಕಾಡಿರುವ ಪ್ರಶ್ನೆ ಇದು. ಪುರಾತನ ಗ್ರೀಕರು ಅಪೊಲೊದ ಡೆಲ್ಫಿಕ್ ದೇವಾಲಯದ ಹೊಸ್ತಿಲ ಮೇಲೆ 'ನಿನ್ನ ನೀನರಿ' ಎಂದು ಕೆತ್ತಿಸಿದ್ದರು. 'ಯಾಕೆ ಮನುಷ್ಯನಿಗೆ ತನ್ನ ನಿಜ ಜ್ಞಾನ ತಿಳಿದಿಲ್ಲ ಎನ್ನುವುದು ಆಶ್ಚರ್ಯಕರ' ಎನ್ನುತ್ತಾನೆ ಇಟಲಿಯ ಖ್ಯಾತ ತತ್ತ್ವಜ್ಞಾನಿ ಥಾಮಸ್ ಅಕ್ವೇನಸ್. 'ಪ್ರತಿಯೊಬ್ಬರೂ ತನ್ನ ತಾ ತಿಳಿಯಲೇ ಬೇಕು, ಯಾಕೆಂದರೆ ನನ್ನ ಪ್ರಕಾರ ಅದೇ ಜೀವನದ ನಿಯಮ' ಎನ್ನುತ್ತಾನೆ ಫ್ರಾನ್ಸಿನ ಗಣಿತಜ್ಞ ಬ್ಲೇಸ್ ಪಾಸ್ಕಲ್. ಭಾರತದಲ್ಲಿಯೂ ಮನುಷ್ಯನ ಬದುಕಿನ ಸಂಕೀರ್ಣತೆಯನ್ನು ಬಿಡಿಸಿಕೊಡಲು ಸಂತ ಪರಂಪರೆಗಳು 'ನಾನು ಯಾರು' ಎನ್ನುವ ಪ್ರಶ್ನೆಯ ಮೂಲಕ ಅವಿರತವಾಗಿ ಶ್ರಮಿಸಿವೆ. ಆ ಮೂಲಕ ಮನುಷ್ಯನಲ್ಲಿರಬೇಕಾದ ಸಹಜ ವಿಚಾರ ವಿಮರ್ಶೆಯನ್ನು ಜೀವಂತವಿರಿಸಲು ಪ್ರಯತ್ನಿಸಿವೆ. ಶರಣರಲ್ಲಂತೂ ಮನುಷ್ಯನ ಆಧ್ಯಾತ್ಮಿಕ ಸಾಧನೆಗೆ ಮೊದಲ ಹೆಜ್ಜೆಯಾಗಿ ನಾನು ಯಾರೆಂಬ ಪ್ರಶ್ನೆಯನ್ನು ಬಳಸಿಕೊಳ್ಳಲಾಗಿದೆ. ತತ್ತ್ವಪದಕಾರರು, ಅವಧೂತರು, ಸೂಫಿಗಳು ಎಲ್ಲರೂ ಹೇಳುವುದು ಒಂದೇ ತನ್ನ ತಾನರಿ ಎಂದು. 'ಎಲ್ಲ ಎಲ್ಲವನರಿದು ಫಲವೇನಯ್ಯಾ, ತನ್ನ ತಾನರಿಯಬೇಕಲ್ಲದೆ?' ಎಂದು ಪ್ರಶ್ನಿಸುತ್ತಾಳೆ ಅಕ್ಕಮಹಾದೇವಿ. ಈ ಮೂಲಕ ನಮ್ಮ ಸಂತರು ಮನುಷ್ಯನಿಗೆ ಏನನ್ನು ದಕ್ಕಿಸಿ ಕೊಡಲು ಪ್ರಯತ್ನಿಸಿದ್ದಾರೆ ಎನ್ನುವ ಆಳಕ್ಕೆ ಇಳಿದು ನೋಡಿದಾಗ ಮಾತ್ರ 'ನಾನು ಯಾರು' ಎನ್ನುವ ಪ್ರಶ್ನೆಯ ಅತ್ಯಗತ್ಯತೆ ತಿಳಿಯತೊಡಗುತ್ತದೆ.

ಈ ಪ್ರಶ್ನೆ ಅತ್ಯಂತ ಪ್ರಾಚೀನವಾದದ್ದೇ ಆಗಿದ್ದರೂ ಇಂತಹ ಆಧುನಿಕ ಯುಗದಲ್ಲೂ ಜಿಡ್ಡು ಕೃಷ್ಣಮೂರ್ತಿಯವರು ಈ ಪ್ರಶ್ನೆಯ ಪ್ರಾಮುಖ್ಯತೆಯನ್ನು ಹೇಳಿ ಹೋಗಿದ್ದಾರೆ. 'ತನ್ನನ್ನು ತಾನು ವಸ್ತುನಿಷ್ಠವಾಗಿ ಅವಲೋಕನ ಮಾಡಿಕೊಳ್ಳುವುದು ಎಂದರೆ ಆತ್ಮ ತತ್ತ್ವವನ್ನು ಒಪ್ಪಿಕೊಳ್ಳುವಂತಹುದಲ್ಲ. ಏಕಾಂತವಲ್ಲ ಅಥವಾ ಅಖಂಡ ಮಾನವಕುಲದ ಜೊತೆಗಿನ ಸಂಬಂಧವನ್ನು ಕಳೆದುಕೊಳ್ಳುವಂತಹದ್ದೂ ಅಲ್ಲ. ಬದಲಾಗಿ ತಾನು ಎಷ್ಟರ ಮಟ್ಟಿಗೆ ಆರ್ಥಿಕ ಒತ್ತಡಗಳಿಂದ, ಸಂಸ್ಕೃತಿಗಳ ಪ್ರಭಾವದಿಂದ, ವಾತಾವರಣ, ಆಹಾರ ಪದ್ಧತಿ ಅಥವಾ ಧಾರ್ಮಿಕ ಸಂಘಟನೆಗಳ ಪ್ರಚಾರದಿಂದ ಅನುಬಂಧಿತನಾಗಿದ್ದೇನೆ

ಎಂಬುದನ್ನು ಮನಗಾಣಬಹುದು. ಈಗ ಉದ್ಭವಿಸುವ ಪ್ರಶ್ನೆಯೆಂದರೆ, ಇಂತಹ ಅನುಬಂಧದಿಂದ ಬಿಡುಗಡೆ ಸಾಧ್ಯವೆ? ಬಿಡುಗಡೆಗೊಳ್ಳದಿದ್ದರೆ ವ್ಯಕ್ತಿ ಗುಲಾಮನಾಗುತ್ತಾನೆ ಮತ್ತು ಅದೇ ಹೇರಲ್ಪಟ್ಟಿರುವ ಬದುಕಿನ ವಿಧಾನವೇ ಸತ್ಯವೆಂದು ಭಾವಿಸಿಬಿಡುತ್ತಾನೆ' ಎನ್ನುತ್ತಾರೆ.

ಸಾರ್ವಕಾಲಿಕ ಪ್ರಶ್ನೆಯಾಗಿ 'ತನ್ನ ತಾ ತಿಳಿ' ಎಂಬುದು ಯಾಕೆ ಮುಖ್ಯವಾದದ್ದು? ಅಂದರೆ ಸಚರಾಚರ ಜೀವಿಗಳಿಗೆಲ್ಲಾ ಮನುಷ್ಯನೇ ಅತ್ಯಂತ ಬುದ್ಧಿವಂತ ಎಂಬುದು ನಿಜವೇ ಆಗಿದ್ದ ಪಕ್ಷದಲ್ಲಿ 'ನಾನು' ಎನ್ನುವುದು ಇಂತಹ ಮನೋಧೋರಣೆಯಿಂದ ಈ ಜಗತ್ತಿನೊಂದಿಗೆ ವ್ಯವಹರಿಸುತ್ತಿದೆ? ಇದನ್ನು ಸರಿಯಾಗಿ ಅರಿತುಕೊಳ್ಳುವುದು ಮುಖ್ಯ. ಆಗ ಮಾತ್ರ ಮನುಷ್ಯನ ಅಂತಃಪ್ರಜ್ಞೆಯಲ್ಲಿ ತನಗಿರುವ ಮಹತ್ವಪೂರ್ಣ ಜವಾಬ್ದಾರಿಗಳು ಉದಯಿಸಲು ಪ್ರಾರಂಭವಾಗುತ್ತವೆ.

ನಾವು ಈ ಜಗತ್ತಿನೊಂದಿಗೆ ವ್ಯವಹರಿಸುವಾಗ ಮೂರು ಮುಖ್ಯ ಸಂಬಂಧಗಳನ್ನು ಗಮನಿಸಲು ಹೋಗುವುದೇ ಇಲ್ಲ. ಮೊದಲನೆಯದು 'ನಾನು', ಎರಡನೆಯದು 'ನನ್ನನ್ನೂ ಒಳಗೊಂಡಂತೆ ಇರುವ ನನ್ನ ಸುತ್ತಲಿನ ಸಮಾಜ' ಹಾಗು ಮೂರನೆಯದು 'ಇವೆರಡಕ್ಕೂ ಅವಕಾಶ ಒದಗಿಸುತ್ತಾ ತಾಯಿಯಂತೆ ನಮ್ಮನ್ನು ಪೋಷಿಸುತ್ತಿರುವ ಅನಂತ ನಿಸರ್ಗ'. ನಾನು ಎಂಬುದಕ್ಕಿಂತಲೂ ಹೆಚ್ಚು ಕಾಲ ಬಾಳುವಂತಹದ್ದು ನನ್ನ ಸಮಾಜ. ಇಂತಹ ಅದೆಷ್ಟೋ ಸಮಾಜಗಳನ್ನು ತನ್ನ ಒಡಲಿನಲ್ಲಿ ಇಟ್ಟುಕೊಂಡು ಪೋಷಿಸುತ್ತಿರುವುದು ಈ ಅನಂತರ ಪ್ರಕೃತಿ! ಎಲ್ಲಿಯವರೆಗೆ ಮನುಷ್ಯ 'ನಾನು' ಎಂಬ ಸ್ವಹಿತದ ಕೇಂದ್ರಕ್ಕೆ ಜೋತುಬಿದ್ದು, ಸಮಾಜ ಮತ್ತು ನಿಸರ್ಗದ ಸವಲತ್ತುಗಳನ್ನು ಅನುಭವಿಸುವ ಪ್ರವೃತ್ತಿಗಷ್ಟೇ ದುರುಪಯೋಗಪಡಿಸಿಕೊಳ್ಳುತ್ತಲೇ ಇರುತ್ತಾನೋ ಅಲ್ಲಿಯವರೆಗೆ ತನ್ನ ಸುತ್ತಲಿನ ಎಲ್ಲವನ್ನೂ ಕಠೋರವಾಗಿ ಭ್ರಷ್ಟಗೊಳಿಸುತ್ತಲೇ ಇರುತ್ತಾನೆ. ಇಂಥ use and throw ಸ್ವಭಾವ ಅವನಲ್ಲಿ ಸಹಜವಾಗಿ ಅಸ್ತಿತ್ವ ಪಡೆದುಕೊಳ್ಳುತ್ತದೆ. ಅಂತಹವನನ್ನು 'ನಾಗರಿಕ' ಎಂದು ಕರೆದುಕೊಳ್ಳುವುದು ತೀರಾ ನಾಟಕೀಯವಾಗುತ್ತದಲ್ಲವೇ? ಈ ಅಸಂಬದ್ಧತೆಯನ್ನು ಶರಣರು 'ನಾನೆಂಬ ಅಹಂಕಾರ' ಎಂದು ಗುರುತಿಸಿಕೊಳ್ಳುತ್ತಾರೆ. ಅಹಂಕಾರವು ಸುತ್ತಲಿನ ಸಮಾಜದ ಸಂಕ್ಲೇಶಗಳಿಂದ ಪ್ರಭಾವಿತವಾಗಿದ್ದು, ಮನುಷ್ಯನ ಮನಸ್ಸನ್ನು ಆಕ್ರಮಿಸಿಬಿಡುತ್ತದೆ. ಮತ್ತದೇ ವ್ಯಕ್ತಿಯಿಂದ ಸುತ್ತಲಿನ ಸಮಾಜಕ್ಕೆ ಅದರ ಸೋಂಕು ಹರಡುತ್ತಿರುತ್ತದೆ.

**ನಾನೆಂಬ ಅಹಂಕಾರ ತಲೆದೋರಿದಲ್ಲಿ**
**ಅಟಮಟ ಕುಟಿಲ ಕುಹಕವೆಂಬ ಬಿರುಗಾಳಿ ಹುಟ್ಟಿತ್ತು**
**ಆ ಬಿರುಗಾಳಿ ಹುಟ್ಟಲೊಡನೆ ಜ್ಞಾನಜ್ಯೋತಿ ಕೆಟ್ಟಿತ್ತು**
**ಜ್ಞಾನಜ್ಯೋತಿ ಕೆಡಲೊಡನೆ**
**ನಾಬಲ್ಲೆ, ಬಲ್ಲಿದರೆಂಬ ಅರು ಹಿರಿಯರೆಲ್ಲರೂ**
**ತಾಮಸಕ್ಕೊಳಗಾಗಿ ಸೀಮೆ ಕೆಟ್ಟರು ಕಾಣಾ ಗುಹೇಶ್ವರಾ.**

ಸಂಕ್ಲೇಶಗಳಿಂದ ಪರಿತಪಿಸುವ ಮನಸ್ಸು ಮತ್ತು ಅವನ ಸಮಾಜ ನಿರಂತರವಾಗಿ ಅನುಮಾನ, ದ್ವಂದ್ವ, ಭಯ, ಅಭದ್ರತೆ, ಅಸಹಾಯಕತೆ, ದುಃಖ, ಸಂಕಟ, ದುರಭಿಮಾನ, ದುರಾಚಾರಗಳಿಂದ ಸದಾ ಕ್ಷೋಭೆಗೊಳಗಾಗಿರುತ್ತವೆ. ಇದನ್ನೇ ಈ ವಚನದಲ್ಲಿ 'ಬಿರುಗಾಳಿ' ಎಂದಿರುವುದು. ಈ ಬಿರುಗಾಳಿ ಮನುಷ್ಯನಲ್ಲಿರುವ ಮಹತ್ವಪೂರ್ಣ ಅಂತಃಪ್ರಜ್ಞೆಯನ್ನೇ ಕೊಂದುಹಾಕಿರುತ್ತದೆ. ಆದ್ದರಿಂದ 'ನಾನೆಂಬ' ಮೆಳ್ಳೆಗಣ್ಣಿನಿಂದಲೇ ನಮ್ಮ ಸುತ್ತಲಿನ ಆಗು ಹೋಗುಗಳನ್ನು ಗ್ರಹಿಸುವ ಪರಿಪಾಠಕ್ಕೆ ನಮ್ಮ ಮನಸ್ಸು ಸಿಕ್ಕಿಕೊಂಡಿರುತ್ತದೆ. ಇದು ತನ್ನ ಕ್ಷೇಮವೇ ಅಂತಿಮ ಎನ್ನುವ ಸ್ಥಿತಿಗೆ ಮನುಷ್ಯನನ್ನು ದೂಡಿರುತ್ತದೆ. ಇಂತಹ ರೋಗಗ್ರಸ್ತ ಮನಸ್ಸುಗಳಿಂದ ಉತ್ತಮ ಸಮಾಜದ ನಿರ್ಮಾಣವಾಗಲಿ, ಉತ್ತಮ ವ್ಯಕ್ತಿಯನ್ನು ರೂಪಿಸುವುದಾಗಲಿ ಅಸಾಧ್ಯದ ಮಾತು. ಉತ್ತಮ ವ್ಯಕ್ತಿಯನ್ನು ನಿರ್ಮಿಸುವುದೇ ಉತ್ತಮ ಸಮಾಜದ ನಿರ್ಮಾಣಕ್ಕಿರುವ ಅಸ್ತಿಭಾರ. ಆದ್ದರಿಂದ ಮನುಷ್ಯನಲ್ಲಿ ತುಂಬಿ ಹೋಗಿರುವ ಅವನ ಪೂರ್ವಾಶ್ರಯಗಳನ್ನು ತೊಳೆಯದೇ ಬೇರೆ ಗತ್ಯಂತರವಿಲ್ಲ.

**ಒಳಗೆ ತೊಳೆಯಲರಿಯದೇ ಹೊರಗೆ ತೊಳೆದು**
**ಕುಡಿವುತಿರ್ದರಯ್ಯಾ**
**ಪಾದೋದಕ ಪ್ರಸಾದವನರಿಯದೆ**
**ಬಂದ ಬಟ್ಟೆಯಲ್ಲಿ ಮುಳುಗುತ್ತೈದಾರೆ**

ಒಳಗಿನ ಕೊಳೆಯನ್ನು ಶುದ್ಧೀಕರಿಸಿಕೊಳ್ಳುವ ಆಚಾರವೇ ನಮ್ಮ ಸಂತರಲ್ಲಿ 'ನಿನ್ನ ನೀನು ತಿಳಿ' ಎಂಬುದಕ್ಕಿರುವ ಮಹತ್ವ. 'ನಿನ್ನ ನೀನು ತಿಳಿ' ಎಂಬ ಕ್ರಿಯಾಚಾರವು 'ನಾನು ಯಾರು?' ಎಂಬ ಸ್ವ-ವಿಮರ್ಶೆಯಿಂದ ಪ್ರಾರಂಭವಾಗಿರುವುದನ್ನು ಅವರನ್ನು ಅಧ್ಯಯನ ಮಾಡುವುದರಿಂದ ಸರಿಯಾಗಿ ತಿಳಿದುಕೊಳ್ಳಬಹುದು. ಸಮಾಜ ಮತ್ತು ನಿಸರ್ಗವೇ ಅತ್ಯಮೂಲ್ಯವಾದದ್ದು ಎನ್ನುವ ವಿವೇಕದಿಂದ ಬಾಳಿ, ಮಾನವೀಯ ಅನುಕಂಪೆಗೆ ಶರಣಾದ ನಡೆ ಸಾರ್ವಕಾಲಿಕ. ಈ ನೆಲೆಯಿಂದ ಶರಣರ ಬದುಕನ್ನು ಮುಕ್ತವಾಗಿ ನೋಡಲು ಅನುವಾದಾಗ ಮಾತ್ರ ನಾನು-ನನ್ನ ಸಮಾಜ-ನಿಸರ್ಗ, ಈ ಮೂರರಲ್ಲಿ ವ್ಯಾಪಿಸಿರುವ ತಾಯ್ಗರುಳ ಸಂಬಂಧದಲ್ಲಿ ಶರಣರು ಜೀವಿಸಿದ್ದು ಗೊತ್ತಾಗುತ್ತದೆ. ಆ ಮೂಲಕ ಅವರು

ಪಡೆದ ಅತ್ಯಮೂಲ್ಯವಾದ ಆಳ–ನಿರಾಳ–ಅನುಭಾವ–ಬದುಕಿನ ರೋಮಾಂಚನ ನಮ್ಮನ್ನು ಬೆರಗಾಗಿಸಿಬಿಡುತ್ತದೆ. ಅವರು ನಡೆದು ಪಡೆದ ಸ್ವಾಸ್ಥ್ಯ ಮನಸ್ಸು, ಮಾನವ ಕುಲಕ್ಕೆ ಎಂದೆಂದಿಗೂ ಅನಿವಾರ್ಯವೇ ಆಗಿದೆ. ಪ್ರತಿ ಕ್ಷಣ ನಾವು ಅನುಭವಿಸುತ್ತಿರುವ ಸಂಕೀರ್ಣ ಬದುಕಿಗೆ, 'ನಾನು ಯಾರು'? ಎನ್ನುವ ಪ್ರಶ್ನೆ ಬೇಸಿಗೆಯ ತಾಪಕ್ಕೆ ಇಟ್ಟಿರುವ ಅರವಟ್ಟಿಗೆ ಎಂಬುದನ್ನು ನೆನಪಿಟ್ಟುಕೊಳ್ಳಲೇಬೇಕು.

ಪ್ರಸ್ತುತವಾಗಿ 'ನಾನು ಯಾರು'? ಎಂಬ ಪ್ರಶ್ನೆಯ ಮೂಲಕ ನಾವೇ ಹೊತ್ತುಕೊಂಡಿರುವ ಭ್ರಮೆಯ ಭಾರಗಳನ್ನು, ಕೊನೆಗೊಳ್ಳದಾ ಆಸೆಗಳನ್ನು, ವೈಚಾರಿಕ ಹಾದರಗಳನ್ನು ನಮ್ಮೊಳಗೆ ನಾವು ಸ್ಪಷ್ಟವಾಗಿ ಓದಿಕೊಳ್ಳಬಹುದು. ಅಹಂಕಾರಿಕೆಯನ್ನು ನಿಯಂತ್ರಿಸಿ ಮನುಷ್ಯ ಸಂಬಂಧಗಳನ್ನು ಪರಿಪೂರ್ಣತೆಯೆಡೆಗೆ ಕೊಂಡೊಯ್ಯುವುದರ ಮೂಲಕ ಪ್ರತಿಯೊಬ್ಬ ವ್ಯಕ್ತಿಯನ್ನು ಸುಶಿಕ್ಷಿತನನ್ನಾಗಿಸುವುದು ಈ ಆಚಾರದ ಗುರಿಯಾಗಿದೆ. ಆಧುನಿಕ ಶಿಕ್ಷಣಗಳು ನಾವು ಜೀವಿಸಿರುವ ವಸ್ತುಸ್ಥಿತಿಯ ಮಹತ್ವವನ್ನು ಎಂದೂ ನಮಗೆ ಹೇಳಿಕೊಡಲಿಲ್ಲ. ಅವು ಕೇವಲ ನಮಗೆ ಸುಖಿಸುವ ಭ್ರಮೆಯನ್ನಷ್ಟೇ ಕಲಿಸಿಕೊಟ್ಟಿವೆ. ನಮ್ಮೊಳಗೆ ಅಹಂಕಾರಿಕೆಗೆ ಆಶ್ರಯವನ್ನು ನೀಡಿ ಪೋಷಿಸುತ್ತಿರುವ ದುರ್ಬಲ ಭಾವನೆಗಳು, ಅಸಂಬದ್ಧ ನಂಬುಗೆಗೆಳು, ಅನುಚಿತ ಅಸ್ತಿತ್ವದ ಪರಿಕಲ್ಪನೆಗಳಿಂದಾದ ಭ್ರಷ್ಟ ಪರಿಣಾಮಗಳಿಂದ ಹೊರಬರುವುದನ್ನು ನಮ್ಮ ಶಿಕ್ಷಣ ನಮಗೆ ತಿಳಿಸಲಿಲ್ಲ. ಇದನ್ನು ಅರಿಯಬೇಕಾದರೆ ಸಂತ ಪರಂಪರೆಗಳು ನಡೆದಾಡಿದ ಈ ಮಣ್ಣಿನ ದಾರಿಯನ್ನೇ ತುಳಿಯಬೇಕಿದೆ. ನಮಗೇ ತಿಳಿಯದಂತೆ ನಮ್ಮನ್ನು ನಮ್ಮಿಂದಲೇ ನಿರ್ಬಂಧಿಸಿಕೊಂಡಿದ್ದೇವೆ. ಈ ಅವಿವೇಕದ ವಿವಶತೆಗಳಿಂದ ಹೊರಬರಲು ಇದೊಂದು ದಾರಿದೀವಿಗೆ. ಈ ಬಗೆಯ ವಿಚಾರ ವಿಮರ್ಶೆಯು ನಮ್ಮ ಸ್ವಭಾವದ ಆಳದಲ್ಲಿ ಬೇರುಬಿಟ್ಟುಕೊಂಡಿರುವ ಅನುಕರಣಾ ವ್ಯಾಧಿಗಳಿಂದ, ಅನಾವಶ್ಯಕ ಅಭಿಪ್ರಾಯಗಳಿಂದ ಮತ್ತು ಉಪಯೋಗಕ್ಕೆ ಬಾರದ ದುಗುಡಗಳಿಂದ ನಮ್ಮನ್ನು ಬಿಡುಗಡೆಗೊಳಿಸಬಲ್ಲದು. ಆಮೂಲಕ ಸ್ವಾನುಭಾವದ ಕಿಡಿಯನ್ನು ನಮ್ಮಲ್ಲಿ ಉದ್ದೀಪಿಸಬಲ್ಲದು.

ಈಗ ನಮ್ಮ ಮೂಲಭೂತ ಪ್ರಶ್ನೆಗೆ ಬರೋಣ...! ಹಾಗಾದರೆ 'ನಾನು ಯಾರು?' ಈ ಪ್ರಶ್ನೆ ಎರಡು ರೀತಿಯಲ್ಲಿ ನಮ್ಮನ್ನು ಗ್ರಹಿಸಿಕೊಳ್ಳಲು ಒತ್ತಾಯಿಸುತ್ತದೆ. ಬಹಿರಂಗ ಪ್ರಪಂಚದಲ್ಲಿ ನನ್ನ ಅಸ್ತಿತ್ವ ಹಾಗು ಅಂತರ್ಮುಖದಲ್ಲಿ ನನ್ನ ಅಸ್ತಿತ್ವದ ಇರುವಿಕೆಗೆ ನಾನು ಮಾಡುತ್ತಿರುವ ರಾಜಕೀಯ. ಈ ಬಹಿರ್–ಅಂತರ್ಗತ ರಾಜಕೀಯಗಳೇ ನಮ್ಮ ಸ್ವಭಾವವನ್ನು ರೂಪಿಸಿವೆ. ಯಾರಾದರೂ 'ನಾನು ಯಾರು?' ಪ್ರಶ್ನೆಯನ್ನು ಕೇಳಿದರೆ ನಾವು ಥಟ್ಟನೆ ಹೆಸರು, ಉದ್ಯೋಗ, ಓದಿನ ವಿವರ, ಊರು–ಕೇರಿ, ಜಾತಿ–ಧರ್ಮ, ಆಹಾರ–ವಿಹಾರ, ಹಣ ಮತ್ತು ಅಧಿಕಾರಗಳಿಂದಾದ ಸ್ಟೇಟಸ್, ಕೌಶಲ್ಯ, ರಾಜಕೀಯ ಸಾಮರ್ಥ್ಯ ಮತ್ತು ಕೀರ್ತಿಯ ಉತ್ತುಂಗತೆಗಳ ಮೂಲಕ ನಮ್ಮನ್ನು ಮಾತ್ರ ಗುರುತಿಸುವ ಸಾಮರ್ಥ್ಯವಿದೆ. ಇದರಾಚೆಗೆ ಅದು ನಮ್ಮನ್ನು ಗ್ರಹಿಸಲಾರದು. ಈ ರೀತಿ ಗುರುತಿಸಿಕೊಳ್ಳುವುದು ತಪ್ಪೆಂತಲೂ ಅಥವಾ ಸರಿಯೆಂತಲೂ ಸಮರ್ಥಿಸಿಕೊಳ್ಳುವುದು ಇಲ್ಲಿನ ಉದ್ದೇಶವಲ್ಲ. ಪಾಶ್ಚಾತ್ಯ ಸಂಸ್ಕೃತಿಗಳು ನಮ್ಮನ್ನು ನಾಗರಿಕತೆಯ ನೆಪದಲ್ಲಿ ಪ್ರಭಾವಿಸಿದಾಗ ನಿಸರ್ಗದ ಅನಂತ ಸಂಬಂಧಗಳಲ್ಲಿ ಜೀವಿಸುತ್ತಿರುವ ಜೀವಂತ ವ್ಯಕ್ತಿಯನ್ನು ಭೌತಿಕ ಮತ್ತು ಬೌದ್ಧಿಕ ಚಹರೆಗಳ ಮೂಲಕವಷ್ಟೇ ಗುರುತಿಸುವ ಪರಿಪಾಠ ನಮ್ಮಲ್ಲಿ ತೀವ್ರವಾಗಿ ಬೆಳೆಯಲಾರಂಭಿಸಿತು. ಆಗ ಆದ ಪ್ರತಿಕೂಲ ಪರಿಣಾಮಗಳು ಏನು ಗೊತ್ತೆ? ಪ್ರತಿನಿತ್ಯ ಸಂಭವಿಸುವ ಮನುಷ್ಯ ಸಂಬಂಧಿ ಸಂಗತಿಗಳ ಕಾರ್ಯ ಕಾರಣ–ಪರಿಣಾಮಗಳನ್ನು ಗ್ರಹಿಸಿಕೊಂಡು ಸ್ವಾಭಾವಿಕವಾದ ಅಂತಃಪ್ರಜ್ಞೆಯನ್ನು ತಲುಪಬೇಕಿದ್ದ ಬುದ್ಧಿಜೀವಿ ಮನುಷ್ಯ ಸಂಗ್ರಹಣೆಯ ಮಿತಿಮೀರಿದ ಪ್ರವೃತ್ತಿಗಿಳಿದ. ಇತರರಿಗಿಂತಲೂ ತನಗಿರುವ ವಿಶಿಷ್ಟವಾದ ಭೌತಿಕ/ಬೌದ್ಧಿಕ ಹೆಚ್ಚುಗಾರಿಕೆಯನ್ನು ಒಪ್ಪಿಕೊಳ್ಳುವಂತೆ ಸಮಾಜದ ಮೇಲೆ ತನ್ನ ಸಂಗ್ರಹಣೆಯ ಚಟವನ್ನು ಹೇರುವ ಅಭ್ಯಾಸ ಬೆಳೆಸಿಕೊಂಡ. ಇದರಿಂದ ಪ್ರಕೃತಿ ದತ್ತವಾಗಿ ಬಂದಿರುವ ಮಾನವ ಘನತೆಗಳ ಉಲ್ಲಂಘನೆ ಸಹಜವೆಂಬಂತಾಯಿತು. ಮನುಷ್ಯ–ಮನುಷ್ಯನ ಮಧ್ಯೆ ಇರಬೇಕಾದ ಜೈವಿಕ ಸಂಬಂಧಗಳಲ್ಲಿ ಉಂಟಾಗಬಹುದಾದ ನಂಬುಗೆ, ವಿಶ್ವಾಸ ಪರಸ್ಪರ ಸಾಮರಸ್ಯ, ದಯೆ, ಮೈತ್ರಿಗಳಿಂದ ಮನುಷ್ಯ ವಂಚಿತನಾದ. ಮಾನವನ ಭೌತಿಕ–ಬೌದ್ಧಿಕ ಚಹರೆಗಳಿಗಿಂತಲೂ ಮಿಗಿಲಾದದ್ದು ಎಲ್ಲರನ್ನೂ ಒಳಗೊಂಡು ಬಾಳುವ ಬದುಕಿನ ಸೊಬಗು ಮತ್ತದರ ಮೌಲ್ಯಗಳು. ಭೌತಿಕ–ಬೌದ್ಧಿಕ ಚಹರೆಗಳು ಯಾವ ರೀತಿಯಲ್ಲೂ ಮಾನವನ ಘನತೆಯನ್ನು ಎತ್ತಿ ಹಿಡಿಯಲಾರವು. ಆದ್ದರಿಂದ ಈ ಚಹರೆಗಳ ಇತಿಮಿತಿಗಳನ್ನು ನಾವು ಒರೆಗೆ ಹಚ್ಚಲೇಬೇಕಾಗಿದೆ. ಏಕೆಂದರೆ ಇವುಗಳೇ ನಮ್ಮನ್ನು ತೀರ್ಮಾನಿಸಿಬಿಡುವಂತಾಗಬಾರದು. ಬದಲಾಗಿ ಅವುಗಳ ವಿವಕ್ಷೆಯಿಂದ ಮರಳಿ ಮಣ್ಣಿನ ಸೊಬಗನ್ನು ನಾವು ಒಪ್ಪಿ ಅಪ್ಪಿಕೊಳ್ಳುವಂತಾಗಬೇಕು.

### ಹಾಗಾದರೆ ನನ್ನ ಹೆಸರು ನಾನೇ?

ನನ್ನ ಹೆಸರನ್ನು ನಾನೆಂದುಕೊಳ್ಳೋಣವೆಂದರೆ, ನನ್ನ ಜನ ನನ್ನನ್ನ ಗುರುತಿಸಿಕೊಳ್ಳುವುದಕ್ಕಷ್ಟೇ ಈ ಹೆಸರು ಇಟ್ಟಿದ್ದಾರೆ ವಿನಃ ಈ ಹೆಸರಲ್ಲಿ ನಾನಿಲ್ಲ. ಇದು ಹೇಗೆಂದರೆ ಸಿಹಿಯ ಅನುಭವ ನೀಡುವ ಬೆಳ್ಳನೆಯ ಸಣ್ಣ ಸಣ್ಣ ಮರಳಿನಂತಿರುವ

ವಸ್ತುರಾಶಿಗೆ 'ಸಕ್ಕರೆ' ಎಂಬ ನಾಮಪದವನ್ನು ಸೂಚಿಸಿದಂತೆ. ಅದಕ್ಕೆ ಸಕ್ಕರೆ ಎಂದು ಹೆಸರಿಸಿದ್ದು ನಾವೇ ಅಲ್ಲವೆ? ಸಕ್ಕರೆ ಎಂಬ ಪದಕ್ಕೂ, ಆ ಪದಕ್ಕೆ ಅನ್ವಯಿಸಿಕೊಂಡ ಪದಾರ್ಥದ ಅನುಭವಕ್ಕೂ ವ್ಯತ್ಯಾಸವಿದೆ. ಪದವೇ ಬೇರೆ, ಪದಾರ್ಥದ ಅನುಭವವೇ ಬೇರೆ. ಪ್ರತಿಕ್ಷಣ ಈ ನಿಸರ್ಗದೊಂದಿಗೆ ಸಂಬಂಧವನ್ನಿಟ್ಟುಕೊಂಡೇ ಸಾಗುತ್ತಿರುವ 'ನಾನು ಎಂಬ ಈ ಜೈವಿಕ ಪದಾರ್ಥದ್ದು' (life substance) ಪ್ರಕೃತಿಗೆ ಬೆಸೆದುಕೊಂಡೇ ಇರುವ ಸಂಬಂಧ. ನಾನು ಎಂಬ ಜೀವದ ಇರುವಿಕೆ ಮತ್ತು ಆಗುವಿಕೆಯಲ್ಲಿ ನನ್ನ ಹೆಸರಿನ ಕುರುಹೇನೂ ಇಲ್ಲ. ನನ್ನ ಹೆಸರು ಮತ್ತು ನನ್ನ ಜೈವಿಕ ಪದಾರ್ಥದ ನಡುವೆ ಯಾವ ನೈಸರ್ಗಿಕ ಸಂಬಂಧವೂ ಇಲ್ಲ. ಭಾಷಾತೀತವಾದ ನನ್ನ ಜೀವಕ್ಕೆ ನನ್ನ ಹೆಸರು ತಿಳಿದೇ ಇಲ್ಲ!

## ನನ್ನ ಉದ್ಯೋಗವು ನಾನೇ?

ನನ್ನ ಜೀವಕ್ಕೆ ಬದುಕಲು ಬೇಕಾದ ಅತ್ಯವಶ್ಯಕತೆಗಳನ್ನು ಒದಗಿಸಲು ನನಗೆ ಉದ್ಯೋಗ ಬೇಕಾಗಿದೆ. ನನ್ನ ಉದ್ಯೋಗದೊಂದಿಗೆ ನನಗಿರುವ ಬದ್ಧತೆ ನನ್ನನ್ನು ಇನ್ನಷ್ಟು ಗಟ್ಟಿಗೊಳಿಸುತ್ತಾ ಸಾಗುತ್ತಿರುತ್ತದೆ ಎಂಬುದರಲ್ಲಿ ಯಾವ ಅನುಮಾನಗಳೂ ಇಲ್ಲ. ಉದ್ಯೋಗ ಎನ್ನುವುದಕ್ಕಿಂತ 'ಕಾಯಕ' ಎನ್ನುವ ಶರಣರ ಪದವೇ ಹೆಚ್ಚು ಸೂಕ್ತ. ಏಕೆಂದರೆ ಉದ್ಯೋಗವು ವ್ಯಕ್ತಿಯ ಶ್ರೇಷ್ಠತೆಯನ್ನು ಪ್ರತಿನಿಧಿಸುತ್ತದೆ. ಕಾಯಕ ಒಂದು ಸಜೀವ ಸಂಬಂಧದಲ್ಲಿ ಅನಿವಾರ್ಯವಾಗುತ್ತದೆ. ಕಾಯಕ ಇಡೀ ಜೀವಸಂಕುಲದ ಇರುವಿಕೆಯನ್ನು ಪೋಷಿಸಿ ಪ್ರೀತಿಸಲ್ಪಡುತ್ತದೆ. ಉದ್ಯೋಗ ಆಳುವ ಪ್ರವೃತ್ತಿಯನ್ನು ಬೆಳೆಸುತ್ತದೆ ಮತ್ತು ಅದು ಸದಾ ಸಮಾಜದ ಮುಂದೆ ಒಂದು ಪ್ರತ್ಯೇಕತೆಯ ಸಿದ್ಧಾಂತವನ್ನು ಮಂಡಿಸುತ್ತಿರುತ್ತದೆ.

ಎಲ್ಲಾ ಜೀವಿಗಳೂ ತಮ್ಮ ಮೂಲಭೂತ ಪರಿತಾಪಗಳನ್ನು ಪೂರೈಸಿಕೊಳ್ಳಲು ಸದಾ ಹೋರಾಟ ಮಾಡಬೇಕಾದ್ದು ಅನಿವಾರ್ಯ. ಜೀವದ ಇರುವಿಕೆಯನ್ನು ಕಾಪಾಡಿಕೊಳ್ಳಲು ಕೊನೆ ಉಸಿರಿನ ತನಕ ಎಲ್ಲಾ ಜೀವಿಗಳು ಸದಾ ಹೋರಾಟ ಮಾಡಲೇಬೇಕು. ಈ ನಿರಂತರ ಹೋರಾಟವು ಇತರೆ ಜೀವಿಗಳಿಗೆ 'ಉದ್ಯೋಗ' ಎನಿಸಿದೆಯೋ ಇಲ್ಲವೋ ಗೊತ್ತಿಲ್ಲ ಆದರೆ ಮನುಷ್ಯನಿಗಂತೂ ಉದ್ಯೋಗವೆಂಬುದು ಅತಿಯಾದ ಕಲ್ಪನೆಗಳನ್ನು ಕಟ್ಟಿಕೊಟ್ಟಿದೆ. ಎಲ್ಲರೂ ಎಲ್ಲಾ ಉದ್ಯೋಗಗಳನ್ನು ಮಾಡಲು ಬಯಸುವುದಿಲ್ಲ. ಮನುಷ್ಯನು ಉದ್ಯೋಗದ ಶ್ರೇಷ್ಠತೆಯನ್ನು ಕಲ್ಪಿಸಿಕೊಂಡು ಉದ್ಯೋಗವನ್ನು ಆಯ್ಕೆ ಮಾಡಿಕೊಳ್ಳುವುದೇ ಹೆಚ್ಚು. ಉದ್ಯೋಗದಲ್ಲಿ ಶ್ರೇಷ್ಠ ಮತ್ತು ಕನಿಷ್ಠ ಎಂಬ ತಾರತಮ್ಯಗಳನ್ನು ನಿಜವೆಂದು ನಂಬಿ, ಅದರ ಬಲೆಗೆ ಸಿಕ್ಕಿ ಮಾನವ ಕುಲ ಅದರಲ್ಲೇ ಪರಿತಪಿಸುತ್ತಿದೆ. ಮಹಾತ್ಮಾ ಗಾಂಧೀಜಿಯವರು ತಮ್ಮ ಸ್ವರಾಜ್ ಸಿದ್ಧಾಂತವನ್ನು ಮಂಡಿಸುವಾಗ 'ಒಬ್ಬ ರಾಷ್ಟ್ರಪತಿಗೆ ಎಷ್ಟು ಗೌರವವಿರುತ್ತದೋ ಚಪ್ಪಲಿ ಹೊಲೆಯುವವನಿಗೂ ಅಷ್ಟೇ ಗೌರವ ಇರಬೇಕಾಗುತ್ತದೆ' ಎನ್ನುತ್ತಾರೆ. ಮನುಷ್ಯನ ಉದ್ಯೋಗ, ಅವನು–ಅವನ ಸಮಾಜ ಮತ್ತವನ ನಿಸರ್ಗದ ಕ್ಷೇಮವನ್ನು ಕಾಪಾಡುವಂತಿರಬೇಕು. ಆಗ ಮಾತ್ರ ಮನುಷ್ಯ ಕುಲ ಗೌರವಕ್ಕೆ ಪಾತ್ರವಾಗುತ್ತದೆಂಬುದು ಗಾಂಧೀಜಿಯ ಉದ್ದೇಶವಾಗಿತ್ತು. ಅವರ ಉದ್ದೇಶ ಇಲ್ಲಿ ನೆರವೇರಲಿಲ್ಲ. ಕಾರಣವೇನೆಂದರೆ ಮೊದಲೇ ಚಾತುರ್ವರ್ಣದಲ್ಲಿ ಬೇಯುತ್ತಿದ್ದ ಭಾರತದ ಜೀವನ ಪದ್ಧತಿಗೆ ಪಾಶ್ಚಾತ್ಯರು ನೀಡಿದ ನಾಗರಿಕತೆಯ ಭ್ರಮೆಯೂ ಸೇರಿ, ಉದ್ಯೋಗಕ್ಕೆ ಶ್ರೇಷ್ಠತೆಯ ಭ್ರಷ್ಟತೆ ತಟ್ಟಿಬಿಟ್ಟಿತು. ಆದರೆ ನಿಸರ್ಗದ ಅಂತಿಮ ನಿರ್ಧಾರ ಹೇಗಿದೆಯೆಂದರೆ ಒಬ್ಬ ರಾಷ್ಟ್ರಪತಿಯಿಂದ ಮೊದಲ್ಗೊಂಡು ಕುರಿ ಕಾಯುವ ಸಾಮಾನ್ಯನವರೆಗೂ ಹಸಿವು, ಬಾಯಾರಿಕೆ, ರೋಗ, ಸಾವುಗಳು ಸಮವಾಗಿವೆ. ಆದ್ದರಿಂದ ಉದ್ಯೋಗ ಶ್ರೇಷ್ಠತೆ ಇಲ್ಲಿ ಕೇವಲ ಭ್ರಮೆ ಎನಿಸಿಬಿಡುತ್ತದೆ. ಮತ್ತೊಂದು ಸತ್ಯ, ಉದ್ಯೋಗವು ನನ್ನನ್ನಷ್ಟೇ ನಚ್ಚಿಕೊಂಡಿಲ್ಲ. ನಿರ್ದಿಷ್ಟ ಉದ್ಯೋಗಕ್ಕೆ ನಿರ್ದಿಷ್ಟ ವ್ಯಕ್ತಿಯೇ ಬೇಕೆಂದೇನೂ ಇಲ್ಲ. ಉದ್ಯೋಗದ ಕುರಿತಾಗಿ ನಮ್ಮ ಜನಪದರಲ್ಲಿ ಒಂದು ಗಾದೆ ಇದೆ 'ಮಗಳನ್ನು ಮಾರಿದರೂ ಬದುಕಿನ ಬವಣೆ ತೀರುತ್ತೆ, ಮಂಕರಿ ಮಾರಿದರೂ ಬದುಕಿನ ಬವಣೆ ತೀರುತ್ತೆ' ಇವೆರಡರಲ್ಲಿ ಯಾವುದು ಉತ್ತಮ? ಮಂಕರಿ ಮಾರುವುದರಲ್ಲಿ ತನಗೂ, ಸುತ್ತಲಿನ ಸಮಾಜಕ್ಕೂ ಉಪಯುಕ್ತತೆ ಇದೆ. ಮನುಷ್ಯ ಪ್ರಜ್ಞೆ ಒಪ್ಪುವ ನೈತಿಕ ಮೌಲ್ಯವೂ ಇದೆ. ನನ್ನ ಜೀವದ ಇರುವಿಕೆಯು ನೈತಿಕತೆಯ ಆಧಾರದಲ್ಲಿ ಗಟ್ಟಿಯಾಗಿ ನೆಲೆಯೂರುತ್ತದೆಯೇ ವಿನಃ ಭ್ರಮೆಗಳ ಮೇಲೆ ಅದು ಕುಸಿದು ಬೀಳಲೇಬೇಕು. ಆದ್ದರಿಂದ ನಾನು ಎಂಬ ಜೈವಿಕ ಪದಾರ್ಥಕ್ಕೆ ನೈತಿಕತೆಯೇ Safety zone. ಪರಿಪೂರ್ಣವಾದ ನೈತಿಕ ಪ್ರಜ್ಞೆಗೆ ಜೀವನ ಕೌಶಲ್ಯ ತಂತಾನೆ ಸ್ವಾಭಾವಿಕವಾಗಿ ಸಂಭವಿಸಬಲ್ಲದು. ಜೀವನ ಕೌಶಲ್ಯವೇ ನಿಜವಾದ ಉದ್ಯೋಗ. ಆ ಕೌಶಲ್ಯವನ್ನು 'ನಾನು' ಮಾಡಿಕೊಳ್ಳಬೇಕೆ ವಿನಃ, ಆ ನನ್ನ Creativity ಯಲ್ಲಿ ನಾನೆಂಬ ಜೈವಿಕ ಪದಾರ್ಥ ಇಲ್ಲ. ನನ್ನ ನಿಮಿತ್ತವಾಗಿ ಅದಿದೆ, ಅಷ್ಟೆ. ಅದರ ನಿಮಿತ್ತವಾಗಿ ನಾನು ಇರಬೇಕೆಂದೇನೂ ಇಲ್ಲ.

ಮುಂದುವರಿಯುವುದು.......